Sri B. P. KADAM.—I am not concerned who are on this side or the other side. I am concerned with the ordinance.

Then, Sir, the Government has stated that the revision of pay scales is a far-reaching step. But, I am sorry to say that it has created more disappointment than before. I stated last time that the pay of the lowest Government servant should not be less than 100 rupees. Here, Sir, the pay that would be given to the future servants of the former Bombay State would be less than what their brethren are getting now because the rate of increments are less. Even now the Dearness Allowance has been cut according to their scales. Sir, I said some time earlier that a Government must be wise enough to have a uniform pay scale. The Government of India is giving almost ten rupees more to a clerk than the Bombay Government. This Government is giving less than what the Bombay Government is giving It would be better that all the State Governments have a uniform, integrated plan with the Government of India whereby there can be uniform pay scales to all the employees. Whether they are employees of the Central Government or the State Government, there should be no discrimination because discrimination always creates frustration and it counts upon the work that is turned out.

Sir, it has been stated that 1,500 primary teachers have been appointed last year. I am not aware of any such thing. I do not know how such a statement could be made. As amatter of fact, for the last one or two years we have been crying out that our district of North Kanara requires about 100 more teachers. The strength of teachers is quite inadequate. One teacher has to meet the needs of 85 students which is impossible. In England the opinion of experts is that one teacher can effectively meet the needs of 22 or 25 students. But, here, in the blessed country of Pandit Nehru, one teacher is made to meet the needs of 80 to 85 students. What he could teach may be well imagined. Therefore, I would request that such superfluous statements may kindly be avoided and steps may be taken to grant more teachers wherever it is necessary. Unless it is done, all the talk about educational reforms is superfluous and the people cannot be fooled for long.

Sir, there has been some talk about the survey of the ports. I wish to point out to the Government that the District of North Kanara has got great potentialities and it has been ignored all the while. We have suggested times without number the taking up of the Hydro-electric project on the river Kali, but there is no mention of this in the Governor's Address. No mention has also been made to start more paper mills for the District of North Kanara as it has the highest bamboo produce in the whole of the country; it has the highest electrical power and again it has the highest mineral resources for the whole of the State if taken districtwise. Therefore, if speedy action is taken, it will not only be in the interests of the

(SRI B. P. KADAM.)

District but it will be in the interests of the State and the country as a whole. I would therefore request the Government to turn its attention for the development of industrial areas in the North Kanara District. With these few words, I resume my seat, Sir.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕಳೆದ ಐದು ವರ್ಷಗಳಿಂದ ಕಾಂಗ್ರೆಸ್ ಸರ್ಕಾರ ಈ ರಾಜ್ಯದಲ್ಲಿ ಏನೇನನ್ನು ಸಾಧಿಸಿದೆಯೆಂಬ ವಿಷಯದ ಬಗ್ಗೆ ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. ಈಗಾಗಲೆ ಮಾನ್ಯ ಭಾಷಣಕಾರರಿಬ್ಬರು ಈ ಸಂದರ್ಭದಲ್ಲಿ ತಮ್ಮ ಒಂದು ಅಸಮಾಧಾನವನ್ನು ಸೂಚಿಸಿದ್ದಾರೆ. ನಾನೂ ಕೂಡ ಈ ಭಾಷಣದಲ್ಲಿ ಸರ್ಕಾರದವರು ಮಾಡದೆ ಅಸಮರ್ಥರಾಗಿರತಕ್ಕಂಥ ಮತ್ತು ತಾವು ಮಾಡಿದ ಕೆಲಸದಲ್ಲಿ ಸಾಕಷ್ಟು ತೃಪ್ತಿಕರವಾಗಿ ಮಾಡದೆ ಇರತಕ್ಕ ಅನೇಕ ವಿಷಯಗಳನ್ನು ಕೈಬಿಟ್ಟಿದ್ದಾರೆಂಬುದನ್ನು ಪ್ರಸ್ತಾಪ ಮಾಡುವವನಾಗಿದ್ದೇನೆ ಮೊದಲನೆಯ ಪಂಚವಾರ್ಷಿಕ ಯೋಜನೆಯನ್ನು ಬಹಳ ಯಶಸ್ವಿಯಾಗಿ ನೆರವೇರಿಸಿರುವುದಾಗಿ ಅವರು ಭಾಷಣದಲ್ಲಿ ಹೇಳಿದ್ದಾರೆ. ಆದರೆ ನಮ್ಮ ದೇಶದಲ್ಲಿ ತಾಂಡವವಾಡುತ್ತಿರುವ ನಿರುದ್ಯೋಗವನ್ನು ಪರಿಹಾರ ಮಾಡುವುದಕ್ಕೆ ಯಾವ ಯೋಜನೆಯೂ ಇಲ್ಲ; ಅದನ್ನು ತಯಾರಿಸಲು ಸರ್ಕಾರ ಸಿದ್ಧವಾಗಿಲ್ಲ.

ಇನ್ನು ಆಹಾರಪದಾರ್ಥಗಳ ಬೆಳೆಯ ವಿಷಯದಲ್ಲಿ ಬಹಳವಾಗಿ ಹೇಳಿಕೊಂಡಿದ್ದಾರೆ. ಹನ್ನೊಂದು ಲಕ್ಷ ಟನ್‌ನಷ್ಟು ಹೆಚ್ಚು ಬೆಳೆ ಬಂತೆಂದು ಹೇಳಿದ್ದಾರೆ. ಇದು, ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ಹೇಳಿದ ಹಾಗೆ, ಕಾಗದದ ಮೇಲೆ ಮಾತ್ರ ತೋರಿಸಿರುವ ವಿಷಯ! ಇದು ಆಹಾರಪದಾರ್ಥಗಳನ್ನು ಕೊಂಡು ತಿನ್ನುವ ಎಲ್ಲರಿಗೂ ನಿತ್ಯವೂ ವೇದ್ಯವಾಗತಕ್ಕ ಅಂಶ; ಯಾರಿಗೂ ಹೇಳಿಕೊಡಬೇಕಾಗಿಲ್ಲ. ಈ ದಿವಸ ಮೈಸೂರು ರಾಜ್ಯದ ಆಹಾರ ಪರಿಸ್ಥಿತಿಯನ್ನು ಯಾರಾದರೂ ಮನಗಂಡಿದ್ದರೆ ಈ ಐದು ವರ್ಷಗಳಲ್ಲಿ ಕಾಂಗ್ರೆಸ್ ಸರ್ಕಾರದವರು ಎಷ್ಟು ನಮ್ಮ ಆಹಾರದ ಅಭಾವವನ್ನು ಹೋಗಲಾಡಿಸಿದ್ದಾರೆ, ನಮ್ಮ ದೇಶದಲ್ಲಿ ಎಷ್ಟು ಬೆಳೆ ಹೆಚ್ಚಾಗಿ ಬೆಳೆದಿದೆ ಎಂಬುದು ಚೆನ್ನಾಗಿ ಅವರಿಗೆ ಗೊತ್ತಾಗುತ್ತದೆ. ಈಗ ಬೆಂಗಳೂರಿನಲ್ಲಿ ಒಂದು ಪಲ್ಲಾ ಅಕ್ಕಿಗೆ 80 ರೂಪಾಯಿಗಳಿರಬೇಕು, ನಮ್ಮ ಕಡೆ ಒಂದು ಪಲ್ಲ ಬತ್ತಕ್ಕೆ $25\frac{1}{2}$ ರೂಪಾಯಿಗಳ ಬೆಲೆಯಿದೆ. ಆದರೆ ಈಗಾಗಲೆ ಧಾನ್ಯಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಬೆಳೆದಿರುವ ರೈತನ ಕೈಬಿಟ್ಟು ಸಾಗಿಹೋಗಿವೆ. ರೈತರು ತಮ್ಮ ಉಪಯೋಗಕ್ಕೂ ಸಹ ಇಟ್ಟುಕೊಳ್ಳದೆ ಬೀಜದ ಬತ್ತವನ್ನೂ ಕೂಡ ಮಾರಿಕೊಂಡಿರುವ ಅನೇಕ ಸಂದರ್ಭಗಳಿವೆ. ಹೀಗಾಗಿ ಬೆಳೆದುದೆಲ್ಲಾ ಈಗಾಗಲೆ ವ್ಯಾಪಾರಿಗಳ ಉಗ್ರಾಣವನ್ನು ಸೇರಿದೆ. ಈಗ ಮಾರ್ಚಿ ತಿಂಗಳ ಮಧ್ಯಭಾಗದಲ್ಲಿರುವುದರಿಂದ ಇನ್ನು ಮುಂದಿನ ಸುಗ್ಗಿ ಬರಬೇಕಾದರೆ ಸುಮಾರು ಹತ್ತು ತಿಂಗಳು ಬೇಕು. ಈ ಕಾಲದಲ್ಲಿ ಸಾಕಾದಷ್ಟು ಹೊಟ್ಟೆಗೆ ಇಟ್ಟುಕೊಳ್ಳದೆ ಮಾರಿರುವ ರೈತರು ಮತ್ತು ಕೊಂಡು ತಿಂದು ಜೀವನ ಮಾಡುವ ಇತರ ಜನರು ಯಾವ ರೀತಿ ಜೀವನವನ್ನು ಸಾಗಿಸಿಕೊಂಡು ಹೋಗುತ್ತಾರೆಂಬುದು ಬಹಳ ಗಂಭೀರವಾದ ಒಂದು ಪ್ರಶ್ನೆಯಾಗಿದೆ. ಯಾವುದೇ ಒಬ್ಬ ಜವಾಬ್ದಾರಿ ಮನುಷ್ಯ ಈ ವಿಷಯದ ಬಗ್ಗೆ ಲಘುವಾಗಿ ಮಾತನಾಡಲಾರ. ಆದರೂ ಅನಿವಾರ್ಯವೆಂಬಂತೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸರ್ಕಾರದವರ ಪರವಾಗಿ ಒಂದು ರೀತಿಯಾಗಿ ಶಿಫಾರಸು ಮಾಡಿರುವುದು ಬಹಳ ವಿಷಾದದ ಸಂಗತಿ. ಈರೀತಿಯಾಗಿ ತಪ್ಪನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡಬಾರದು; ಮಾಡಿದರೆ ಅದರಿಂದ ಎಲ್ಲರಿಗೂ ಅಪಾಯ; ಬರೀ ಕಾಂಗ್ರೆಸ್ ಸರ್ಕಾರಕ್ಕೇ ಮಾತ್ರವಲ್ಲ, ದೇಶಕ್ಕೇ ಅಪಾಯ. ವಸ್ತುಸ್ಥಿತಿಯನ್ನು ಯಾವಾಗಲೂ ಕಣ್ಣು ಮುಂದಿಡಬೇಕು. ಸರ್ಕಾರಿ ಯೋಜನೆ ಎಷ್ಟರ ಮಟ್ಟಿಗೆ ಸಫಲವಾಗಿದೆ, ಎಷ್ಟು ಹೇಗೆ ಖರ್ಚುಮಾಡಲಾಗಿದೆ, ಯೋಜನೆ ಕಾರ್ಯಗತವಾಗಿ ಜನತೆಗೆ ಅದರಿಂದ ಪ್ರತಿಫಲವುಂಟಾಗಿದೆಯೆ ಎಂಬುದನ್ನು ಹೊರಗೆಡವಬೇಕು. ಇದು ಧೈರ್ಯದ ಕೆಲಸ ಮತ್ತು ಸತ್ಯವನ್ನು ಆಚರಿಸಿ ತೋರಿಸುವುದು ಬಹಳ ಒಳ್ಳೆಯದು. ಆಹಾರ ಪರಿಪೂರ್ಣತೆ ವಿಷಯದಲ್ಲಿ ರಾಜ್ಯಪಾಲರೇನು ಹೇಳಿದ್ದಾರೋ. ಆ ಮಾತು ತೀರ ಸತ್ಯಕ್ಕೆ ದೂರವಾದ ಮಾತು. ಪರಿಸ್ಥಿತಿ ಉತ್ತಮಗೊಂಡಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಮೂರನೆಯದಾಗಿ, ಬಹಳ ಮುಖ್ಯವಾಗಿ ನಮ್ಮ ದೇಶದಲ್ಲಿ ಆಗಬೇಕಾಗಿದ್ದ ರೈತನ ಸುಧಾರಣೆ, ಎಲ್ಲಕ್ಕಿಂತ ಹೆಚ್ಚಾಗಿ ರೈತನಿಗೆ ಭೂಮಿಯನ್ನು ದೊರಕಿಸಬೇಕಾದ ಒಂದು ಸುಧಾರಣೆ ಕಾನೂನು ಮತ್ತು ಉಳುಮೆ ಮಾಡುವ ರೈತನಿಗೆ ಭೂಮಿಯ ಒಡೆಯರಿಂದ ಯಾವ ದೌರ್ಜನ್ಯವೂ ನಡೆಯದಿರುವ ಹಾಗೆ ರಕ್ಷಣೆ ಕೊಡುವ ಕಾನೂನು ಆಗಬೇಕಾಗಿದೆ. ಈ ವಿಚಾರದಲ್ಲಿ ಮುಂಬಯಿನಲ್ಲಿ ಬಹಳ ಪ್ರಯತ್ನ ನಡೆದಿದೆ, ಹೆಚ್ಚು ಸಾಧಿಸಿದ್ದಾರೆ. ಮೈಸೂರು ರಾಜ್ಯದೊಡನೆ ಹೊರ ಕನ್ನಡ ಪ್ರಾಂತ್ಯಗಳು ಸೇರಬೇಕೆಂದು ನಾವು ಅನೇಕವಾಗಿ ಪ್ರಯತ್ನಪಟ್ಟು ಅಪ್ಪಗಳನ್ನು ಪಡೆದುಕೊಂಡುದಾಯಿತು. ಈ ದಿವಸ ಕರ್ಣಾಟಕ ರಾಜ್ಯವಾಗಿದೆ. ಮುಂಬಯಿ ಕರ್ಣಾಟಕದಿಂದ ಶ್ರೀಮಾನ್ ಎಸ್. ಆರ್. ಕಂಠಿಯವರು ನಮ್ಮಲ್ಲಿಗೆ ಬಂದಿರುವುದು ನಮಗೆ ವರ ದೊರಕಿದಂತಾಯಿತು; ಆದರೆ ಶ್ರೀಮಾನ್ ಪಾಟೀಲ್‌ರವರು ಬಂದುದು ನಮ್ಮ ಕರ್ಣಾಟಕದ ರೈತರಿಗೆ ಒಂದು ಶಾಪ ಕೊಟ್ಟಹಾಗಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಶ್ರೀ ಪಾಟೀಲರು ಕಳೆದ ಆರು ತಿಂಗಳಿಂದಲೂ ಒಂದೇಸಮ ಹಗಲಿರುಳೂ ಪ್ರಯತ್ನಪಡುತ್ತಿದ್ದಾರೆ; ಇನಾಂದಾರರು, ಜಮೀನುದಾರರು, ಜಹಗೀರುದಾರರು—ಇವರ ಹಿತರಕ್ಷಣೆ ಕನ್ನಡ ರಾಜ್ಯದಲ್ಲಿ ಮಾಡುವ ಬಗೆ ಹೇಗೆಂದು ಯೋಚನೆ ಮಾಡುತ್ತಿದ್ದಾರೆ. ಆದರೆ ಕಾಲಾವಕಾಶ ಸಾಲಲಿಲ್ಲ. ರೈತರಿಗೆ ಓಟು ಕೊಡುವಾಗ ಈ ವಿಚಾರ ಗೊತ್ತಾಗಲಿಲ್ಲ. ಇದರಿಂದ ಮಾನ್ಯ ಮಂತ್ರಿಗಳಿಗೆ ಅನುಕೂಲವಾಯಿತು. ಚುನಾವಣೆ ಮುಗಿಯುವವರೆಗೂ ಸುಮ್ಮನಿದ್ದು ಈಗ ಕರ್ಣಾಟಕದ ರೈತರಿಗೆ ಸರ್ಕಾರ ಕೊಟ್ಟಿರುವ ಕೊಡುಗೆ ಏನೆಂದರೆ ನಾಲ್ಕು ಸುಗ್ರೀವಾಜ್ಞೆಗಳು. ಇದರಿಂದ ಅವರು ರೈತರ ಎದೆಗೆ ನೇರವಾಗಿ ಗುಂಡಿಟ್ಟ ಹಾಗಾಯಿತು. ಈ ಆಜ್ಞೆಗಳನ್ನು ಚುನಾವಣೆಗೆ ಇಳಿಯುವುದಕ್ಕೆ ಮುಂಚೆ ಮಾಡಿದ್ದರೆ ಬಹುಶಃ ಶ್ರೀಮಾನ್ ಪಾಟೀಲರು ಈ ಸಭೆಗೆ ಮತ್ತೆ ಬರುತ್ತಿರಲಿಲ್ಲ. ಅವರು ಈ ದಿವಸ ಈ ಆಜ್ಞೆಗಳನ್ನು ಹೊರಡಿಸಿದ್ದಾರೆ, ಇದಕ್ಕೆ ಬಹಳ ಒಳ್ಳೆಯ ಕಾರಣವನ್ನು ಕೊಟ್ಟಿದ್ದಾರೆ. ಹೈದರಾಬಾದು, ಮುಂಬಯಿ ಕರ್ಣಾಟಕ, ಕೊಡಗು, ಮಂಗಳೂರು ಈ ಭಾಗಗಳು ಯಾವುವು ಸೇರಿ ಮೈಸೂರು ರಾಜ್ಯವೇರ್ಪಟ್ಟಿದೆಯೋ ಆ ರಾಜ್ಯದಲ್ಲಿ ಸಮಂಜಸವಾಗಿ ಎಲ್ಲರಿಗೂ ಅನ್ವಯಿಸುವ ಒಂದು ಕಾನೂನನ್ನು ಜಾರಿಗೆ ತರಬೇಕೆಂದು ಹೀಗೆ ಮಾಡಿದ್ದೇ

ವೆಂದು ಹೇಳಿದ್ದಾರೆ. ಅವಮೇಲೆ "ಒಕ್ಕಲುಗಳೇ ಆಗಲಿ ಅಥವಾ ಜಮೀನು ಮಾಲೀಕರೇ ಆಗಲಿ ಅನುಚಿತವಾದ ಯಾವ ಲಾಭವನ್ನೂ ಹೊಂದದಂತಾಗುವುದು ಅವಶ್ಯಕವಾಗಿದೆ." ಎಂದು ಹೇಳಿದ್ದಾರೆ. ಒಕ್ಕಲುಗಳು ಅನುಚಿತವಾದ ಲಾಭ ಹೊಂದಲು ಹೇಗೆ ಸಾಧ್ಯ? ಕಾಲವಶದಿಂದ ಅವರು ಗುಲಾಮರಾಗಿದ್ದರೆ ಗುಲಾಮಗಿರಿಯಿಂದ ಅವರನ್ನು ಬಿಡಿಸುವುದು ಅನುಚಿತವೆ? ರೈತರಿಗೆ ಜೀವನಕ್ಕೆ ಅನುಕೂಲವಿಲ್ಲದೆ ವ್ಯವಸಾಯ ಮಾಡಿ ಜೀವನ ನಡೆಸುತ್ತಿದ್ದರೆ ಅನುಚಿತವಾಗಿ ಏನು ತಾನೆ ಲಾಭ ಬಂದೀತು? ಸಾವಿರಾರು ರೂಪಾಯಿಗಳನ್ನು ಬ್ಯಾಂಕಿನಲ್ಲಿಟ್ಟು ವ್ಯವಹಾರ ಮಾಡುತ್ತಾ ಹತ್ತಾರು ಕಂಪೆನಿಗಳಲ್ಲಿ ಡೈರೆಕ್ಟರಾಗಿದ್ದು ಸಾವಿರಾರು ಎಕರೆ ಭೂಮಿಯನ್ನಿಟ್ಟುಕೊಂಡಿರುವ ಮನುಷ್ಯನಿಗೆ ಪರಿಹಾರ ಕೊಡದೆ, ಹೆಚ್ಚಿನ ಸೌಕರ್ಯ ಮಾಡದೆ ವ್ಯವಸಾಯದಿಂದಲೇ ಜೀವನ ನಡೆಸುವ ರೈತರಿಗೆ ಕೊಡುವ ಸೌಲಭ್ಯವು ಅನುಚಿತವೆ? ಇದು ಸೋಷಿಯಲಿಸ್ಟಿಕ್ ಪ್ಯಾಟರ್ನ್ ಸಮಾಜ ರಚಿಸುವ ಕ್ರಮ ಅಥವಾ ಮಾರ್ಗವೆ ಎಂದು ಪ್ರಶ್ನೆ ಮಾಡಬೇಕಾಗಿದೆ. ಜಮೀನುದಾರರ ಹಿತರಕ್ಷಣೆಗಿಂತ ರೈತರ ಹಿತರಕ್ಷಣೆಗೆ ಹೆಚ್ಚು ಗಮನ ಕೊಡಬೇಕಾದ್ದು ಅವಶ್ಯಕ.

ಇನ್ನು ರೈತರು ಭೂಮಿಯನ್ನು ಪಡೆಯಬೇಕಾದರೆ ಎಷ್ಟು ಕಷ್ಟಪಡಬೇಕಾಗುತ್ತದೆ ಎಂಬುದನ್ನು ಸರಕಾರದ ಗಮನಕ್ಕೆ ತರಬಯಸುತ್ತೇನೆ. ಆಡಳಿತದಲ್ಲಿ ಲಂಚರುಷುವತ್ತುಗಳನ್ನು ನಿಲ್ಲಿಸಿ ಸುಧಾರಣೆ ಮಾಡಲಾಗಿದೆ ಎಂದು ಹೇಳಿದ್ದಾರೆ. ದುಡ್ಡು ತೆಗೆದುಕೊಳ್ಳುವದೊಂದೇ ಲಂಚವೇ? ರೈತರು ಬರೆದು ಕಳಿಸಿದ ಕಾಗದಗಳಿಗೆ ಉತ್ತರವೇ ಬರುವುದಿಲ್ಲ. ಹೀಗೆ ಉತ್ತರ ಕೊಡದೇ ಇರುವದು ಅನ್ಯಾಯವಲ್ಲವೆ? ಸರಕಾರದಲ್ಲಿ ಏನಾದರೂ ಕೆಲಸವಾಗಬೇಕಾದರೆ ಕಾಂಗ್ರೆಸ್ ಮುಂಖಡರೊಬ್ಬರನ್ನು ಹಿಡಿದು, ಅವರ ಸಹಾಯದಿಂದ ಮಂತ್ರಿಯವರನ್ನು ಕಂಡು ಹೇಳಿಕೊಂಡಾಗಲೇ ಏನಾದರೂ ಕೆಲಸವಾಗುವದು. ಕಾಂಗ್ರೆಸಿನವರ ಕೃಪಾಕಟಾಕ್ಷವಿಲ್ಲದೇ ಯಾವ ಕೆಲಸವೂ ಸುಲಭವಾಗಿ ಆಗುವುದಿಲ್ಲ. ಅಧಿಕಾರಿಗಳ ಮೇಲೆ ವರ್ಚಸ್ಸು ಉಪಯೋಗಿಸುವುದು ಕರಪ್ಷನ್ ಮಾಡಿದಂತಾಗುವದಿಲ್ಲವೇ? ಎಂಟು ಆಣೆ ಲಂಚ ಕೊಟ್ಟರೆ ಅಷ್ಟೇ ಕರಪ್ಷನ್ ಆಗುವದಿಲ್ಲ. ಆಡಳಿತೆಯ ಸುಧಾರಣೆಯು ಆಗಬೇಕಾದರೆ ಯಾವದೇ ರೀತಿಯ ಲಂಚರುಷುವತ್ತು ಇರಕೂಡದು. ರೈತರ ಅರ್ಜಿಗಳಿಗೆ ಸಕಾಲದಲ್ಲಿ ಉತ್ತರವು ಕಾಂಗ್ರೆಸ್ ಸರಕಾರವು ಇದ್ದಾಗ ದೊರೆತಿದೆಯೇ? ಲಂಚರುಷುವತ್ತು ಇಲ್ಲದೆ ಜನರಿಗೆ ನ್ಯಾಯವು ದೊರೆಯುತ್ತಿದೆ ಎಂದು ಯಾರು ಒಪ್ಪಲಾರರೆಂದು ಖಂಡಿತವಾಗಿ ಹೇಳುತ್ತೇನೆ. ಕಾಂಗ್ರೆಸ್ ಪಕ್ಷವೇ ಸರಕಾರಿ ಪಕ್ಷ ಎಂದು ಪ್ರಚಾರ ಮಾಡುತ್ತಾರೆ. ಕಾಂಗ್ರೆಸ್ಸಿಗೆ ಓಟು ಕೊಡದಿದ್ದರೆ ಸರಕಾರದ ವಿರುದ್ಧ ಹೋದಂತೆ ಎಂದು ಜವಾನರಿಂದ ಮಂತ್ರಿಯವರಿಗೆ ಸಾಬೀತು ಮಾಡುತ್ತಾ ಹೋಗುತ್ತಾರೆ. ಇದಕ್ಕಿಂತ ಅನೀತಿ ಬೇರೆ ಇದೆಯೇ? ಇದಕ್ಕಿಂತ ಹೆಚ್ಚಿನ ಅನೀತಿ ಸಾಧ್ಯವೇ?

ಪುನರ್ರಚಿತವಾದ ಮೈಸೂರು ರಾಜ್ಯದಲ್ಲಿ ಸರ್ಕಾರಿ ನೌಕರರ ಸಂಬಳ ಸಾರಿಗೆಯ ಬಗ್ಗೆ ಪ್ರಸ್ತಾಪಿಸಿ ಈ ರೀತಿಯಾಗಿ ಹೇಳಿದ್ದಾರೆ. ರಾಜ್ಯಗಳ ಪುನರ್ವಿಂಗಡಣೆಗೆ ಸಂಬಂಧಪಟ್ಟ ಆಕ್ಟಿನ ನಿಯಮಗಳಿಗನುಸಾರವಾಗಿ, ಸರ್ವಿಸಿನಲ್ಲಿರುವ ಎಲ್ಲ ನೌಕರರಿಗೂ ಅವರ ಈಗಿನ ಸಂಬಳಗಳ ಸ್ಕೇಲುಗಳನ್ನು ಉಳಿಸಿಕೊಳ್ಳಲು ಇಲ್ಲವೆ ಹೊಸ ಸಂಬಳದ ಸ್ಕೇಲುಗಳನ್ನು ಒಪ್ಪಿಕೊಳ್ಳಲು ಅವಕಾಶ ಕೊಡಲಾಗಿದೆ. ಈ ರೀತಿಯಾಗಿರುವುದರಿಂದ ಹೊಸ ಸ್ಕೇಲುಗಳನ್ನು ಒಪ್ಪಿಕೊಂಡರೂ ಸರ್ಕಾರಿ ನೌಕರರಿಗೆ ಹೆಚ್ಚಿನ ಲಾಭವಾಗುವದಿಲ್ಲ. ಸರ್ಕಾರಿ ನೌಕರರ ಸಂಬಳ ಸಾರಿಗೆಯ ಸುಧಾರಣೆ ಮಾಡಿದ್ದೇವೆ ಎಂದು ಹೆಮ್ಮೆಪಡುತ್ತಿದ್ದರೂ ಸಹ ಸ್ಥಳೀಯ ಸಂಸ್ಥೆಯಲ್ಲಿಯ ನೌಕರರ ಸಂಬಳ ಸಾರಿಗೆಯ ಸುಧಾರಣೆ ಮಾಡಿಲ್ಲ. ಸ್ಥಳೀಯ ಸಂಸ್ಥೆಯಲ್ಲಿಯ ನೌಕರರಿಗೆ ಹೆಚ್ಚು ಸಂಬಳ ಕೊಡಬೇಕು. ಈ ವಿಷಯವನ್ನು ಪರಿಶೀಲನೆ ಮಾಡಲಾಗುತ್ತಿದೆ ಎಂದು ಹೇಳಲಾಗಿದೆ. ಏಕೆಂದರೆ ಸ್ಥಳೀಯ ಸಂಸ್ಥೆಯಲ್ಲಿ ಕೆಲಸ ಮಾಡುವ ನೌಕರರು ಸರಕಾರೀ ನೌಕರರು ಎಂದು ಪರಿಗಣಿಸಲ್ಪಡದೇ ಇದ್ದ ಮೂಲಕ ಈಗ ಕೊಟ್ಟಿರುವ ಹೊಸ ಸ್ಕೇಲುಗಳು ಅವರಿಗೆ ಅನ್ವಯಿಸುವದಿಲ್ಲವಂತೆ. ಕಡಮೆ ಸಂಬಳವಿರುವ ಶಾನುಭೋಗರು, ಪಟೇಲರು ಸರ್ಕಾರದ ರೆವೆನ್ಯೂ ಕಲೆಕ್ಟರು ಮಾಡುವುದಿಲ್ಲವೇ? ಅವರಿಗೆ ದೊರೆಯುವ 7—10 ರೂಪಾಯಿ ಕಡಮೆ ಸಂಬಳದಲ್ಲಿ ಜೀವನವನ್ನು ಹೇಗೆ ನಡೆಸಬೇಕು. ಸಂಬಳವನ್ನು ಹೆಚ್ಚಿಸಿಕೊಳ್ಳುವುದರ ಸಲುವಾಗಿ ಅವರೆಲ್ಲರೂ ಮುಷ್ಕರ ಹೂಡುವ ಪರಿಸ್ಥಿತಿಯು ಬಂದಿದೆ. ಅದಕ್ಕೆ ಕಾರಣವೇನೆಂದರೆ, ಅವರೆಲ್ಲರೂ ತೃಪ್ತರಾಗಿಲ್ಲ. ಅವರು ತೃಪ್ತರಾಗಬೇಕಾದರೆ ಅವರಿಗೆ ಕನಿಷ್ಠ ಪಕ್ಷ ಜೀವನಕ್ಕೆ ವೇತನವನ್ನಾದರೂ ಕೊಡುವಂತೆ ಮಾಡುವದು ಅವಶ್ಯಕ.

ಸ್ವಾಮಿ, ಕೊನೆಯದಾಗಿ ಇನ್ನೊಂದು ಮಹತ್ವದ ವಿಷಯವನ್ನು ಪ್ರಸ್ತಾಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಇಲ್ಲಿಯವರೆಗೆ ಕಳೆದ ಐದು ವರುಷ ಈ ಮಾನ್ಯ ಸಭೆಯಲ್ಲಿದ್ದ ಸದಸ್ಯರುಗಳಿಗೆ ಇದೇ ಕೊನೆಯ ಅಧಿವೇಶನವಾಗಿದೆ. ಈಗ ಇರುವ ಅನೇಕ ಸದಸ್ಯರು ಹಿಂತಿರುಗಿ ಬಾರದೇ ಇರುವುದರಿಂದ ಇನ್ನು ಮುಂದೆ ಹೆಚ್ಚಿನ ಸೇವೆ ಸಲ್ಲಿಸಲು ಅಂಥವರಿಗೆ ಅವಕಾಶವಿಲ್ಲ. ಮೊನ್ನೆ ತಾನೆ ಆದ ಚುನಾವಣೆಯಲ್ಲಿ ನಮ್ಮಲ್ಲಿ ಅನೇಕರಿಗೆ ಮತದಾರರು ಓಟು ಕೊಡದೆ ವಾಪಸ್ ಕರೆಸಿಕೊಂಡಿದ್ದರಿಂದ ಗಂಭೀರವಾಗಿ ಮನೆಗೆ ಹೋಗಬೇಕಾಗಿದೆ. ಪ್ರಜಾಪ್ರಭುತ್ವದ ನಿಯಮಗಳಿಗೆ ಅನುಸಾರವಾಗಿ ಮತದಾರರು ಕೊಟ್ಟಿರುವ ನಿರ್ಣಯಕ್ಕೆ ತಲೆಬಾಗಿ ಒಪ್ಪಬೇಕಾಗಿದೆ. ಈ ಸನ್ನಿವೇಶದಲ್ಲಿ ನಮ್ಮ ಮೇಲೆ ಏನೂ ಜವಾಬುದಾರಿಯು ಉಳಿದಿಲ್ಲ. ಹೊಸದಾಗಿ ಚುನಾವಣೆಯಲ್ಲಿ ಆರಿಸಿಬಂದು ಇನ್ನು ಮುಂದೆ ಈ ಸಭೆಯಲ್ಲಿ ಕುಳಿತುಕೊಳ್ಳತಕ್ಕಂಥ ಸದಸ್ಯರ ಮೇಲೆ ಹೆಚ್ಚಿನ ಜವಾಬುದಾರಿಯು ಇದೆ. ಕಳೆದ ಹತ್ತು ವರುಷ ಕಾಲ ಆಡಳಿತವನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದೀರಿ. ಮುಂದಿನ ಐದು ವರ್ಷಗಳಲ್ಲಿ ಭವಿಷ್ಯದ ಬಹುಭಾಗ ನಿರ್ಧಾರವಾಗುತ್ತದೆ. ಪರಿಸ್ಥಿತಿ ಇದೇರೀತಿ ಮುಂದುವರೆದರೆ ಕ್ರಾಂತಿಯಾಗಬಹುದು. ಇದೇ ಶಾಂತ ಪರಿಸ್ಥಿತಿಯು ಮುಂದೆಯೂ ಇರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಈ ಸಭೆ ಮುಂದೆ ಜವಾಬ್ದಾರಿಯಿಂದ ಜನಹಿತ ಕಾಯಿದೆಗಳನ್ನು ಮಾಡಿ ಜನತೆಗೆ ನ್ಯಾಯ ಹಾಗೂ ನಿಷ್ಪಕ್ಷಪಾತವಾದ ಆಡಳಿತ ಒದಗಿಸಿ ಕೊಡಬೇಕಾಗಿದೆ.

ಕಳೆದ ಐದು ವರುಷಗಳಲ್ಲಿ ನಾವು ಹೆಚ್ಚೇನೂ ಸಾಧಿಸಲು ಸಾಧ್ಯವಾಗಲಿಲ್ಲ. ನಮ್ಮಿಂದ ಜನತೆ ಬಹಳ ನಿರೀಕ್ಷಿಸಿತ್ತು. ಜನತೆಯು ನಿರೀಕ್ಷಿಸಿದಷ್ಟು ಕೆಲಸ ಕಾರ್ಯಗಳು ಆಗದೇ ಇದ್ದರೂ ಕೆಲವು ಅತಿ ಮಹತ್ವದ ಸುಧಾರಣೆಗಳು ಆಗಿವೆ. ಅವುಗಳಲ್ಲಿ ಪ್ರಾಮುಖ್ಯವಾದವುಗಳು ಎಂದರೆ ಚಿನ್ನದ ಗಣಿಯ ರಾಷ್ಟ್ರೀಕರಣ, B.T.C. ರಾಷ್ಟ್ರೀಕರಣ. ಗೇಣಿ ಶಾಸನವನ್ನು ರಚಿಸಿದ್ದೇವೆ—ಹಾವೂ ಸಾಯಬಾರದು, ಕೋಲೂ ಮುರಿಯಬಾರದು—ರೀತಿಯಲ್ಲಿ ಈ ಶಾಸನ ರಚಿಸಿ

(ಶ್ರೀ ಎಸ್. ಗೋಪಾಲ ಗೌಡ.)

ಅದರಿಂದ ಯಾರಿಗೂ ಉಪಯೋಗವಾಗಿಲ್ಲ. ಅಂಥ ಕಾನೂನನ್ನು ರಚಿಸಿ ಶ್ರೀ ಕಡಿದಾಳ್ ಮಂಜಪ್ಪನವರು ಕೀರ್ತಿ ಸಂಪಾದಿಸಿದ್ದಾರೆ. ಜನತೆ ಕಾಂಗ್ರೆಸ್ಸಿನ ಚುನಾವಣೆ ಘೋಷಣೆಯನ್ನು ನೋಡಿ ಓಟು ಕೊಟ್ಟಿಲ್ಲ. ಹೆಸರು, ಹಣ, ಚುನಾವಣೆ ವೈಖರಿ ಸರಕಾರದ ದುರುಪಯೋಗಗಳಿಂದ ಅವರಿಗೆ ಓಟುಗಳು ಬಂದಿವೆ. ಈ ಸಭೆಯಲ್ಲಿ ಇನ್ನು ಮುಂದೆ ಬರತಕ್ಕಂಥ ಸದಸ್ಯರುಗಳು ಹೆಚ್ಚಿನ ಜವಾಬುದಾರಿಯನ್ನು ಸಿನಿರ್ವಹಿಕೊಂಡು ದೇಶಕ್ಕೆ ಹೆಚ್ಚಿನ ಸೇವೆಯನ್ನು ಸಲ್ಲಿಸುತ್ತಾರೆಂದು ತಿಳಿದುಕೊಂಡು ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

2-30 P.M.

*ಶ್ರೀ ಎ. ವಿ. ನರಸಿಂಹ ರೆಡ್ಡಿ (ಬೆಂಗಳೂರು ದಕ್ಷಿಣ).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರು ವಿಧಾನಮಂಡಲದ ಸದಸ್ಯರನ್ನು ಕುರಿತು ಮಾಡಿದ ಭಾಷಣಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಲು ಮಾನ್ಯ ಸದಸ್ಯರಾದ ಶ್ರೀ ಹುಚ್ಚಮಾಸ್ತಿಗೌಡರವರು ಮಂಡಿಸಿದ ವಂದನಾರ್ಪಣೆಯ ಸೂಚನೆಯನ್ನು ಪುಷ್ಟೀಕರಿಸುತ್ತ ಒಂದೆರಡು ಮಾತುಗಳನ್ನು ಹೇಳಬೇಕೆಂದು ಬಯಸುತ್ತೇನೆ. ಈ ನಿರ್ಣಯವನ್ನು ಕುರಿತು ತಿದ್ದುಪಡಿಗಳನ್ನು ಸೂಚಿಸಿ ಮೂವರು ವಿರೋಧಪಕ್ಷದ ಸದಸ್ಯರು ಭಾಷಣಮಾಡಿದ್ದಾರೆ. ನಮ್ಮ ಸಂಸ್ಥಾನದಲ್ಲಿ ಯಾವದೇ ಕಾರ್ಯವನ್ನು ಯಶಸ್ವಿಯಾಗಿ ಮಾಡದೇ ಹೋಗಿದ್ದರೆ, ವಿರೋಧಪಕ್ಷದ ಸದಸ್ಯರು ಅದನ್ನು ಟೀಕಿಸಿ ಭಾಷಣಮಾಡಬಹುದು. ಆದರೆ ಇಲ್ಲಿಯವರೆಗೆ ವಿರೋಧ ಪಕ್ಷದವರು ಸೂಚಿಸಿದ ಸಲಹೆ ಸೂಚನೆಗಳನ್ನು ಮೆಚ್ಚಿ ದೇಶದ ಆಡಳಿತದ ಕೆಲಸವನ್ನು ಹೆಚ್ಚು ಪ್ರೀತಿ ವಾತ್ಸಲ್ಯದಿಂದ ಕಾಂಗ್ರೆಸ್ಸಿನವರು ನಡೆಸಿಕೊಂಡು ಬಂದಿದ್ದಾರೆಂದು ಹೇಳಬೇಕಾಗಿದೆ. ಹೀಗೆ ಈಗ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪಮಾಡಿರತಕ್ಕದ್ದು ಅಭಿನಂದನಾರ್ಹವಾದುದು. ಅಲ್ಲದೆ ಹಿಂದಿನ ಐದು ವರ್ಷಗಳಲ್ಲಿ ಇದಕ್ಕಾಗಿ ನಡೆಸಿದ ಪ್ರಯತ್ನಗಳನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. 1951ನೇ ವರ್ಷದಲ್ಲಿದ್ದಂಥ ಪರಿಸ್ಥಿತಿಯನ್ನು 1957 ರಲ್ಲಿ ಈಗಿರತಕ್ಕ ಪರಿಸ್ಥಿತಿಗೆ ಹೋಲಿಸಿ ನೋಡಿದರೆ ಪ್ರಾಯಶಃ ಆಗ ಇದ್ದ ಪರಿಸ್ಥಿತಿ ಈಗ ಎಷ್ಟರಮಟ್ಟಿಗೆ ಆಗಿದೆ ಎಂಬುದು ತಿಳಿಯುತ್ತದೆ. ಈ ಸಂಬಂಧದಲ್ಲಿ ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪಮಾಡಲು ಬಯಸುತ್ತೇನೆ. 1952ರಲ್ಲಿ ಆಹಾರಧಾನ್ಯಗಳ ಕೊರತೆಯಿತ್ತು ಮತ್ತು ಆಗ ಕಂಟ್ರೋಲುಕೂಡ ಇತ್ತು. ಕಂಟ್ರೋಲು ತೆಗೆಯಬೇಕಾದರೆ ಬೆಳೆಯನ್ನು ಹೆಚ್ಚಿಸಬೇಕು. ಯಾವ ಯಾವ ಪದಾರ್ಥಗಳು ನಮಗೆ ಬೇಕಾಗಿದ್ದವು ಎಂಬುದನ್ನು ಯೋಚನೆಮಾಡಿ ಅದಕ್ಕೆ ತಕ್ಕಹಾಗೆ ಬೆಳೆಗಳನ್ನು ಅಭಿವೃದ್ಧಿಪಡಿಸಿ ಜನಗಳಿಗೆ ಅನುಕೂಲ ಮಾಡಿಕೊಡಬೇಕಾದ ಒಂದು ಪರಿಸ್ಥಿತಿಯಲ್ಲಿ ನಾವು 1952 ರಲ್ಲಿ ಇದ್ದೆವು. ಅಂತಹ ಪರಿಸ್ಥಿತಿಯನ್ನು ಹೋಗಲಾಡಿಸಲು ಯಾವರೀತಿಯ ಕ್ರಮಗಳನ್ನು ತೆಗೆದುಕೊಂಡೆವು ಎಂಬುದನ್ನು ಸರಿಯಾಗಿ ನಾವು ಯೋಚನೆ ಮಾಡಬೇಕು. ಹಾಗೆ ಮಾಡದೆ ಯಾವುದೋ ಒಂದು ವೇದದ ಕಾಲದಲ್ಲಿ ಆಗಿರತಕ್ಕ ವಿಷಯದ ಮೇಲೆ ಆಡಳಿತದ ಪಕ್ಷವನ್ನು ಟೀಕೆಮಾಡುತ್ತಾ ಹೋದರೆ ಸರಿಯಾಗಿ ಕಾಣುವುದಿಲ್ಲ. ಅಂತಹ ಪ್ರಸಂಗವೇನಾದರೂ 1957 ರಲ್ಲಿ ನಡೆದಿದೆಯೋ ಏನೋ ಎಂದು ನೋಡಬೇಕಾಗಿದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಿದೆವು. ಅದರ ಪರಿಣಾಮವಾಗಿ ದೇಶದ ಉತ್ಪತ್ತಿ ಸುಮಾರು ಶೇಕಡ 20 ರಷ್ಟು ಹೆಚ್ಚಾಗಿದೆ. ಎರಡನೆಯ ಯೋಜನೆ ಆರಂಭವಾಗಿದೆ. ಇದು ದೇಶದ ಮುಂದಿರತಕ್ಕ ವಿಷಯ. ಹಾಗೆಯೇ ನಾವು ರಾಜ್ಯಗಳ ಪುನರ್ವಿಂಗಡನೆಯ ಸಮಸ್ಯೆಯನ್ನು ಕೂಡ ಒಂದು ಅನುಕೂಲವಾದ ರೀತಿಯಲ್ಲಿ ಪರಿಹರಿಸುತ್ತಿದ್ದೇವೆ. ಅಲ್ಲದೆ ಈಗ ಎರಡನೆ ಪಾಂಚವಾರ್ಷಿಕ ಯೋಜನೆಯನ್ನು ರೂಪಿಸಿ ಕಾರ್ಯಗತ ಮಾಡತಕ್ಕ ವಿಷಯದಲ್ಲಿ ಜನಗಳ ಸಹಕಾರವನ್ನುಕೋರಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿರುವುದು ಸೂಕ್ತವಾದುದು ಮತ್ತು ಸರಿಯಾದುದು. ಅದಕ್ಕಾಗಿ ನಾವು ನಮ್ಮ ಅಭಿನಂದನೆಗಳನ್ನು ಈ ಸಭೆಯ ಮೂಲಕ ಅವರಿಗೆ ಅರ್ಪಿಸುವುದು ನಮ್ಮ ಕರ್ತವ್ಯ.

ಇನ್ನುಮುಂದೆ ನಾವು ಆಡಳಿತವನ್ನು ಇನ್ನೂ ಉತ್ತಮ ಪಡಿಸಲು ಏನು ಮಾಡಬೇಕು ಎಂಬ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ. ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಲ್ಪಟ್ಟಿದ್ದ ಅನೇಕ ಕಾರ್ಯಗಳನ್ನು ತೆಗೆದುಕೊಂಡಿದ್ದೇವೆ. ಎರಡನೆ ಯೋಜನೆಯಲ್ಲಿ ಎಷ್ಟು ಬೆಳೆಯನ್ನು ತೆಗೆಯಬೇಕೆಂಬುದನ್ನು ಯೋಚನೆ ಮಾಡಿರಲಿಲ್ಲ. ಸರ್ಕಾರ ಯಾವ ಕೆಲಸವನ್ನೇಮಾಡಲಿ ಒಂದು ನಿರ್ದಿಷ್ಟವಾದ ಯೋಜನೆ ಹಾಕಿಕೊಂಡು (ಪ್ರಯಾರಿಟಿ) ರೀತಿಯಾಗಿ ಅವನ್ನು ಕಾರ್ಯಗತ ಮಾಡಬೇಕೆಂದು ನಾನು ಭಾವಿಸುತ್ತೇನೆ. ಈ ಅಂಶಗಳನ್ನೆಲ್ಲ ಕುರಿತು ಇದುವರೆಗೆ ಭಾಷಣ ಮಾಡಿದಂಥವರು ಒಬ್ಬರೂ ಪ್ರಸ್ತಾಪ ಮಾಡಲಿಲ್ಲ. ಈ ರೀತಿಯಾಗಿ ಒಂದು ನ್ಯೆಜವಾದ ಅಭಿಪ್ರಾಯವನ್ನು ದೇಶದ ಮುಂದಿಡದೆ ವಿರೋಧಪಕ್ಷದಲ್ಲಿದ್ದೇವೆಂದು ಟೀಕೆ ಮಾಡುವುದೇ ತಮ್ಮ ಕೆಲಸವೆಂದು ಮಾಡಿದರೆ ಚೆನ್ನಾಗಿ ತೋರುವುದಿಲ್ಲ. ಹಾಗೆಯೇ ನಾವು ಈ ಮೈಸೂರು ಸಂಸ್ಥಾನದಲ್ಲಿ ಸುಮಾರು ಎರಡು ಕೋಟಿ ರೂಪಾಯಿಗಳನ್ನು ವೆಚ್ಚಮಾಡಿದ್ದೇವೆಂದು ಹೇಳುತ್ತಾ ಇಷ್ಟು ದುಬಾರಿ ವೆಚ್ಚವನ್ನು ಮಾಡಿಯೂ ಅದನ್ನು ಸರಿಯಾಗಿ ಕಾರ್ಯಗತ ಮಾಡಿಲ್ಲವೆಂತಲೂ ಹೇಳಿದ್ದಾರೆ.

ರಾಜ್ಯಪಾಲರ ಭಾಷಣದಲ್ಲಿ ಕುಡಿಯುವ ನೀರಿನ ವಿಷಯದಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ಕುರಿತು ಪ್ರಸ್ತಾಪಮಾಡಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಮುಂದಿನ ಐದು ವರ್ಷಗಳಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿಕೊಡಲು ಸ್ವಲ್ಪ ಪ್ರಾಮುಖ್ಯವಾಗಿ ಯೋಚಿಸಬೇಕು. ಗ್ರಾಮಗಳಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಬಹಳ ಹಿಂದಿದೆ. ಹಿಂದೆ 700 ಗ್ರಾಮಗಳಿಗೆ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಿದರು. ಆದರೂಕೂಡ ಕುಡಿಯುವ ನೀರಿನ ಅಭಾವ ಜಾಸ್ತಿಯಾಗಿ ಹಳ್ಳಿಗಳಲ್ಲ ಜನರು ರೊಚ್ಚಿನ ನೀರನ್ನು ಕುಡಿದು ರೋಗರುಜಿನಗಳಿಗೆ ತುತ್ತಾಗುತ್ತಿದ್ದಾರೆ. ಈಗ ಕುಡಿಯುವ ನೀರಿಗೆ ಒದಗಿಸತಕ್ಕ ಹಣ ಬಹಳ ಕಡಮೆ. ಇದನ್ನು ಹೆಚ್ಚು ಮಾಡಬೇಕು.

ಹಾಗೆಯೇ ರಸ್ತೆಗಳ ವಿಚಾರ. ದೊಡ್ಡ ದೊಡ್ಡ ರಸ್ತೆಗಳ ವಿಚಾರದಲ್ಲಿ ಅಗತ್ಯವಾದ ಕಾರ್ಯವಾಗಬೇಕಾದ ವಿಚಾರದಲ್ಲಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಾವೀಗ ಪ್ರಜಾಪ್ರಭುತ್ವದ ಕಾಲದಲ್ಲಿದ್ದೇವೆ. ಅದರಿಂದ ನಾವು ಜನಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವುದೇ ನಮ್ಮ ಆಕಾಂಕ್ಷೆ. ಆದರಂತೆ ನಾವು ಈಗ ಪಟ್ಟಣಗಳ ಮತ್ತು ಗ್ರಾಮಗಳಲ್ಲಿ

ರುವ ರಸ್ತೆಗಳನ್ನು ಸರಿಪಡಿಸಲು ಹೆಚ್ಚು ಗಮನ ಕೊಡಬೇಕೆಂದು ನಾನು ಸರ್ಕಾರದವರನ್ನು ಕೋರುತ್ತೇನೆ.

ಹಾಗೆಯೇ ಬೆಂಗಳೂರು ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಬೆಂಗಳೂರು Corporation ನಲ್ಲಿರತಕ್ಕ ಒಂದೆರಡು ಅಂಶಗಳನ್ನು ಪ್ರಸ್ತಾಪಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಬೆಂಗಳೂರಿನಿಂದ ಹೊರಕ್ಕೆ ಹೋಗುವ ಕೊಚ್ಚೆನೀರು ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕು ಮಾಗಡಿ ತಾಲ್ಲೂಕುಗಳ ಕಡೆ ಹರಿದುಹೋಗುತ್ತದೆ. ಆರೋಗ್ಯ ಇಲಾಖೆಯವರು D.D.T. ಇವುಗಳನ್ನು ಪಟ್ಟಣಗಳ ಕಡೆ ಹೆಚ್ಚಾಗಿ ಉಪಯೋಗಿಸಿ ಗ್ರಾಮಾಂತರಗಳ ಕಡೆ ಗಮನಕೊಡುತ್ತಿಲ್ಲ. ಅದರಿಂದಾಗಿ ಸೊಳ್ಳೆಗಳು ಹೆಚ್ಚಿ, ಇಲ್ಲಿನ ಜನಗಳಲ್ಲಿ ಅನಾರೋಗ್ಯವುಂಟಾಗುತ್ತಿದೆ. ಸರ್ಕಾರದವರು ಈ ಕಡೆ ಹೆಚ್ಚಾಗಿ ಗಮನ ಕೊಟ್ಟು ಸೊಳ್ಳೆಯ ಕಾಟವನ್ನು ತಪ್ಪಿಸಬೇಕು. ಪ್ರಮುಖವಾಗಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೆಳ್ಳಂದೂರು ಮೊದಲಾದ ಪ್ರದೇಶದಲ್ಲಿರುವ ಕೆರೆಗಳಿಂದ ಜನರಿಗೆ ಉಂಟಾಗುತ್ತಿರುವ ತೊಂದರೆಯನ್ನು ಸರಕಾರದವರ ಗಮನಕ್ಕೆ ತರಲು ಆರೋಗ್ಯ ಮಂತ್ರಿಗಳನ್ನು ಆ ಗ್ರಾಮಗಳಿಗೆ ಕರೆದುಕೊಂಡು ಹೋಗಿದ್ದೆ. ಅಲ್ಲದೆ ಹಿಂದಿನ ಮುಖ್ಯಮಂತ್ರಿಗಳನ್ನೂ ಸಹ ಕರೆದುಕೊಂಡು ಹೋಗಿದ್ದೆ. ಆ ಪ್ರದೇಶದಲ್ಲಿ ಸಾಯಂಕಾಲ ಏಳು ಘಂಟೆಯಾದ ಮೇಲೆ ಇರುವುದಕ್ಕೇ ಆಗುವುದಿಲ್ಲ. ಸಾಯಂಕಾಲವಾದ ಮೇಲೆ ಒಂದು ಸಾರ್ವಜನಿಕ ಭಾಷಣವನ್ನೂ ಸಹ ಮಾಡುವುದಕ್ಕೆ ಅಲ್ಲಿ ಅವಕಾಶವಿರುವುದಿಲ್ಲ. ಇಂಥ ದುರ್ಭರಪರಿಸ್ಥಿತಿ ಇದೆ. ಹಿಂದಿನಿಂದಲೂ ಈ ಪ್ರದೇಶಕ್ಕೆ ಒಂದು ಆರೋಗ್ಯ ಕೇಂದ್ರವನ್ನು ಕೊಟ್ಟು ಡಿ. ಡಿ. ಟಿ. ಸ್ಪ್ರೇ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತಿದ್ದರೂ ಸಹ ಇವೊತ್ತಿನವರೆಗೂ ಯಾವ ಅನುಕೂಲವನ್ನೂ ಮಾಡಿಲ್ಲ.

ಈ ಸಭೆಯಲ್ಲಿ ಪ್ರಶ್ನೋತ್ತರ ಸಮಯದಲ್ಲೂ ಮತ್ತು ಆಮೇಲೆ ಅನೇಕ ವಿಷಯಗಳು ಚರ್ಚೆಗೆ ಬಂದಾಗಲೂ ಹೇಳತಕ್ಕ ಸಲಹೆಗಳ ಬಗ್ಗೆ ಸರಕಾರದವರು ಯಾವ ರೀತಿ ಕ್ರಮ ತೆಗೆದುಕೊಂಡಿದ್ದಾರೆ, ಯಾವ ಯಾವ ವಿಚಾರಗಳಲ್ಲಿ ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ, ಎಷ್ಟರಮಟ್ಟಿಗೆ ನಾವು ಹೇಳಿದಂಥ ಸಲಹೆಗಳನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ ಎನ್ನುವ ವರದಿಯನ್ನು ಆಗಾಗ್ಗೆ ಶಾಸನ ಸಭೆಯ ಮೇಜಿನ ಮೇಲೆ ಇಡತಕ್ಕದ್ದು ಅವಶ್ಯಕ. ಅದನ್ನು ಮಾನ್ಯ ಮಂತ್ರಿಗಳು ಮಾನ್ಯ ಸಭೆಯ ಮುಂದೆ ಇಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ. ಇನ್ನು ಮುಂದಾದರೂ ಕೂಡ ಯಾವ ವಿಷಯವನ್ನು ಪ್ರಸ್ತಾಪ ಮಾಡಿ ಸರಕಾರದವರ ಗಮನಕ್ಕೆ ತರುತ್ತೇವೆಯೋ ಅವುಗಳ ಬಗ್ಗೆ ಸರಕಾರದವರು ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂಬ ಅಂಶಗಳ ವಿವರವನ್ನು ಮುಂದಿನ ಶಾಸನ ಸಭೆಸೇರುವ ಹೊತ್ತಿಗೆ ಸಭೆಯ ಮುಂದೆ ಇಡುವಹಾಗೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಇದುವರೆಗೂ ವಿರೋಧ ಪಕ್ಷದ ಅನೇಕ ಮಿತ್ರರು ಅಭಿನಂದನೆಯ ಕೆಲಸಗಳನ್ನು ಮಾಡಿದ್ದಾರೆ. ವಿರೋಧಪಕ್ಷದ ನಾಯಕರಾದ ಶ್ರೀ ಇಮಾಂರವರು ನನ್ನ ವಿಶ್ವಾಸಕ್ಕೂ ಕೃತಜ್ಞತೆಗೂ ಪಾತ್ರರು. ಅವರು ಸಲ್ಲಿಸಿರತಕ್ಕ ಸೇವೆ ಅಮೋಘವಾದುದು. ಅವರು ಉತ್ತಮ ವಾಗ್ಮಿಗಳು. ಹಿಂದಿನಿಂದ ಹೆಚ್ಚು ಅನುಭವಪಡೆದವರು. ಯಾವುದೇ ಸಂದರ್ಭದಲ್ಲಿ ಯಾವುದೇ ಬಿಕ್ಕಟ್ಟಿನ ಪ್ರಸಂಗ ಬಂದಾಗಲೂ ಕೂಡ ಯಾವರೀತಿಯ ಕಟು ಟೀಕೆಯನ್ನು ಮಾಡಬೇಕಾದರೂ ಉತ್ಕೃಷ್ಟವಾದ, ಶ್ರೇಷ್ಠತರವಾದ ದರ್ಜೆಯ ಒಳ್ಳೆಯ ಮಾತನ್ನು ಹೇಳಿ ಸರಕಾರದವರಿಗೆ ಮನಸ್ಸು ಹಿಡಿಸುವ ರೀತಿಯಲ್ಲಿ ಸಲಹೆಗಳನ್ನು ಕೊಡುತ್ತಿದ್ದರು. ಹಾಗೆಯೇ ಶ್ರೀ ಕೆ. ಪಟ್ಟಾಭಿರಾಮನ್ ಅವರು ಮತ್ತು ಒಬ್ಬೊಬ್ಬ ಮಿತ್ರರು ಬಹಳ ಚೆನ್ನಾಗಿ ಸರಕಾರದ ಕಾರ್ಯ ಕಲಾಪಗಳ ಬಗ್ಗೆ ಸಲಹೆಗಳನ್ನು ಕೊಟ್ಟು ಆಡಳಿತ ಚೆನ್ನಾಗಿ ನಡೆಯುವುದಕ್ಕೆ ಸಹಕಾರ ನೀಡಿದರು. ಅವರಿಗೆಲ್ಲರಿಗೂ ತಮ್ಮ ಮೂಲಕ ಧನ್ಯವಾದಗಳನ್ನು ಅರ್ಪಿಸಿ, ನನಗೆ ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟುದಕ್ಕಾಗಿ ತಮಗೆ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†[Sri AMBADAS RAO (Yadgiri-Reserved).—Personnel of Committees are chosen on communal basis.]

Mr. SPEAKER.—The Hon'ble Member cannot make any charge against the Speaker. He must know that the Speaker is above all these things. If he feels that some injustice has been done to him, I am always willing to make amends. To say that I had in mind the idea of caste or community in making appoinments is a reflection on the Chair. The Hon'ble Member will have to withdraw what he has said now.

[Sri AMBADAS RAO.—The Chair seems to have acted on the advice given by the party in power in appointing the panel of Charimen.]

Mr. SPEAKER.—Then again, he is making another mistake in saying that I am going to appoint the panel of Chairmen after hearing the Party in power. I never did that and I know it for certain that no Speaker would ever do that. I only consult my conscience and I do it. I request the Hon'ble Member in the first instance to withdraw whatever he has said just now.

[Sri AMBADAS RAO.—Harijan representation has not been properly given in the panel of Chairmen].

Mr. SPEAKER.—First of all, the Hon'ble Member will have to withdraw the words he has uttered. The first thing is that the Chair has appointed the panel of Chairmen on communal lipes; secondly, that I have consulted the Members of the Party in power in making appointments. These are not

†Sri Ambadas Rao spoke in Hindi, The gist of his remarks in English as given by him, are printed in brackets.

(MR. SPEAKER.)

worthy of the Member and they have to be withdrawn. Especially when such remarks are made against the Speaker, it is against traditions and coneventions and the Speaker will have to take very strict notice of such remarks.

Sri AMBADAS RAO.—All right. I withdraw my words, Sir.

[What about Select Committee? It is full of Lingayets.]

Mr. SPEAKER.—So far as the Select Committee is concerned, elections are held. Here again, the Hon'ble Member is making another mistake. The Members of the Select Committee are elected by this House, and I suppose they are not elected on communal lines. Secondly, whatever appointments are made to the Select Committee, they are made by me. The Hon'ble Member will have to take care that when he offers his remarks, he should also take into account what is exactly the position.

Sri B. HUTCHE GOWDA.—He means the Party in power nominates people on communal lines.

Sri Mulka GOVINDA REDDY.—What he says is that when names are proposed, they are proposed by Ministers on communal lines.

Sri AMBADAS RAO.—

[There is only one Harijan Minister Sri Chennigaramiah in the Cabinet but I do not think he is the proper representative of Harijans. His contact with the Harijans of the State is nil. He is not working for Harijan community. He may be working for his personal benefit, that is all. He snuffs himself all the 24 hours like Arige Ramaswamy, the Harijan Deputy Minister of Hyderabad. I take a challenge, let him come with me to any Harijan area; he is not recognised as their representative. He is a mere yes-man of Congress Executive. Please take an honest young man as Harijan Minister in the next cabinet.]

Sri J. MOHAMED IMAM.—On a point of information, Sir. Is the speech of Hon'ble member being recorded?

Mr. SPEAKER.—No.

Sri J. MOHAMED IMAM.—It is a very interesting speech.

Mr. SPEAKER.—He will give a gist of what he is speaking now.

Sri M. CHIKKALINGAIAH.—His speech should have been recorded.

Mr. SPEAKER.—There are no arrangements for that and so it is not possible now.

Sri M. CHIKKALINGAIAH.—Hindi is our national language and so some arrangements must be made for recording Hindi speeches.

Mr. SPEAKER.—That will be borne in mind.

[Sri AMBADAS RAO.—I have lost much time in this useless talk. I thought there was an official recorder In the previous session, someone had suggested the need for a Marathi and a Hindi reporter].

Mr. SPEAKER.—I am not responsible for that. The Hon'ble Member is himself responsible for that. If the Hon'ble Member goes on making any defamatory statements dishonouring the Chair, how can the Chair keep quiet? So, it is on account of the fault of the Hon'ble Member that some time was lost and that is not the fault of the Chair. I cannot give him more time. He will have to finish his speech within the time allotted to him.

The House now rises and meets at 3-30.

The House rose for Lunch at Three of the Clock and re-assembled at Thirty Minutes past Three of the Clock.

[MR. SPEAKER in the Chair.]

Mr. SPEAKER.—Before we start wiht the business of the day, I have to take into account certain facts. We have hardly before us $1\frac{1}{2}$ hours. Half-an-hour would be required by the Government to reply and fifteen minutes may be taken by the Mover of the Motion. I am told that one of the Ministers will intervene in the debate. He will take fifteen minutes; one hour would go like this. We have hardly half-an-hour and I must accommodate as many as possible members. I can accommodate only two members at this rate.

Hon'ble Members may kindly bear this fact in mind and if they want me to accommodate more than two members, I have to curtail the time and make it ten minutes each. I would like to know the views of the members.

Sri R. MUNISWAMIAH (Bangalore North—Schedule Castes).—Ten minutes would do, Sir.

Sri L. K. SHROFF (Raichur).—We can sit for a longer time if you are pleased.

Mr. SPEAKER.—We will see; now, ten minutes for each member for his speech.

Sri R. MUNISWAMIAH.—Sir, I rise to thank the Governor for having delivered this Address to the Joint Session of the Legislature. Perhaps, this is the last Address for several Hon'ble Members of this House which they hear, read and discuss. In the Address the Governor has been pleased to observe that we can look back with satisfaction on a hard job well done.

He has mentioned that for the First Five-Year Plan 90 crores were allotted and 80 crores were actually spent. This is an appreciable thing. Our officers and the Ministers have taken pains to see that this amount is spent. But I have got a doubt in my mind whether we have achieved equivalent results for the amount we have spent. That is a point which has got to be examined. Particularly, about food production, it is said here that 11 lakhs tons of foodgrains were produced. Sir, if that were true, I do not understand the abnormal rise in the price of foodgrains. I do not know where all these 11 lakhs of tons of foodgrains have disappeared. This high price is causing great havoc in the market and the people are made to suffer. I request the Government and the Ministers in particular, to investigate the matter and find out the cause for this abnormal rise in the price of foodgrains and find out an early solution to bring down the prices to a level which will be within the reach of the poorest man.

Sir, Government have paid more attention to the development of irrigation works and tanks. I have to congratulate the Public Works Minister on this. Wherever he has gone, he has instructed the authorities not to wait for the rules and regulations where immediate attention was required for works like repairs and restoration of tanks but to take up the works. Sir, we have got to open a Veterinary College for maintaining better live-stock. I suggest that a Veterinary College may be opened at Shimoga because Shimoga happens to be somewhat in the centre of the new State of Mysore. Four such Colleges should be opened in the four Divisions of our State and they should be opened as early as possible.

Regarding setting up of the Electricity Board, the Government have taken a long time. They must see that the Board is set up immediately and that the subordinates of the department are satisfied with the decisions of the Board so that we may have better and efficient work from them.

Water supply in Bangalore City is really deplorable. Of course, one crore of rupees has been sanctioned to the Corporation of Bangalore and this may serve as a temporary measure. I suggest that Government should think of a plan to bring water from Mandya or somewhere from Irwin Canal so that we may have enough drinking water for the City which is growing by leaps and bounds. Sir, roads are formed but they are not maintained properly. Reference is made in the Address that a number of roads have been improved by concreting or asphalting. But, many of the District Board and Village Communication roads are so neglected that they practically have been washed away due to rains. Government should see that all these roads are again made fit for traffic.

Sir, it is true that the pay scales of teachers are revised but the primary school teachers have not been benefited by this. It is only teachers in Government High Schools that have been benefited to some extent. Again, the trained teacher's grade is higher than the untrained teacher. Government should see that not much difference is made between the grades of the trained and untrained teachers; the trained teacher may be started on

(SRI R. MUNISWAMIAH.)

a little higher pay in the same grade. He may be given one or two increments.

Our State has advanced a little so far as technical education is concerned, for, we have Engineering Schools and Colleges. We have to open still more technical schools and colleges. Each District should have at least one Engineering School and one Agricultural School. We have to open at least two Engineering Colleges somewhere in Bidar or Gulbarga and another in Mangalore.

Sir, with regard to the Health Units, at present the Health Centres are working in Malnad regions. In Bangalore District, in what we call the belt areas, the conditions of the people are too wretched and they are living like worms. All the drainage water that has been going out of Bangalore City, which is said to be a beautiful city, is flowing through this area. This water is giving a nasty smell and it is causing havoc on the health of the residents and inhabitants of the belt area. Therefore I request that one or two Health Units may kindly be opened around Bangalore City to see that its beautiful name will also be shared by the neighbouring regions.

About Schedule Castes, the Government has been doing something,—something, of course, really appreciable. This time the Governor has not forgotten to mention about this section. Last time the Governor's speech was silent about the Schedule Castes. But this time he has included an item about them. Sir, the scholarship amount has been remaining the same for the past 15 years. The Government should see that the increased number of students will get more number of scholarship.

ಶ್ರೀ ಎಸ್ ವೈ. ಪಾಟೀಲ (ಹಿಪ್ಪರಗಿ—ಬಾಗೇವಾಡಿ).—ಮಾನ್ಯ ಸಭಾಪತಿಗಳೇ, ಈ ಮಾನ್ಯ ಸಭಾ ಗೃಹದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎನ್. ಹ ಚ್ಚಮಾಸ್ತಿಗೌಡರು ಮಂಡಿಸಿರತಕ್ಕ ವಂದನಾರ್ಪಣೆಯ ಠರಾವನ್ನು ನಾನು ಅನುಮೋದಿಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಅನೇಕ ಮಹತ್ವದ ಅಂಶಗಳು ಇವೆ. ಮೊದಲನೆಯದಾಗಿ ಈ ಸಭಾ ಗೃಹದ ಮಾನ್ಯ ಸದಸ್ಯರುಗಳು ಕಳೆದ ಐದು ವರುಷಗಳಲ್ಲಿ ಮಾಡಿದ ಕೆಲಸದ ಬಗ್ಗೆ ರಾಜ್ಯಪಾಲರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಮೈಸೂರು ರಾಜ್ಯದಲ್ಲಿ ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಪೂರೈಸಲು ಸಾಕಷ್ಟು ಲಕ್ಷ್ಯಕೊಡಲಾಗಿದೆ. ತುಲನಾತ್ಮಕ ದೃಷ್ಟಿಯಿಂದ ವಿಚಾರ ಮಾಡುವುದಾದರೆ, ಮೊದಲಿನ ಮೈಸೂರು ರಾಜ್ಯದಲ್ಲಿ ಯಾವ ರೀತಿಯಾಗಿ ವಿದ್ಯುಚ್ಛಕ್ತಿಯು ಪೂರೈಸಲ್ಪಡುತ್ತಿದೆಯೋ ಅದೇ ರೀತಿಯಾಗಿ ಈಗ ಹೊಸ ಮೈಸೂರು ರಾಜ್ಯದಲ್ಲಿ ಸೇರ್ಪಡೆಯಾದ ಹೊರಗಿನಿಂದ ಬಂದ ಬೇರೆ ಬೇರೆ ಹೊಸ ಭಾಗಗಳಲ್ಲಿಯೂ ಸಹ ವಿದ್ಯುಚ್ಛಕ್ತಿಯು ಪೂರೈಸಲ್ಪಡಬೇಕೆಂದು ಈ ಸಂದರ್ಭದಲ್ಲಿ ನಾನು ಸೂಚಿಸುತ್ತೇನೆ.

ಮಲ್ಪೆ ಬಂದರನ್ನು ದೊಡ್ಡ ಬಂದರನ್ನಾಗಿ ವಿಸ್ತರಿಸುವ ಉದ್ದೇಶದಿಂದ ಅದರ ಸರ್ವೆ ಮಾಡಿಸುವ ವಿಚಾರವನ್ನು ಸರಕಾರದವರು ಗವನದಲ್ಲಿಟ್ಟುಕೊಂಡಿದ್ದಾರೆಂಬುದು ಸಂತೋಷದ ಸಂಗತಿಯಾಗಿದೆ. ರಾಜ್ಯದಲ್ಲಿಯ ಸರಕಾರಿ ನೌಕರರಿಗೆ ಹೊಸ ಸಂಬಳದ ಸ್ಕೇಲುಗಳನ್ನು ಗೊತ್ತುಮಾಡಿರುವುದು ಎಲ್ಲ ನೌಕರರಿಗೆ ಸಂತೋಷವನ್ನುಂಟುಮಾಡಿದೆ. ಕೃಷ್ಣಾ ನದಿಯ ಮೇಲ್ಭಾಗದ ಯೋಜನೆ ಮತ್ತು ಮಲಪ್ರಭಾ ಯೋಜನೆಯ ಸರ್ವೆ ಕೆಲಸ ನಡೆಸಲು ಮಂಜೂರಾತಿ ಕೊಟ್ಟದ್ದು ಸಂತೋಷಕರವಾಗಿದೆ. ಕೃಷ್ಣಾ ನದಿಯ ಮೇಲ್ಭಾಗದ ಯೋಜನೆಯು, ದುಷ್ಕಾಲ ಪೀಡಿತ ವಿಜಾಪುರ ಜಿಲ್ಲೆಗೆ ಅತ್ಯಂತ ಆವಶ್ಯಕವಾಗಿರುವದರಿಂದ ಈ ಯೋಜನೆಯ ಕೆಲಸವನ್ನು ತ್ವರಿತವಾಗಿ ಕೈಗೊಳ್ಳಬೇಕೆಂದು ನಮ್ರತೆಯಿಂದ ಸೂಚಿಸುತ್ತೇನೆ. ನಮ್ಮ ಮೈಸೂರು ರಾಜ್ಯವು ಒಕ್ಕಲತನ ಪ್ರಾಧಾನ್ಯವಾಗಿರುವ ದೇಶವಾಗಿದೆ. ವೆಟೆರಿನರಿ ಕಾಲೇಜು ಒಂದನ್ನು ಸ್ಥಾಪಿಸುವ ವಿಚಾರವು ಬಹಳ ಸೂಕ್ತವಾಗಿದೆ. ಶಕ್ಯವಿದ್ದಷ್ಟು ಮಟ್ಟಿಗೆ ಮುಂಬಯಿ ರಾಜ್ಯದಿಂದ ಬಂದ ಕರ್ನಾಟಕದ ಭಾಗದಲ್ಲಿ ಈ ವೆಟೆರಿನರಿ ಕಾಲೇಜನ್ನು ತೆರೆಯಬೇಕು. ಕರ್ನಾಟಕ ಪ್ರಾಂತದಲ್ಲಿ ಒಕ್ಕಲತನವೇ ಮುಖ್ಯವಾಗಿರುವದರಿಂದ ವೆಟೆರಿನರಿ ಕಾಲೇಜನ್ನು ತೆರೆಯುವುದು ಅವಶ್ಯವಾಗಿದೆ.

ಇನ್ನು ರಸ್ತೆಗಳ ವಿಷಯವಾಗಿ ಹೇಳುವದಾದರೆ ಜಮಖಂಡಿಯ ಹತ್ತಿರ ಕೃಷ್ಣಾನದಿಗೆ ಪೂಲು (ಸೇತುವೆ) ಕಟ್ಟಿದಂತೆ, ಸಿಂದಗಿ ತಾಲ್ಲೂಕು ದೇವಣ ಗ್ರಾಮದ ಹತ್ತಿರ ಭೀಮಾನದಿಗೆ ಒಂದು ದೊಡ್ಡ ಪೂಲು ಕಟ್ಟಬೇಕು. ಒಕ್ಕಲಿಗರಿಗೆ ಹಳ್ಳಿಯಿಂದ ಹಳ್ಳಿಗೆ ಹೋಗಬೇಕಾದರೆ ರಸ್ತೆಯ ಅನುಕೂಲತೆ ಇಲ್ಲ. ಭಾರತದಲ್ಲಿ ಒಕ್ಕಲುತನವೇ ಮುಖ್ಯ ಉದ್ಯೋಗವಾಗಿದ್ದು ಹಳ್ಳಿಗಳ ಅಭಿವೃದ್ಧಿಯಾಗುವುದು ಸೂಕ್ತವಾಗಿದೆ. ಆದಕಾರಣ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳ ರಚನೆಗಾಗಿ ಹೆಚ್ಚು ಹಣ ಖರ್ಚು ಮಾಡಬೇಕೆಂದು ಈಗ ನಾನು ಸೂಚಿಸುತ್ತೇನೆ. ರಾಷ್ಟ್ರೀಯ ವಿಸ್ತರಣ ಯೋಜನೆಯ ಪ್ರಕಾರ ಭಾರತ ಸರ್ಕಾರದವರು ನಮ್ಮ ಮೈಸೂರು ರಾಜ್ಯಕ್ಕೆ 20 ಹೊಸ ಬ್ಲಾಕುಗಳನ್ನು ಗೊತ್ತುಪಡಿಸಿಕೊಟ್ಟಿರುತ್ತಾರೆ. ಹಿಂದುಳಿದ ಭಾಗವಾಗಿರುವ ವಿಜಾಪುರ ಜಿಲ್ಲೆಗೆ ಹೆಚ್ಚು ಬ್ಲಾಕ್ ಸಿಕ್ಕಬೇಕು. ಟೆನನ್ಸಿ ಆರ್ಡಿನನ್ಸು ಹೊರಡಿಸಿದ ಬಗ್ಗೆ ಅನೇಕ ವಿರೋಧ ಪಕ್ಷದ ಸದಸ್ಯರು ಟೀಕಿಸಿದರು. ಇದರಿಂದ ರೈತರಿಗೆ ಅನ್ಯಾಯ ಮಾಡಿದಂತಾಗಿದೆ ಎಂದು ಅವರು ಹೇಳಿದರು. ಆದರೆ ಇದು ನಿಜವಾದುದಲ್ಲ. ಹೊಸದಾಗಿ ಮೈಸೂರು ರಾಜ್ಯದಲ್ಲಿ ಸೇರ್ಪಡೆಯಾಗಿರುವ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯ ಕಾನೂನು ಇರುವದರಿಂದ, ಎಲ್ಲ ಭಾಗಗಳಲ್ಲಿಯೂ ಒಂದೇ ರೀತಿಯ ಕಾಯಿದೆ ಜಾರಿಯಲ್ಲಿ ಇರಬೇಕೆಂಬ ಉದ್ದೇಶದಿಂದಲೇ ಈ ಆರ್ಡಿನನ್ಸು ತರಲಾಗಿದೆ. ಇದು ಬಹಳ ಯೋಗ್ಯವಾಗಿದೆಯೆಂದು ಹೇಳಬಯಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಕದಮ್ ಅವರು ಇಂಗ್ಲಂಡದ

ಉದಾಹರಣೆಯೊಂದನ್ನು ಕೊಟ್ಟರು. ನಮ್ಮ ಮೈಸೂರು ರಾಜ್ಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸುವಾಗ ಪರದೇಶಗಳಲ್ಲಿಯ ಉದಾಹರಣೆಯ ವರ್ಣನೆ ಮಾಡುವುದು ಸೂಕ್ತವಲ್ಲ. ನಮ್ಮ ಪ್ರಾಂತದ ಪರಿಸ್ಥಿತಿಯು ಬೇರೆ ರೀತಿಯದಾಗಿದೆ. ಯೋಗ್ಯವಾದ ಸೂಚನೆಗಳನ್ನು ಮಾನ್ಯ ಸದಸ್ಯರು ಮಾಡಬಹುದು.

ಒಬ್ಬ ಮಾನ್ಯಸದಸ್ಯರು ಮೊನ್ನೆತಾನೇ ನಡೆದ ಚುನಾವಣೆಯು ಬಗ್ಗೆ ಟೀಕೆಮಾಡಿದರು. ವಿರೋಧ ಪಕ್ಷದವರು ಚುನಾವಣೆಯು ಬಗ್ಗೆ ಟೀಕಿಸುವುದು ಹೊಸದೇನೂ ಅಲ್ಲ. ಚುನಾವಣೆ ಕಾರ್ಯವು ನಿಷ್ಪಕ್ಷ ಪಾತವಾಗಿ ಯಶಸ್ವಿಯಾಗಿ ನಡೆದಿರುವುದೆಂದು ನಾನು ನಂಬಿದ್ದೇನೆ. ನಾನು ಸ್ವತಃ ನೂರಾರು ಹಳ್ಳಿಗಳಿಗೆ ಹೋಗಿ ಚುನಾವಣೆಯ ಕೆಲಸವನ್ನು ನೋಡಿದ್ದೇನೆ. ಚುನಾವಣೆಗಳು ನ್ಯಾಯವಾಗಿ ನಡೆದಿರುವುವೆಂದು ನನಗೆ ಮನವರಿಕೆಯಾಗಿರುವುದರಿಂದ ವಿರೋಧ ಪಕ್ಷದ ಸದಸ್ಯರ ಟೀಕೆಯಲ್ಲಿ ಯಾವದೇ ಸತ್ಯಾಂಶವು ಇಲ್ಲ ವೆಂದು ಹೇಳಬಯಸುತ್ತೇನೆ.

ವಿರೋಧ ಪಕ್ಷದ ಉಮೇದುವಾರರು ಈ ಸಲ ಬಹಳ ಅನ್ಯಾಯದಿಂದ ನಡೆದರು. ನನ್ನ ಮತದಾರ ಸಂಘದಲ್ಲಿ ವಿರೋಧಿ ಉಮೇದುವಾರರು ಮೋಟಾರ್ ಪೆಟ್ರೋಲಿನಲ್ಲಿ ನೀರು ಕೂಡಿಸಿ. ಸಕ್ಕರೆ ಕೂಡಿಸಿ ಮೋಟಾರು ನಡೆಯದಂತೆ ಮಾಡಿ ತೊಂದರೆ ಕೊಟ್ಟರು. ವಿರೋಧ ಪಕ್ಷದ ಟೀಕೆಯು ಬಗ್ಗೆ ಇದೊಂದೇ ಉದಾಹರಣೆಸಾಕು.

ಇನ್ನೊಂದು ಮಹತ್ವದ ಸಂಗತಿಯು ಯಾವು ದೆಂದರೆ, ಕುಡಿಯುವ ನೀರಿನ ಸೌಕರ್ಯ. ಮೈಸೂರು ರಾಜ್ಯದಲ್ಲಿ ಪ್ರತಿಯೊಂದು ಊರಿಗೆ ಕುಡಿಯುವ ನೀರು ದೊರೆಯುವಂತೆ ಏರ್ಪಾಡು ಆಗಲೇ ಬೇಕು ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ವಿರೋಧ ಪಕ್ಷದ ನಾಯಕರಾದ ಮಾನ್ಯ ಶ್ರೀ ಇಮಾಂರವರು ಸೂಕ್ತ ಸಲಹೆಗಳನ್ನು ಮಾಡು ತ್ತಿದ್ದಾರೆ. ಅವರಂತೆಯೇ ವಿರೋಧ ಪಕ್ಷದಲ್ಲಿಯ ಸದಸ್ಯರು ತಮ್ಮ ಜವಾಬುದಾರಿಯನ್ನು ತಿಳಿದು ಕೊಂಡು ಸೂಕ್ತ ಸಲಹೆ ಸೂಚನೆಗಳನ್ನು ಮಾಡಿ ಸರ ಕಾರಕ್ಕೆ ಮಾರ್ಗದರ್ಶನ ಮಾಡುವುದು ಯೋಗ್ಯ. ಸರ ಕಾರಕ್ಕೆ ಯಾವಾಗಲೂ ಎಚ್ಚರಿಕೆಯನ್ನು ಕೊಡುತ್ತಾ ಇರುವುದು ವಿರೋಧ ಪಕ್ಷದಲ್ಲಿಯ ಸದಸ್ಯರ ಕರ್ತವ್ಯ ವಾಗಿದೆ. ಹಾಗೆ ಮಾಡದೆ ಟೀಕೆ ಮಾಡಬೇಕೆಂಬ ಉದ್ದೇಶದಿಂದ ಎಲ್ಲವನ್ನೂ ಟೀಕಿಸುತ್ತಾ ಇರುವುದು ಒಳ್ಳೆಯದಲ್ಲ. ಮೆಜಾರಿಟಿ ಪಾರ್ಟಿಯ ಮೇಲೆ ಎಷ್ಟು ಜವಾಬುದಾರಿಯು ಇದೆಯೋ ಅಷ್ಟೇ ಜವಾಬು ದಾರಿಯು ಅಲ್ಪ ಸಂಖ್ಯಾತರಾದ ವಿರೋಧ ಪಕ್ಷದಲ್ಲಿ ರುವ ಸದಸ್ಯರ ಮೇಲೂ ಇದೆ. ಟೀಕೆ ಮಾಡುವದು ಬಹಳ ಸುಲಭ. ಸರಕಾರದವರು ಎಂತಹ ಕಠಿಣ ಪರಿಸ್ಥಿತಿಯಲ್ಲಿ ಸುಧಾರಣೆಗಳನ್ನು ಮಾಡಿದ್ದಾರೆ ಎಂಬುದನ್ನು ಗಮನದಲ್ಲಿ ತೆಗೆದುಕೊಳ್ಳಬೇಕು. ರಾಜ್ಯ ಸೂತ್ರಗಳನ್ನು ಕೈಯಲ್ಲಿ ತೆಗೆದುಕೊಂಡು ಆಡಳಿತ ವನ್ನು ನಡೆಸುವದು ಬಹಳ ಕಠಿಣವಾದ ಕಾರ್ಯ. ವಿರೋಧ ಪಕ್ಷದಲ್ಲಿಯ ಸದಸ್ಯರು ಟೀಕೆಮಾಡಬಾರದು ಎಂದು ನಾನು ಹೇಳುವದಿಲ್ಲ. ಆದರೆ ಸೂಕ್ತ ಸಲಹೆ ಗಳಿಂದ ಕೂಡಿದ ಯೋಗ್ಯ ಟೀಕೆಯನ್ನು ಮಾಡ ಬೇಕೆಂದು ನಾನು ಸೂಚಿಸ ಬಯಸುತ್ತೇನೆ.

Sri N. B. PUJAR (Rona).—On a point of order, Sir. ಮಾನ್ಯ ಸದಸ್ಯರು ಯಾವ ವಿಷಯದ ಮೇಲೆ ಮಾತನಾಡುತ್ತಿದ್ದಾರೆ ಎಂಬುದು ತಿಳಿಯುವುದಿಲ್ಲ. ಅವರು ಮಾತನಾಡುತ್ತಿರುವುದು ಅಸಂಬದ್ಧವಾಗಿದೆ ಎಂದು ನನಗೆ ಅನಿಸುತ್ತದೆ.

ಅಧ್ಯಕ್ಷರು.—ಎಲ್ಲ ವಿಷಯಗಳ ಮೇಲೆ ಮಾತನಾಡ ಲಕ್ಕೆ ಬರುತ್ತದೆ. ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವಾಗ ಯಾವ ಸಾಮಾನ್ಯವಾದ ವಿಷಯ ವನ್ನಾದರೂ ಪ್ರಸ್ತಾಪಿಸಬಹುದು.

ಶ್ರೀ ಎಸ್. ವೈ. ಪಾಟೀಲ.—ಮುಖ್ಯವಾಗಿ ಹಳ್ಳಿ ಗಳ ಅಭಿವೃದ್ಧಿಯ ಕಡೆಗೆ ಸರಕಾರದವರು ಹೆಚ್ಚು ಮನಸ್ಸು ಕೊಡಬೇಕೆಂದು ನಾನು ವಿನಂತಿ ಮಾಡಿ ಕೊಳ್ಳುತ್ತೇನೆ. ಈಗ ರಾಜ್ಯಪಾಲರ ಭಾಷಣದ ಬಗ್ಗೆ ವಂದನಾರ್ಪಣ ನಿರ್ಣಯವನ್ನು ಮಂಡಿಸಿದ ಶ್ರೀ ಹುಚ್ಚಮಾಸ್ತಿಗೌಡರನ್ನು ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri A. S. KAMBLI (Hubli).—I rise, Sir, to offer my comments on the gracious speech which His Excellency the Governor has been pleased to deliver. At the outset I must express my gratitude to the present Government for the small mercies shown to Bombay districts. My own object in taking part in the debate on the Governor's Address is to draw the attention of the Government to the basic needs of all the districts and to make suggestions for their development. I wish to draw the attention of the Government to the natural wealth found in these four districts and I find it worth repeating that the Bombay districts are rich in rivers, in minerals and in soil, which await exploitation at the hands of man. Take the case of Bijapur district. It is the only district in the divided Bharat which has five perennial rivers whose waters simply join the sea. May I therefore appeal to the Government to undertake major, medium and minor irrigation projects with a view to convert the waters of the rivers which are a source of sorrow into a source of prosperity.

Coming to Dharwar District, it is one of the few districts in Bharat which is full of mineral wealth, which also awaits exploitation at the hands of Government. I appeal to the Government to start a paper and pulp industry in this place not only with a view to encourage these industries but with a view to save foreign exchange. Then there is the Kali river whose waters could be conveniently harnessed and which could generate cheap electricity and would not only help the district but also supply electricity to adjoining districts.

(SRI A. S. KAMBLI).

I was pleased to note in the Governor's Address the intention of the Government to start a Veterinary College in the State. I would request the Government to start the same in Dharwar, where there is already an Agricultural College.

Before I resume my seat I would appeal to Government to revise the pay scales of the primary teachers and the police constables.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಮಾನ್ಯ ಸಭಾಪತಿಗಳೇ, ನಮ್ಮ ರಾಜ್ಯಪಾಲರು ಮಾಡಿರತಕ್ಕ ಭಾಷಣದ ಮೇಲೆ ಈ ಸಭೆಯಲ್ಲಿ ಮಂಡಿಸಿರತಕ್ಕ ನಿರ್ಣಯದ ಮೇಲೆ ನಾನು ಒಂದೆರಡು ಮಾತುಗಳನ್ನು ಹೇಳಲು ನಿಂತಿದ್ದೇನೆ. ನಮ್ಮ ರಾಜ್ಯಪಾಲರು ಇಡೀ ಇಂಡಿಯಾ ದೇಶದಲ್ಲೆಲ್ಲ ಬಹಳ ಹೆಸರುವಾಸಿಯಾದವರು ಮತ್ತು ಅವರೇ ನಮ್ಮ ಈ ಹೊಸ ಮೈಸೂರು ರಾಜ್ಯಕ್ಕೆ ರಾಜ್ಯಪಾಲರಾಗಿರುವುದು ನಮ್ಮ ಪುಣ್ಯ ವಿಶೇಷ. ಮತ್ತು ಅಂತಹ ರಾಜ್ಯಪಾಲರಿಗೆ ನಾನು ನನ್ನ ವಂದನೆಗಳನ್ನರ್ಪಿಸುತ್ತೇನೆ.

ಸ್ವಾಮಿ, ಈ ಸಂದರ್ಭದಲ್ಲಿ ನಾನು ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗ ಪ್ರಜಾಪ್ರಭುತ್ವದ ಆಡಳಿತದಲ್ಲಿ ವಯಸ್ಕರ ಮತದಾನ ಪದ್ಧತಿಯ ಪ್ರಕಾರ ಮತದಾನ ನಡೆದು ಮಂತ್ರಿಮಂಡಲ ರಚನೆಯಾಗಿ ಸುಮಾರು ಐದು ವರ್ಷಗಳಾದವು. ಈ ಐದು ವರ್ಷಗಳಲ್ಲಿ, ದೇಶಕ್ಕೆ ಅಮೂಲ್ಯವಾದ ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಪ್ರಜಾಪ್ರಭುತ್ವ ಬಂದ ಮೇಲೆ ಹಳೆಯ ಮೈಸೂರಿನಲ್ಲಿರತಕ್ಕ ನೂರು ಜನ ಸದಸ್ಯರುಗಳ ಸಹಾಯದಿಂದ ಆಗಿದ್ದ ಮಂತ್ರಿಮಂಡಲ ಬಹಳ ಅಗಾಧವಾದ ಕೆಲಸ ಮಾಡಿದೆ. ಹಿಂದಿನ ಮಂತ್ರಿಮಂಡಲದ ಆಡಳಿತದಲ್ಲಿ ಇಪ್ಪತ್ತೈದು ವರ್ಷಗಳಿಂದಲೂ ಆಗದೆ ಇರತಕ್ಕಂತಹ ಕೆಲಸಕಾರ್ಯಗಳು ಆಗ ನಡೆದಿವೆ. ಅದಕ್ಕಾಗಿ ನಾವೆಲ್ಲರೂ ಕೂಡ ಆಗಿನ ಶಾಸನ ಸಭೆಯ ಸದಸ್ಯರಿಗೂ ಮತ್ತು ಮಂತ್ರಿಮಂಡಲಕ್ಕೂ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮೇಲಾಗಿ ನಾನೂ ಕೂಡ ಆಗಿನ ಶಾಸನ ಸಭೆಯ ಸದಸ್ಯನಾಗಿದ್ದೆ. ಆಗಿನ ನೂರು ಜನ ಸದಸ್ಯರು ಮುಖ್ಯವಾಗಿ ಆಗಿನಮಂತ್ರಿಗಳಾಗಿದ್ದ ಶ್ರೀ ಕೆ. ಹನುಮಂತಯ್ಯನವರ ಸಹಾಯದಿಂದ ಅನೇಕ ಉಪಯುಕ್ತವಾದ ಕೆಲಸಗಳನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಅವರಿಗೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ. ಅವರ ಕಾಲದಲ್ಲಿ ಕಟ್ಟಿದ ವಿಧಾನಸೌದದ ವಿಷಯವಾಗಿ ಅನೇಕರು ಅನೇಕ ವಿಧವಾದ ಟೀಕೆಗಳನ್ನು ಮಾಡಿದ್ದರೂ ಸಹ ಆಗಿನ ಶಾಸನ ಸಭೆಯ ಸದಸ್ಯರೆಲ್ಲರೂ ಒಮ್ಮತದಿಂದ ಒಂದೇ ರೀತಿಯಾಗಿ ಸಹಾಯಮಾಡಿದರು. ಅದರಂತೆ ಈ ಮಹತ್ತರವಾದ ವಿಧಾನಸೌಧಾ ಕಟ್ಟಡವೂ ತಯಾರಾಯಿತು. ಅದೇ ಸಂದರ್ಭದಲ್ಲಿ ಈ ವಿಶಾಲ ಮೈಸೂರು ಕೂಡ ಆಯಿತು. ಇಂಥ ಸುಂದರವಾದ ಕಟ್ಟಡವು ಇಂಡಿಯಾ ದೇಶದಲ್ಲಿ ಇನ್ನೆಲ್ಲಿಯೂ ಇಲ್ಲ. ಇದಕ್ಕಾಗಿ ಮಾಡಿದ ವೆಚ್ಚ ಬಹಳ ಹೆಚ್ಚಾಗಿದೆ ಎಂತಲೂ ಇನ್ನು ಬೇರೆ ಬೇರೆ ವಿಧವಾದ ತಪ್ಪುಗಳನ್ನು ಮಾಡಿದ್ದಾರೆಂತಲೂ ಅಪಾದನೆ ಬಂದಿದ್ದರ ಮೇಲೆ ಅವಕ್ಕಾಗಿ ಒಂದು ಸಮಿತಿ ಏರ್ಪಡಿಸಿ ಅದರ ವರದಿಯೂ ಕೂಡ ಈಗ ಸಭೆಯಮುಂದೆ ಬಂದಿದೆ. ಅದೇನಾದರೂ ಇರಲಿ; ಇಂತಹ ಮಹತ್ಕಾರ್ಯವನ್ನು ನೆರವೇರಿಸಿರುವುದಕ್ಕಾಗಿ ನಾನು ಈ ಸಭೆಯ ಪರವಾಗಿ ಮತ್ತೊಮ್ಮೆ ಆ ಮಂತ್ರಿಮಂಡಲಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಎರಡನೆಯದಾಗಿ, ಸ್ವಾಮಿ, ಪಿ. ಡಬ್ಲ್ಯು. ಡಿ. ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನಾನು ಈಗ ಐದು ವರ್ಷಗಳಿಂದಲೂ ಈ P.W.D. ಇಲಾಖೆಯ ವಿಷಯವಾಗಿ ಟೀಕೆಮಾಡುತ್ತಾ ಬಂದಿದ್ದೇನೆ. ನಾನು ಯಾವಾಗ ಟೀಕೆ ಮಾಡಿದರೂ ರಚನಾತ್ಮಕವಾಗಿ ಟೀಕೆ ಮಾಡತಕ್ಕವನು. ಮಾನ್ಯ ಮಂತ್ರಿಗಳಿಗೂ ಈ ವಿಷಯ ಗೊತ್ತು. ಅದರಲ್ಲೂ ಈಗಿರತಕ್ಕ ಪಿ. ಡಬ್ಲ್ಯು. ಡಿ. ಮಂತ್ರಿಗಳಾದ ಶ್ರೀ ವೀರಣ್ಣಗೌಡರು ರೈತಾಪಿ ಜನಗಳಿಗೆ ಅನುಕೂಲವಾಗುವ ಹಾಗೆ ಅನೇಕ ಯೋಜನೆಗಳನ್ನು ಕೈಗೊಂಡಿದ್ದಾರೆ. ಆದರೆ ನಮ್ಮ ತಾಲ್ಲೂಕಿನಲ್ಲಿರುವ ಲಕ್ಕವಳ್ಳಿ ಜಲಾಶಯವನ್ನು ಕಟ್ಟಿಸುವುದಕ್ಕೋಸ್ಕರ ಕೋಟ್ಯಂತರ ರೂಪಾಯಿಗಳು ಖರ್ಚಾಗುತ್ತಿವೆ ಇದು ಪ್ರಾರಂಭವಾದಾಗ ಮೊದಲು ಅಂದಾಜು ಎಂಟು ಕೋಟಿ ಇದ್ದುದು 16 ಕೋಟಿಯಾಗಿ ಅನಂತರ 20 ರಿಂದ 30 ಕೋಟಿಗೆ ಏರಿತು. ಅಲ್ಲಿ ನಡೆಯುತ್ತಿರುವ ಅನ್ಯಾಯ ಮತ್ತು ಅನೀತಿಗಳನ್ನು ಹೇಳಲಸಾಧ್ಯ. ಅಲ್ಲಿ ನಡೆಯುತ್ತಿರುವ ಲಂಚ ರುಷುವತ್ತು, ಅಧರ್ಮ ಅನ್ಯಾಯಗಳು ಮತ್ತೆಲ್ಲಿಯೂ ನಡೆಯುತ್ತಿಲ್ಲ. ಉದಾಹರಣೆಯಾಗಿ ಹೇಳಬೇಕಾದರೆ ಅಲ್ಲಿರುವ ಸಬ್ ಓವರ್‌ಸಿಯರುಗಳು, ಇಂಜಿನೀಯರುಗಳು ಈಗಾಗಲೇ ಸುಮಾರು ಏಳೆಂಟು ಲಕ್ಷ ರೂಪಾಯಿಗಳಷ್ಟು ಆಸ್ತಿಯನ್ನು ಮಾಡಿದ್ದಾರೆ. ಏತಕ್ಕೆ ಇದನ್ನು ಪರಿಶೀಲನೆ ಮಾಡಲಾಗುವುದಿಲ್ಲವೋ ನನಗೇನೂ ಗೊತ್ತಾಗಿಲ್ಲ. ಪಿ.ಡಬ್ಲ್ಯು.ಡಿ. ಇಲಾಖೆಯ ಕೆಲಸಕಾರ್ಯಗಳು ಬಹು ಚೆನ್ನಾಗಿ ನಡೆಯುತ್ತಿದ್ದರೂ ಇಲ್ಲಿ ಈ ರೀತಿಯಾಗಿ ಹೀಗೆ ನಡೆಯುತ್ತಿದೆ ಎಂದು ಬಹಳ ಸಂಕಟದಿಂದ ಹೇಳಬೇಕಾಗಿದೆ. ಸುಮಾರು 50 ರಿಂದ 100 ರೂಪಾಯಿಗಳವರಿಗೆ ಸಂಬಳ ಬರುವ ಸಬ್ ಓವರ್‌ಸೀರುಗಳು 200—300ರೂಪಾಯಿ ಸಂಬಳ ಬರುವ ಇಂಜನೀಯರುಗಳು ಬೆಂಗಳೂರಿನಲ್ಲಿ 15—20 ಸಾವಿರ ರೂಪಾಯಿ ಬೆಲೆಬಾಳುವ ಬಂಗಲೆಗಳನ್ನು ಕಟ್ಟಿದ್ದಾರೆ. ಹೆಂಡತಿಯ ಹೆಸರಿನಲ್ಲಿ, ಮಕ್ಕಳ ಹೆಸರಿನಲ್ಲಿ ಮತ್ತು ತಾಯಿಯ ಹೆಸರಿನಲ್ಲಿ ಹೀಗೆ ಬೇರೆ ರೀತಿಯಾಗಿ ಬೇಕಾದಷ್ಟು ಆಸ್ತಿಪಾಸ್ತಿಗಳನ್ನು ಮಾಡಿರುವುದು ನನಗೆ ಗೊತ್ತಿದೆ. ಇಂತಹ ಚಿಕ್ಕ ಸಂಬಳ ಬರುವ ಅಧಿಕಾರಿಗಳು ಈ ರೀತಿಯಾಗಿ ಇಷ್ಟು ಬೇಗ ಲಂಚರುಷುವತ್ತುಗಳಿಂದ ಆಸ್ತಿ ಮಾಡಿಕೊಂಡಿರುವ ವಿಚಾರದಲ್ಲಿ ಅನೀತಿ, ಅನ್ಯಾಯಗಳನ್ನು ತಡೆಗಟ್ಟಲು ಸರ್ಕಾರ ಏನು ಕಾರ್ಯಕ್ರಮಗಳನ್ನು ಕೈಗೊಂಡಿಲ್ಲ. ನಾನು ಕಾಂಗ್ರೆಸ್‌ನ್ನು ಟೀಕೆಮಾಡುತ್ತೇನೆಂದು ಭಾವಿಸಬಾರದು. ಅನೇಕ ಕಡೆ ಇರುವ ತಪ್ಪನ್ನು ಸರ್ಕಾರದ ಗಮನಕ್ಕೆ ತಂದು ಸರಿಪಡಿಸಬೇಕಾದುದು ಸದಸ್ಯರಾದ ನಮ್ಮ ಕರ್ತವ್ಯ. ನಮ್ಮ ಲಕ್ಕವಳ್ಳಿಯೋಜನೆಗೆ ಲಕ್ಷಾಂತರ ರೂಪಾಯಿಗಳು ಖರ್ಚಾಗುತ್ತಿದ್ದರೂ ಈ ರೀತಿಯಾಗಿ ನಡೆಯುತ್ತಿರುವ ಅನ್ಯಾಯ, ಅನೀತಿಗಳನ್ನು ತಡೆಗಟ್ಟಲಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಇಂತಹ ಅನ್ಯಾಯ, ಅಧರ್ಮ ಮತ್ತು ಅನೀತಿಗಳು ಈಗಲೂ ನಡೆಯುತ್ತಿವೆ. ಈಗಿರತಕ್ಕ ಮಾನ್ಯ ಮಂತ್ರಿಗಳು ಬೇಕಾದರೆ ಒಬ್ಬ ಒಬ್ಬ ಸಿ.ಐ.ಡಿ.ಯನ್ನು ಅಲ್ಲಿಗೆ ಕಳುಹಿಸಿ ರಿಪೋರ್ಟು ತರಿಸಿಕೊಂಡರೆ ನಾನು ಹೇಳಿದ ವಿಷಯಗಳೆಲ್ಲ ನಿಜವಾದವೆಂದು ಅವರಿಗೇ ಗೋಚರವಾಗುತ್ತದೆ.

ಅಲ್ಲಿರುವ ಅಧಿಕಾರಿಗಳಲ್ಲಿ ತುಂಬಿರುವಷ್ಟು ಅಧರ್ಮ. ಅನೀತಿ, ಅದರಲ್ಲಿಯೂ ಈ ಲಕ್ಕವಳ್ಳಿ ಯೋಜನೆಯಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ನಾನು ಈ ವಿಚಾರವನ್ನು ಈಗ ಸುಮಾರು ನಾಲ್ಕೈದು ವರ್ಷಗಳಿಂದಲೂ ಸರ್ಕಾರದ ಗಮನಕ್ಕೆ ತಂದರೂ ಕೂಡ ಏನೂ ಪ್ರಯೋಜನವಾಗಿಲ್ಲ ಎಂದು ನಾನು ಬಹಳ ಸಂಕಟದಿಂದ ಹೇಳಬೇಕಾಗಿದೆ.

4 P.M.

ವಿಶಾಲ ಮೈಸೂರಾದ ಮೇಲೆ ನಮ್ಮೆಲ್ಲರಿಗೂ ಹಿರಿಯರೂ, ಯಜಮಾನರೂ, ನಾಯಕರೂ ಆಗಿರತಕ್ಕಂಥ ಮಾನ್ಯ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾದರು. ಅವರು ಒಳ್ಳೆಯ ಶುಭ ದಿವಸ ಮುಖ್ಯ ಮಂತ್ರಿಗಳಾಗಿ ಮೂರು ನಾಲ್ಕು ತಿಂಗಳಿಂದ ಚೆನ್ನಾಗಿ ರಾಜ್ಯಭಾರ ಮಾಡಿದರು. ಅವರ ಮಂತ್ರಿ ಮಂಡಳದವರೂ ಆಡಳಿತವನ್ನು ಬಹಳ ಚೆನ್ನಾಗಿ ನಿರ್ವಹಿಸುತ್ತಿದ್ದಾರೆ. ಆದರೆ ಆಯಾ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳಿಗೆ ಒಂದು ಮಾತನ್ನು ಹೇಳಬೇಕಾಗಿದೆ. ಅವರು ಪ್ರವಾಸ ಹೋದ ಕಾಲದಲ್ಲಿ ಅಲ್ಲಲ್ಲಿ ಸಮಾರಂಭಗಳಲ್ಲಿ ಭಾಗವಹಿಸಿ ಹಾರ ಹಾಕಿಸಿಕೊಂಡು ಬರುವುದನ್ನು ಮಾತ್ರ ಮಾಡದೆ ಸಂಬಂಧಪಟ್ಟ ಇಲಾಖೆಗಳಲ್ಲಿ ಏನೇನು ನ್ಯೂನತೆಗಳಿವೆ ಎಂಧು ಕಂಡುಹಿಡಿದು ಅಂಥ ನ್ಯೂನತೆಗಳನ್ನು ಬಂದೋಬಸ್ತು ಮಾಡುವ ಪದ್ಧತಿಯನ್ನು ಇನ್ನು ಮುಂದಾದರೂ ಇಟ್ಟುಕೊಳ್ಳಬೇಕು ಎಂದು ನಾನು ಸಲಹೆ ಕೊಡುತ್ತಾ ಇಲ್ಲ—ಅವರ ಜ್ಞಾಪಕತ್ಕೆ ತರುತ್ತಿದ್ದೇನೆ. ಅನೇಕ ಮಂತ್ರಿಗಳು, ಹಿಂದಿನವರೂ ಅಷ್ಟೆ, ಈಗಿನವರೂ ಅಷ್ಟೆ, ಪ್ರವಾಸಮಾಡಿದ ಕಾಲದಲ್ಲಿ ಇಲಾಖೆಯ ಕೆಲಸ ಕಾರ್ಯಗಳು ಹೇಗೆ ನಡೆಯುತ್ತಿವೆ ಎಂದು ನೋಡದೆ ಇರುವುದು ರೂಢಿಗೆ ಬಂದಿದೆ. ಹಾಗೆ ಮಾಡದೆ, ಆಯಾ ಇಲಾಖೆಗಳಲ್ಲಿರುವ ಕುಂದುಕೊರತೆಗಳು, ಅಲ್ಲಲ್ಲಿ ನಡೆಯುವ ಅನ್ಯಾಯಗಳು ಇವನ್ನೆಲ್ಲ ನೋಡಿ ಸರಿಪಡಿಸಬೇಕು. ಮರಾಮತ್ತು ಇಲಾಖೆಯಲ್ಲಿ ಕೆರೆ, ಕಟ್ಟೆ, ಭಾವಿ ಮುಂತಾದ ಎಷ್ಟೋ ಕೆಲಸಗಳನ್ನು ಬಹಳ ಚೆನಾಗಿ ಮಾಡಿದ್ದಾರೆ. ಕಾಂಗ್ರೆಸ್ ಸರ್ಕಾರ ಬಂದಮೇಲೆ ಈ ಐದು ವರ್ಷಗಳಲ್ಲಿ ಅನೇಕ ಕೆಲಸಗಳನ್ನು ಮಾಡಿದ್ದಾರೆ. ಮಾನ್ಯ ಮಂತ್ರಿಗಳಾದ ಶ್ರೀ ವೀರಣ್ಣಗೌಡರು ನೀರಾವರಿ ಕೆಲಸದಲ್ಲಿ ಬಹಳ ಅನುಭವಸ್ಥರು. ಅವರು ವಿಧಾನ ಸಭೆಯ ಸದಸ್ಯರಾಗಿ ಪುನಃ ಆರಿಸಿ ಬಂದಿದ್ದಾರೆ. ಮುಂದೆಯೂ ಮಂತ್ರಿಗಳಾಗಬಹುದು ಎಂಬ ಆಸೆ ನನಗಿದೆ. ಆದರೂ ಅವರು ಪುನಃ ಮಂತ್ರಿಗಳಾಗುವುದರೊಳಗೆ, ಈಗಿನ ಅವಧಿಯಲ್ಲಿಯೇ ಲಕ್ಕವಳ್ಳಿ ಕೆಲಸದ ಸಂಬಂಧದಲ್ಲಿ ತಕ್ಕ ಬಂದೋಬಸ್ತು ಮಾಡಬೇಕು ಎಂದು ಒತ್ತಾಯವಾಗಿ ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಷಯದಲ್ಲಿ ಒಂದು ವಿಚಾರ ಹೇಳಬೇಕಾಗಿದೆ ಈಗ ಶಾಲೆಗಳಿಗೆ ನಾಲ್ಕೈದು ತಿಂಗಳು ರಜ ಕೊಟ್ಟಿದ್ದಾರೆ. ಹುಡುಗರೆಲ್ಲ ಕಲಿತಿರುವ ಪಾಠಗಳನ್ನು ಮರೆತುಬಿಟ್ಟಿದ್ದಾರೆ. ಹೀಗೆ ಒಂದೇಸಲ ಪಾಠಶಾಲೆಗಳಿಗೆ ನಾಲ್ಕು ತಿಂಗಳ ರಜ ಕೊಟ್ಟರೆ ಹುಡುಗರ ಗತಿ ಏನು? ಉಪಾಧ್ಯಾಯರುಗಳೂ ಸಹ ಪಾಠ ಕ್ರಮವನ್ನು ಮರೆಯುತ್ತಾರೆಯೋ ಏನೋ ಹೇಳುವುದಕ್ಕಾಗುವುದಿಲ್ಲ. ಪುನಃ ಪಾಠಶಾಲೆಗಳನ್ನು ತೆರೆಯುವುದರೊಳಗಾಗಿ ಹುಡುಗರಿಗೆಲ್ಲ ಪುಸ್ತಕ, ಸ್ಲೇಟು ವಗೈರೆ ಹೊಸದಾಗಿ ತೆಗೆದುಕೊಡುವ ಪರಿಸ್ಥಿತಿ ಒದಗುತ್ತದೆ. ಈಗ ಕೊಟ್ಟಿರುವ ರಜಾ ಕಾಲದಲ್ಲಿ ಉಪಾಧ್ಯಾಯರುಗಳಿಗೆ ನಾಲ್ಕು ತಿಂಗಳ ಸಂಬಳ ಪುಕ್ಕಟೆ ಕೊಡಬೇಕಾದರೆ ಅದು ಯಾರ ದುಡ್ಡು ಸ್ವಾಮಿ? ಅಲ್ಲದೆ ಹುಡುಗರೆಲ್ಲ ಈ ಕಾಲದಲ್ಲಿ ಪೋಲಿ ಬೀಳುವಂತೆ ಮಾಡುವುದು ನ್ಯಾಯವೇ ಎಂದು ಕೇಳುತ್ತೇನೆ. ಈಗ ಮಾಡಿರುವುದಕ್ಕೆ ಬದಲಾಗಿ ಮಧ್ಯೆ ಒಂದೆರಡು ತಿಂಗಳು ಶಾಲೆಗಳನ್ನು ನಡೆಸಿದ್ದರೆ ಹುಡುಗರು ಬುದ್ಧಿವಂತರಾಗುತ್ತಿದ್ದರು ಮತ್ತು ಉಪಾಧ್ಯಾಯರೂ ಕೆಲಸ ಮಾಡಿದಂತಾಗುತ್ತಿತ್ತು ಎಂದು ಹೇಳುತ್ತೇನೆ.

ಈಗ ಎಲ್ಲಿ ನೋಡಿದರೂ ಸತ್ಯಾಗ್ರಹ ಬಹಳ ಜೋರಾಗಿದೆ. ಪಟೇಲರು ಮತ್ತು ಶ್ಯಾನುಭೋಗರು ಈಗ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ. ಕಂದಾಯ ವಸೂಲ್ಮಾಡುವುದಕ್ಕೆ ಬರುತ್ತಿಲ್ಲ. ಈಗ ಮಾರ್ಚಿ ತಿಂಗಳಾದರೂ ಯಾರೂ ಕಂದಾಯ ಕೇಳುವುದಕ್ಕೆ ಬಂದಿಲ್ಲ. ಸರಕಾರದವರು ಕಂದಾಯವನ್ನು ವಸೂಲು ಮಾಡುವುದಕ್ಕೆ ಯಾವ ವ್ಯವಸ್ಥೆಯನ್ನೂ ಮಾಡಿಲ್ಲ. ಇದೂ ಅಲ್ಲದೆ ಕಾರ್ಖಾನೆಗಳಲ್ಲಿಯೂ ಸತ್ಯಾಗ್ರಹ ಮಾಡುತ್ತಿದ್ದಾರೆ. ಮೊನ್ನೆ ಟೆಲಿಫೋನ್ ಕಾರ್ಖಾನೆಯಲ್ಲಿ ಸತ್ಯಾಗ್ರಹ ಮಾಡಬೇಕೆಂದಿರುವುದಾಗಿ ತಿಳಿಸಿದ್ದರು. ಈಗ ಎಲ್ಲರೂ ಸತ್ಯಾಗ್ರಹ ಮಾಡುವುದಕ್ಕೆ ಪ್ರಾರಂಭಿಸಿದ್ದಾರೆ. ಯಾವುದಾದರೂ ಕೆಲಸವನ್ನು ಸಾಮಾನ್ಯವಾಗಿ ಜಾಗ್ರತೆಯಾಗಿ ಪೂರೈಸಿ, ಸಂಬಂಧಪಟ್ಟವರಿಗೆ ಕೊಡತಕ್ಕ ಸಂಬಳ ಸಾರಿಗೆಗಳನ್ನು ಜಾಗ್ರತೆ ಕೊಟ್ಟು ಬಿಕ್ಕಟ್ಟನ್ನು ಪರಿಹರಿಸತಕ್ಕ ಕೆಲಸ ಮಾಡುತ್ತಾರೆಂದು ನಂಬಿದ್ದೇನೆ.

ಸರ್ಕಾರದವರು ನಾಲ್ಕೈದು ವರ್ಷಗಳಿಂದ ಚೆನ್ನಾಗಿ ಕೆಲಸ ಮಾಡಿದ್ದಾರೆಂದು ರಾಜ್ಯಪಾಲರು ಹೇಳಿರುವುದನ್ನು ನಾನು ವಿಮರ್ಶೆ ಮಾಡುತ್ತ ಹೋದರೆ ದಿವಸಗಟ್ಟಲೆ ಬೇಕಾಗುತ್ತದೆ. ಈಗಿರುವ ಮಂತ್ರಿ ಮಂಡಲ, ಹಿಂದೆ ಇದ್ದ ಮಂತ್ರಿ ಮಂಡಲ ಮತ್ತು ಶಾಸನಸಭೆ ಮಾಡಿರುವ ಕೆಲಸ ಮೈಸೂರು ದೇಶದ ಇತಿಹಾಸದಲ್ಲಿ ಚರಿತ್ರಾರ್ಹವಾದದ್ದು ಎಂದು ಹೇಳುತ್ತೇನೆ. ಈಗ ಮೈಸೂರು ದೇಶವನ್ನು ವರ್ಣನೆ ಮಾಡುವುದಕ್ಕೆ ಹೋದರೆ ಹೊತ್ತಾಗುತ್ತದೆ. ಈಗಿನ ನಮ್ಮ ಅಧ್ಯಕ್ಷರು ಹಿಂದೆ ಇದ್ದ ಅಧ್ಯಕ್ಷರಿಗಿಂತಲೂ ಚತುರರು, ಗುಣವಂತರು, ಬಹಳ ಚುರುಕು ಮತ್ತು ಬುದ್ಧಿವಂತರು. ಇಂಥವರು ನಮಗೆ ದೊರೆತದ್ದು ಒಂದು ವಿಶೇಷ. ನಾನು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ಮರಾಮತ್ತು ಇಲಾಖೆಗೆ ಹೆಚ್ಚು ನಿಗಾ ಕೊಡಬೇಕು ಎಂದು ಮತ್ತೊಮ್ಮೆ ಸೂಚಿಸಿ, ರಾಜ್ಯಪಾಲರ ಭಾಷಣಕ್ಕೆ ಅವರನ್ನು ವಂದಿಸಿ, ನಮ್ಮ ಮುಂದಿರುವ ಸೂಚನೆಯನ್ನು ಅನುಮೋದಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಮಾನ್ಯಸಭಾಪತಿಗಳೇ, ಈಗ ನಮ್ಮ ದೇಶದ ಮುಂದೆ, ಸರ್ಕಾರದ ಮುಂದೆ ಪ್ರಾಮುಖ್ಯವಾಗಿರತಕ್ಕ ವಿಷಯವೆಂದರೆ ಗ್ರಾಮ ನೌಕರರ ಅಂತಸ್ತಿನ ವಿಚಾರ ಮತ್ತು ಅವರ ಸಂಬಳ ಸಾರಿಗೆಗಳ ವಿಚಾರ ಎಂದು ನನ್ನ ಅಭಿಪ್ರಾಯ. ಶ್ರೀ ಚಂದ್ರಶೇಖರಯ್ಯನವರು ಆ ವಿಚಾರವಾಗಿ ಸ್ವಲ್ಪ ಪ್ರಸ್ತಾಪ ಮಾಡಿದರು. ಈ ವಿಚಾರ ಈಗ ಸರ್ಕಾರದ ಗಮನಕ್ಕೆ ಬಂದಿರುವುದು ಬಹಳ ಸಂತೋಷಕರವಾದ ಸಂಗತಿ. ಗ್ರಾಮ ನೌಕರರು—ಶ್ಯಾನುಭೋಗರು ಮತ್ತು ಪಟೇಲರು—ಸಮಾಜದ ಬಹು ಮುಖ್ಯವಾದ ಅಂಗವೆನ್ನುವುದನ್ನು ತಾವೆಲ್ಲರೂ ಒಪ್ಪಿಕೊಳ್ಳಬೇಕು. ಈ ಸಮಸ್ಯೆ ದೇಶದ ಮುಂದೆ ಬಹಳ ದಿವಸಗಳಿಂದಲೂ ಇದೆ. ಬಹು ಹಿಂದೆಯೇ ಪರಿಹರಿಸಬೇಕಾಗಿದ್ದ ಈ ಸಮಸ್ಯೆಯನ್ನು ಕಾರಣಾಂತರಗಳಿಂದ ಹಿಂದಿನ ಸರ್ಕಾರದವರು

(ಶ್ರೀ ಜಿ. ಎ. ತಿಮ್ಮಪ್ಪಗೌಡ.)

ಮುಂದೂಡುತ್ತಾ ಬಂದರು. ಈ ಗ್ರಾಮ ನೌಕರರು ತಮ್ಮ ತೊಂದರೆಗಳನ್ನು ಪರಿಹಾರಮಾಡಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಈಗ ಕೆಲವು ದಿವಸಗಳ ಹಿಂದೆ ಚುನಾವಣೆಗಳು ಪ್ರಾರಂಭವಾದವು; ಮತ್ತು ಈಗ ಕಂದಾಯ ವಸೂಲ್ಮಾಡುವ ಕಾಲ. ಇಂಥ ಸುಸಮಯವನ್ನು ತೆಗೆದುಕೊಂಡು, ನಮಗೆಲ್ಲ ತಿಳಿದಿರುವ ಹಾಗೆ, ಗ್ರಾಮ ನೌಕರರು ಸತ್ಯಾಗ್ರಹ ಹೂಡಿದರು. ಇದು ಜನತೆಯ ಮೇಲೆ ಒಂದು ಪರಿಣಾಮವನ್ನುಂಟುಮಾಡಿತು. ಅದರಲ್ಲೂ ಕೂಡ ಚುನಾವಣೆಯಲ್ಲಿ ಇವರ ಪ್ರಭಾವ ಬಹಳವಾಯಿತು ಎಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಕಾರಣವೇನೆಂದರೆ, ಸರ್ಕಾರದವರು ಗ್ರಾಮ ನೌಕರರನ್ನು ಸರಕಾರಿ ನೌಕರರು ಎಂದು ಒಂದು ಕಡೆ ಪರಿಗಣಿಸುತ್ತಿದ್ದಾರೆ; ಇನ್ನೊಂದು ಕಡೆ "ನೀವು ಸಾರ್ವಜನಿಕ ಜೀವನದಲ್ಲಿ ಬಹಳ ಮುಖ್ಯವಾದ ಅಂಗ. ನೀವು ಸಂಬಳ ಸಾರಿಗೆಗಳ ಕಡೆಗೆ ಹೆಚ್ಚು ಗಮನ ಕೊಡಬೇಕಾಗಿಲ್ಲ. ನಿಮಗೆ ಕೊಡುವುದು ಗೌರವಯುತವಾದ ಸಂಭಾವನೆಯೆಂದು ತಿಳಿದುಕೊಳ್ಳಬೇಕು." ಎಂಬುದಾಗಿ ಹೇಳುತ್ತಿದ್ದಾರೆ. ಈಗ ಗ್ರಾಮ ನೌಕರರು ಹೇಳುವುದೇನೆಂದರೆ, "ಸಣ್ಣ ನೌಕರರು ಒಗ್ಗಟ್ಟಾಗಿ, ಒತ್ತಾಯದಿಂದ, ಅವರ ಪ್ರಭಾವವನ್ನು ಸರ್ಕಾರದ ಮೇಲೆ ಬೀರಿ ತಮ್ಮ ಸಂಬಳ ಸಾರಿಗೆಗಳನ್ನು ಹೆಚ್ಚಿಸಿಕೊಂಡರು. ನಮಗೆ ಸಂಭಾವನೆ ಕೊಡುತ್ತಿದ್ದೇವೆಂದು ಹೇಳುತ್ತೀರಿ. ಈ ಸಂಭಾವನೆ ನೂರಾರು ವರ್ಷಗಳ ಹಿಂದೆ ಗೊತ್ತುಮಾಡಿದ್ದುದು. ಕೆಲವರು ಶ್ಯಾನುಭೋಗರು ಮತ್ತು ಪಟೇಲರಿಗೆ ವರ್ಷಕ್ಕೆ ಕೇವಲ ನಾಲ್ಕೈದು ರೂಪಾಯಿಗಳು ಸಂಬಳ ಮಾತ್ರ ಬರುತ್ತದೆ. ಆದರೂ ಸಹ ಸರ್ಕಾರಿ ನೌಕರರು—ರೆವೆನ್ಯೂ ಇಲಾಖೆಯವರು, ಪೋಲೀಸ್ ಇಲಾಖೆಯವರು, ಅಥವಾ ಇತರ ಇಲಾಖೆಯವರು—ಯಾರು ಬಂದಾಗಲೂ ಕೂಡ ವರ್ಷವೆಲ್ಲ ನಾವು ಅವರಿಗೆ ಜವಾಬು ಕೊಡಬೇಕು; ಅವರು ಹೇಳುವ ಕೆಲಸಗಳನ್ನೆಲ್ಲ ಮಾಡಬೇಕು; ಕಂದಾಯಗಳನ್ನು ವಸೂಲ್ಮಾಡಬೇಕು. ನಮ್ಮ ಜವಾಬ್ದಾರಿ ವಿಪರೀತವಾಗಿದೆ. ನಮಗೆ ಕೊಡುತ್ತಿರುವ ಸಂಭಾವನೆ ಬಹಳ ಕಡಮೆ" ಎಂದು ಈ ರೀತಿಯಲ್ಲಿ ಒಂದು ಅಸಮಾಧಾನದಿಂದ ಈ ಗ್ರಾಮ ನೌಕರರು ಕೂಡಿದ್ದರು. ಇದರ ಜೊತೆಗೆ "ನಾವು ಸರಕಾರಿ ನೌಕರರಲ್ಲ ಎಂದು ಪರಿಗಣಿಸುವುದಾದರೆ ಚುನಾವಣೆಗಳಲ್ಲಿ ಸ್ಪರ್ಧಿಸುವುದಕ್ಕೆ ನಮಗೆ ಅವಕಾಶ ಕೊಡಿ" ಎಂದು ಸರ್ಕಾರದವರನ್ನು ಕೇಳಿದರು. ಆದರೆ ಇದಕ್ಕೆ ಸರ್ಕಾರದವರು ಅವಕಾಶ ಕೊಡಲಿಲ್ಲ. ಈ ಎರಡು ಕಾರಣಗಳಿಂದ, ಎಂದರೆ ಇವರ ಸಂಬಳ ಸಾರಿಗೆಗಳನ್ನು ಹೆಚ್ಚಿಸದೆ ಹೋದದ್ದು ಮತ್ತು ಹೆಚ್ಚಿಸುವುದಕ್ಕೆ ತಕ್ಷಣವೇ ಕಾರ್ಯಕ್ರಮವನ್ನು ಸರ್ಕಾರದವರು ಕೈಕೊಳ್ಳದೆ ಹೋದದ್ದು ಮತ್ತು ಚುನಾವಣೆಗಳಲ್ಲಿ ಅವರಿಗೆ ಸ್ಪರ್ಧಿಸುವುದಕ್ಕೆ ಅವಕಾಶ ಕೊಡದಿದ್ದುದು, ಇದರಿಂದ ಅವರು ನಿರಾಶರಾಗಿ ಮೊನ್ನೆ ನಡೆದ ಚುನಾವಣೆಗಳಲ್ಲಿ ಶ್ರೀ ಗೋಪಾಲಗೌಡರು ಹೇಳಿದ ಹಾಗೆ, ಸರ್ಕಾರವೇ ಕಾಂಗ್ರೆಸ್, ಕಾಂಗ್ರೆಸ್ಸೇ ಸರ್ಕಾರ ಎಂದು ಪ್ರಚಾರ ನಡೆಸಿದರು. ಮತ್ತು ಕಾಂಗ್ರೆಸ್ ಪಕ್ಷಕ್ಕೆ ನಾವು ತೊಂದರೆ ಕೊಟ್ಟರೆ, ಕಾಂಗ್ರೆಸ್ ಪಕ್ಷಕ್ಕೆ ನಾವು ಬೆಂಬಲ ಕೊಡದೆ ಹೋದರೆ ನಮ್ಮ ಛಲ ತೀರುತ್ತದೆ ಮತ್ತು ನಮ್ಮ ಒತ್ತಾಯವನ್ನು ಸರ್ಕಾರದ ಮೇಲೆ ಹಾಕಿದಂತಾಗುತ್ತದೆ ಎಂದು ಭಾವಿಸಿದರು. ಹೀಗಾಗಿ ಅನೇಕ ಕಡೆ ಶ್ಯಾನುಭೋಗರು ಮತ್ತು ಪಟೇಲರು ಆಡಳಿತ ಪಕ್ಷವೇ ಕಾಂಗ್ರೆಸ್ ಪಕ್ಷವೆಂದು ಅವರಿಗೆ ಬೆಂಬಲವನ್ನು ನೀಡುವುದಕ್ಕೆ ನಿರಾಕರಿಸಿದರು. ಅನೇಕ ಕಡೆ ಬಹಿರಂಗವಾಗಿ ಕಾಂಗ್ರೆಸ್ ಪಕ್ಷಕ್ಕೆ ವಿರೋಧವಾಗಿ ಕೂಡ ಅವರುಗಳು ಕೆಲಸ ಮಾಡಿದರು.

ಹೀಗೆ ಏಕೆ ಹೇಳುತ್ತಾ ಇದ್ದೇನೆ ಎಂದರೆ, ಪಟೇಲ, ಶ್ಯಾನುಭೋಗರ ವಿಷಯ ಎಲ್ಲರಿಗೂ ಕೂಡ ಗೊತ್ತಿದೆ. ಈ ಸಮಸ್ಯೆ ಬಹಳ ಪ್ರಾಮುಖ್ಯವಾದ ಸಮಸ್ಯೆ. ಇದನ್ನು ಸರ್ಕಾರದವರು ಬಹಳ ಜಾಗರೂಕತೆಯಿಂದ ಬಗೆಹರಿಸಬೇಕಾಗಿದೆ. ಮುಂದೆ ಬರತಕ್ಕ ಸರ್ಕಾರ ಈ ಸಮಸ್ಯೆಯನ್ನು ಬಹಳ ತೀವ್ರ ರೀತಿಯಲ್ಲಿ ಗಮನಕ್ಕೆ ತೆಗೆದುಕೊಂಡು ಅವರಿಗೆ ಅನುಕೂಲಗಳನ್ನು ಕಲ್ಪಿಸಿ ಕೊಡಬೇಕು. ಅವರಿಗೆ ಸಂಬಳಸಾರಿಗೆಗಳನ್ನು ಕೊಡುವುದು ಸಾಧು, ಅದು ದೇಶದ ಅಭಿಪ್ರಾಯಕ್ಕನುಗುಣವಾಗಿದೆ ಎಂದು ಕಂಡುಬಂದಲ್ಲಿ ಅವರಿಗೆ ಸಂಬಳಸಾರಿಗೆಗಳನ್ನು ಕೊಡಬೇಕು; ಅದು ಸಾಧ್ಯವಿಲ್ಲದಿದ್ದರೆ, ಈ ಪ್ರಜಾಪ್ರಭುತ್ವದಲ್ಲಿ ವಂಶಪಾರಂಪರ್ಯವಾಗಿ ಒಂದು ಹಕ್ಕುದಾರಿಯಂತೆ ಕೆಲಸಕಾರ್ಯಗಳು ನಡೆಯುವುದು, ಹುದ್ದೆಗಳು ಮುಂದುವರಿಯುವುದು ಈ ಕಾಲಕ್ಕನುಗುಣವಾಗಿಲ್ಲ, ಪ್ರಜಾಪ್ರಭುತ್ವ ರೀತ್ಯ ವಿರುದ್ಧ ಎಂಬುದನ್ನು ತಿಳಿದುಕೊಂಡು, ಆ ವಂಶಪಾರಂಪರ್ಯವಾದ ಹಕ್ಕುಗಳನ್ನು ತೆಗೆದುಹಾಕಿ, ಹಿಂದಿನ ಮುಂಬೈ ಸರ್ಕಾರ, ಹಿಂದಿನ ಕೊಡಗು ಸರ್ಕಾರ ಏನೊಂದು ಸಂಭಾವನೆಯನ್ನು ಸರ್ಕಾರಿ ನೌಕರರಿಗೆ ಕೊಡುವ ರೀತಿಯಲ್ಲಿ ಅವರಿಗೆ ಕೊಟ್ಟರೋ ಅದೇ ರೀತಿ ಅವರನ್ನೂ ಸರ್ಕಾರಿ ನೌಕರರು ಎಂದು ಪರಿಗಣಿಸಿ ಸಂಬಳದ ಏರ್ಪಾಡನ್ನು ಮಾಡಿ ಅವರಿಗೆ ವರ್ಗಾವಣೆ ಮೊದಲಾದುವುಗಳನ್ನು ಮಾಡುವುದಕ್ಕೂ ಕೂಡ ಅವಕಾಶ ಕಲ್ಪಿಸಿ ಆ ಪದ್ಧತಿಯನ್ನು ಜಾರಿಗೆ ತರಬೇಕು. ಕೆಲವು ಗ್ರಾಮ ನೌಕರರು ನಿಜವಾಗಿಯೂ ಕೂಡ ದೇಶಕ್ಕೆ ಉತ್ತಮವಾದ ಸೇವೆ ಸಲ್ಲಿಸಿದ್ದಾರೆ. ಅವರುಗಳಲ್ಲಿ ಈ ಒಂದು ಅಸಮಾಧಾನ ಮುಂದುವರಿಯುವುದಕ್ಕೆ ಅವಕಾಶ ಕೊಟ್ಟರೆ ಅದು ದೇಶದ ಹಿತದೃಷ್ಟಿಯಿಂದಲೂ ಮತ್ತು ಗ್ರಾಮಗಳ ಐಕಮತ್ಯದ ಹಿತದೃಷ್ಟಿಯಿಂದಲೂ ಕೂಡ ಸಾಧುವಾದದ್ದಲ್ಲ. ಸರ್ಕಾರದವರು ಈ ವಿಷಯಕ್ಕೆ ಬಹುಬೇಗ ಗಮನಕೊಟ್ಟು ಈ ಸಮಸ್ಯೆಯನ್ನು ಸಮರ್ಪಕವಾಗಿ ಬಗೆಹರಿಸಬೇಕೆಂದು ಬಹಳ ಒತ್ತಾಯಪೂರ್ವಕವಾಗಿ ಸರ್ಕಾರದವರನ್ನು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ನಿರುದ್ಯೋಗಕ್ಕೆ ಯಾವ ಪರಿಹಾರವನ್ನೂ ಸರ್ಕಾರದವರು ಏರ್ಪಾಡು ಮಾಡಿಲ್ಲ ಎಂದು ಹೇಳಿ ಶ್ರೀಮಾನ್ ಗೋಪಾಲಗೌಡರು ಮತ್ತು ಇತರರು ಹೇಳಿದರು. ಇದು ಸರಿಯಾದದ್ದಲ್ಲ. ಈ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ನಿರುದ್ಯೋಗ ಸಮಸ್ಯೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಕಾದಷ್ಟು ಹಣವನ್ನು ಒದಗಿಸಿರುವುದೂ ಅಲ್ಲದೆ ಅದಕ್ಕೆ ಸಾಕಾದಷ್ಟು ಯೋಜನೆಯನ್ನೂ ಕೂಡ ತಯಾರಿಸಿರುವುದನ್ನು ನಮ್ಮ ಗಮನಕ್ಕೆ ತೆಗೆದುಕೊಳ್ಳಬೇಕೆಂದು ನನ್ನ ಸ್ನೇಹಿತರನ್ನು ಕೇಳಿಕೊಳ್ಳುತ್ತೇನೆ.

ಆಹಾರದ ವಿಷಯದಲ್ಲೂ ಕೂಡ ಅದನ್ನು ಒಂದು ಪೆಡಂಭೂತವಾಗಿ ಮಾಡಿ ಹೇಳಿದರು. ಆಹಾರದ ಪರಿಸ್ಥಿತಿ ಇವೊತ್ತಿನ ದಿವಸ ನೋಡಿದರೆ ಕ್ಷಾಮದ ಸೂಚನೆ ಕಂಡುಬರುತ್ತದೆ ಎಂದು ಹೇಳಿದರು. ಮೊನ್ನೆ ತಾನೆ ಚುನಾವಣೆ ಆಯಿತು. ಆ ಚುನಾವಣೆಯ ಸಂದರ್ಭದಲ್ಲಿ ಇದರ ಪ್ರಚಾರವನ್ನು

ಸಾಕಾದಷ್ಟು ಮಾಡಿದರು. ಅದೇ ಧ್ವನಿಯನ್ನು ಅವರು ಇನ್ನೂ ಮರೆತಿಲ್ಲ. ಅದನ್ನು ಪುನಃ ಜ್ಞಾಪಕ ಮಾಡಿಕೊಂಡು ಈ ಅಸೆಂಬ್ಲಿಯಲ್ಲಿ ಹೇಳುತ್ತಾ ಇದ್ದಾರೆ. ದೇಶದಲ್ಲ ತಮಗೆಲ್ಲಾ ಗೊತ್ತಿರುವ ಹಾಗೆ ಅನೇಕ ನೀರಾವರೀ ಕಾಮಗಾರಿ ಕೆಲಸಗಳು, ಮತ್ತು ಕೆರೆಗಳ ಜೀರ್ಣೋದ್ಧಾರದ ಕೆಲಸಗಳು ಹಿಂದಿನ 20 ವರ್ಷಗಳ ಅವಧಿಯಲ್ಲಿ ನಮ್ಮ ದೇಶದಲ್ಲ ಯಾವ ಕಾಲದಲ್ಲೂ ಆಗದೇ ಇರತಕ್ಕ ಪ್ರಮಾಣದಲ್ಲಿ ನಡೆದು ಇವೊತ್ತಿನ ದಿವಸ ಆಹಾರದ ಬೆಳೆಯನ್ನು ವಿಪರೀತವಾಗಿ ಹೆಚ್ಚಿಸಿರುವುದರಿಂದ ದೇಶದಲ್ಲಿ ಸಾಕಾದಷ್ಟು ಆಹಾರದ ಬೆಳೆಯಾಗಿದೆ ಎನ್ನುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಸಂದರ್ಭದಲ್ಲಿ ಆಹಾರ ಧಾನ್ಯದ ಬೆಲೆಯ ವಿಚಾರವನ್ನು ಅವರು ಪ್ರಸ್ತಾಪ ಮಾಡಿದರು. ಈಗೇನೋ ಧಾರಣೆವಾಸಿ ಹೆಚ್ಚಾಗಿದೆ. ಆದರೆ ಶ್ರೀಮಾನ್ ಚಿಕ್ಕಲಿಂಗಯ್ಯನವರು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ರೈತರ ಸಭೆಗಳಲ್ಲಿ ಅವರನ್ನು ದ್ದೇಶಿಸಿ ಮಾತನಾಡುವಾಗ 'ಸರ್ಕಾರದವರು ಬೆಲೆಯನ್ನು ಕಡಮೆ ಮಾಡುವುದು ಯೋಗ್ಯವಾದುದಲ್ಲ ಬೆಲೆಯನ್ನು ನಿರ್ಧರ ಮಾಡಬೇಕು ; ಈಗಿರತಕ್ಕಂಥ ಬೆಲೆಗಿಂತಲೂ ಕೂಡ ಕಡಮೆ ಹೋಗದ ರೀತಿಯಲ್ಲಿ ಸರ್ಕಾರದವರು ಏರ್ಪಾಡು ಮಾಡಬೇಕು' ಎಂದು ಹೇಳಿ, ರೈತರ ಕಾನ್ಫರೆನ್ಸುಗಳಲ್ಲಿ ನಿರ್ಣಯಗಳನ್ನು ಅಂಗೀಕಾರ ಮಾಡಿಸಿದರು. ಅದೇ ಮಾನ್ಯ ಸದಸ್ಯರು ಮತ್ತೆ ಇಲ್ಲಿಗೆ ಬಂದು ಕೂಲಿಗಾರರು ಮತ್ತು ಸರ್ಕಾರಿ ನೌಕರರುಗಳಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿ ಎಂದು ಹೇಳತಕ್ಕ ವಾದವನ್ನು ಹೂಡುತ್ತಾರೆ. ನಮಗೆಲ್ಲರಿಗೂ ತಿಳಿದಿರುವ ಹಾಗೆ, ವ್ಯವಸಾಯದ ಅಭಿವೃದ್ಧಿಯಾಗಬೇಕಾದರೆ, ದೇಶದಲ್ಲಿ ಸಾಕಾದಷ್ಟು ಪ್ರಮಾಣದಲ್ಲಿ ಧಾನ್ಯಗಳ ಬೆಳೆ ಆಗಬೇಕಾದರೆ, ರೈತರು ಬೆಳೆದ ದವಸಕ್ಕೆ ತಕ್ಕ ಬೆಲೆ ನಿಗದಿಯಾಗಬೇಕು. ವಿಪರೀತವಾಗಿ ಬೆಲೆ ಏರುವುದಕ್ಕೂ ಕೂಡ ಸರ್ಕಾರದವರು ಅವಕಾಶಕೊಡದೆ ರೈತರು ಸಾಕಾದಷ್ಟು ಪ್ರಮಾಣದಲ್ಲಿ ಬೆಳೆಯುವುದಕ್ಕೆ ಗಮನ ಕೊಟ್ಟು ಧಾರಣೆವಾಸಿ ಹೆಚ್ಚದ ರೀತಿಯಲ್ಲಿ ಸರ್ಕಾರದವರು ನೋಡಿಕೊಳ್ಳಬೇಕು. ಅದು ಅವರ ಜವಾಬ್ದಾರಿ, ಅದನ್ನು ನೋಡಿಕೊಳ್ಳುತ್ತಾರೆ ಎಂಬ ಭರವಸೆ ಕೂಡ ನಮಗೆ ಇದ್ದೇ ಇದೆ.

ಇನ್ನು ಕೊನೆಯದಾಗಿ ಸರಕಾರಿ ನೌಕರಸ್ತರ ಸಂಬಳಸಾರಿಗೆ ವಿಚಾರ. ಅದನ್ನು ಬಹಳ ಧೈರ್ಯದಿಂದ ಸರಕಾರಕ್ಕೆ ಎಷ್ಟೋ ನಷ್ಟವಾಗುತ್ತದೆ ಎಂದು ಗೊತ್ತಿದ್ದರೂ ಕೂಡ ಎದುರಿಸಿ ಅವರ ಸಂಬಳಸಾರಿಗೆಗಳನ್ನು ಹೆಚ್ಚುಮಾಡಿದ್ದಾರೆ. ಇದರಿಂದ ಅನೇಕ ನೌಕರರಿಗೆ ತೃಪ್ತಿಯಾಗಿದೆ. ಕೆಲವರಿಗೆ ತೃಪ್ತಿಯಾಗಿಲ್ಲ ಎಂದು ನನ್ನ ಸ್ನೇಹಿತರು ಹೇಳುತ್ತಾರೆ. ಸಂಬಳ ಸಾರಿಗೆಗಳ ವಿಚಾರದಲ್ಲಿ ಇದು ಸಾಮಾನ್ಯವಾದ ವಿಷಯ, ಈ ರೀತಿ ಆಗುವುದು ಸ್ವಾಭಾವಿಕ. ಎಷ್ಟೇ ಕೊಟ್ಟರೂ ಕೂಡ ತೃಪ್ತಿ ಎನ್ನುವುದು ಯಾವಾಗ ಪೂರ್ತಿಯಾಗುತ್ತದೆಯೋ ನನಗೆ ಗೊತ್ತಾಗುವುದಿಲ್ಲ.

ರಾಜ್ಯಪಾಲರ ಭಾಷಣದಲ್ಲಿ ತಿಳಿಸಿರುವ ಹಾಗೆ, ಇದೇ ಕೊನೆಯ ಸಭೆ. ಈ ಕೊನೆಯ ಸಭೆಯಲ್ಲಿ ನನ್ನ ಅನುಭವದಲ್ಲಿ, ನಮ್ಮ ಸ್ನೇಹಿತರು, ನಮ್ಮ ಪಕ್ಷದವರು ಮತ್ತು ನಮ್ಮ ವಿರೋಧಪಕ್ಷದವರೂ ಕೂಡ ಬಹಳವಾಗಿ ಹೊಗಳಿಕೆಗೆ ಯೋಗ್ಯವಾಗುವ ರೀತಿಯಲ್ಲಿ, ದೇಶ ಮೆಚ್ಚುವ ರೀತಿಯಲ್ಲಿ ಈ ಐದು ವರ್ಷಗಳಲ್ಲಿ ತಮ್ಮ ಕಾರ್ಯಕಲಾಪಗಳನ್ನು ನೆರವೇರಿಸಿದ್ದಾರೆ. ಈ ಸಭೆಯಲ್ಲಿ ವಯಸ್ಕರಾಗಿದ್ದವರು ಒಳ್ಳೆಯ ಅನುಭವಶಾಲಿಗಳಾದಂಥವರು, ಹಿಂದೆ ಮಂತ್ರಿಗಳಾಗಿದ್ದವರು, ಬಹುಕಾಲದಿಂದ ಅಸೆಂಬ್ಲಿಯಲ್ಲಿ ಮೆಂಬರುಗಳಾಗಿದ್ದವರು, ಎಲ್ಲರೂ ಇದ್ದು, ಅವರ ಅನುಭವಗಳನ್ನು ಹೇಳಿ ಅವರ ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಈ ಐದು ವರ್ಷಗಳ ಕಾಲದಲ್ಲಿ ಹಿಂದೆ ಯಾವ ಸಭೆಯಲ್ಲೂ ಕೂಡ ಇಲ್ಲದೇಇದ್ದು ಸುಮಾರು 25-30-40 ವರ್ಷದ ಮಧ್ಯವಯಸ್ಸಿನಲ್ಲಿದ್ದಂಥ ಬಹಳ ಉತ್ಸಾಹ ಶಾಲಿ ಯುವಕರೂ ಕೂಡ ಈ ಸಭೆಯಲ್ಲಿ ಸೇರಿದ್ದು ದೇಶದ ಪ್ರಗತಿಗೆ ಅನುಕೂಲವಾಗುವ ರೀತಿಯಲ್ಲಿ ಕಾನೂನುಗಳನ್ನು ಮಾಡಲು ಬಹಳ ನೆರವಾಗಿ ಕೆಲಸ ಕಾರ್ಯಗಳನ್ನು ಮಾಡಿ, ದೇಶಕ್ಕೆ ಅತ್ಯುತ್ತಮವಾದ ಸೇವೆ ಸಲ್ಲಿಸಿದ್ದಾರೆ. ನಮ್ಮ ದುರದೃಷ್ಟವಶಾತ್ ಸರ್ಕಾರದಲ್ಲಿ ಆಗಿಂದಾಗ್ಗೆ ಬದಲಾವಣೆಗಳಾದವು. ಅದು ಆಗಬಾರದಾಗಿತ್ತು. ಆದರೆ ಮುಂದೆ, ವಿಶಾಲ ಮೈಸೂರಾಗಿರುವುದರಿಂದ, ಈ ಸಭೆ ವಿಸ್ತರಿಸಿರುವುದರಿಂದ, ಅಂಥ ಬದಲಾವಣೆಗಳು ಸರ್ಕಾರದಲ್ಲಿ ಆಗಿಂದಾಗ್ಗೆ ಆಗದೇಇರಲಿ ಎಂದು ಹಾರೈಸೋಣ. ಮುಂದಿನ ಸಭೆ ಇನ್ನೂ ಉತ್ತಮವಾದ ರೀತಿಯಲ್ಲಿ ದೇಶದ ಸರ್ವತೋಮುಖವಾದ ಅಭಿವೃದ್ಧಿಗೆ ಕಾರಣವಾದಂಥ ಕಾನೂನುಗಳನ್ನು ರಚನೆಮಾಡಿ ಯೋಗ್ಯವಾದ ರೀತಿಯಲ್ಲಿ ವರ್ತಿಸಿ, ದೇಶಕ್ಕೆ ಸರ್ವರೀತಿಯಲ್ಲೂ ಕೂಡ ಉಪಕಾರವಾಗುವಂತೆ ಕೆಲಸಮಾಡಲಿ ಎಂದು ಭಗವಂತನನ್ನು ಪ್ರಾರ್ಥನೆ ಮಾಡಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

(ಬಹು ಮಂದಿ ಸದಸ್ಯರು ಮಾತನಾಡಲು ಎದ್ದು ನಿಂತುಕೊಂಡರು.)

ಅಧ್ಯಕ್ಷರು.—ಇಷ್ಟು ಜನರು ಮಾತನಾಡಬೇಕೆಂದರೆ ಹೇಗೆ ಕಾಲ ಸಿಕ್ಕುತ್ತದೆ ? ಕಾಲ ಸಿಕ್ಕುವುದು ಕಷ್ಟ. ಆದಕಾರಣ ವಿರೋಧಪಕ್ಷದ ಸದಸ್ಯರಾದ ಶ್ರೀಮಾನ್ ನಾಗರಾಜಮೂರ್ತಿಯವರಿಗೆ ಅವಕಾಶ ಕೊಡುತ್ತೇನೆ. ಈಗಾಗಲೇ ಹತ್ತು ಜನ ಮಾತನಾಡಿದ್ದಾರೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ-ಅನುಸೂಚಿತ ಜಾತಿಗಳು).—ಅವರ ದೃಷ್ಟಿ ಬೇರೆ ಇದೆ.

ಅಧ್ಯಕ್ಷರು.—ದೃಷ್ಟಿ ಬೇರೆ ಇದ್ದರೂ, ಕಾಲ ಬೇರೆ ಇಲ್ಲ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಒಬ್ಬೊಬ್ಬರಿಗೆ ಐದು ನಿಮಿಷ ಕೊಡಿ, ಸ್ವಾಮಿ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ನಾನು ಐದು ನಿಮಿಷದಲ್ಲಿ ಮುಗಿಸುತ್ತೇನೆ, ಸ್ವಾಮಿ.

ಅಧ್ಯಕ್ಷರು.—ಆಗಬಹುದು. ತಾವು ಮಾತನಾಡಿ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಮಾನ್ಯ ಸಭಾಪತಿಗಳೆ, ನಮ್ಮ ಮೈಸೂರಿನ ರಾಜ್ಯಪಾಲರು ಕೊಟ್ಟಿರುವಂಥ ಭಾಷಣದ ಮೇಲೆ ನಾಲ್ಕು ಮಾತುಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ, ಏಕೆಂದರೆ, ಎಲ್ಲರೂ ಹೇಳಿದಂತೆ ನಾನು ಹೇಳದಿದ್ದರೆ ಕರ್ತವ್ಯಚ್ಯುತಿಯಾಗುತ್ತದೆಂದು ನಾನು ತಿಳಿದು ಕೊಂಡಿದ್ದೇನೆ. ನಾವು ಇಲ್ಲಿಂದ ನಿರ್ಗಮನ ಹೊಂದುವ ಕಾಲದಲ್ಲಿ ರಾಜ್ಯಪಾಲರು ನಾಲ್ಕು ಒಳ್ಳೆಯ ಮಾತುಗಳನ್ನಾಡಿದ್ದಾರೆ. ಅದಕ್ಕಾಗಿ ಅವರನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಈ ಭಾಷಣದಲ್ಲಿ ಮುಂದೆ ಆಗಬೇಕಾದ ಕೆಲಸಕಾರ್ಯದ ವಿಚಾರದಲ್ಲಿ ಬಹಳ ಉತ್ತಮವಾದ ಸೂಚನೆಗಳನ್ನು ಕೊಟ್ಟಿದ್ದಾರೆ. ಅದಕ್ಕೆ ವಿರೋಧವಾಗಿ ನಮ್ಮ ಎದುರುಪಕ್ಷದ ನಾಯಕರು ಟೀಕೆ ಮಾಡುವುದು ಸ್ವಾಭಾವಿಕ ; ಹಾಗೆ ಮಾಡಿದ್ದಾರೆ, ಪರವಾಗಿಲ್ಲ, ಆದರೆ ನಾವು ಒಂದು ದೃಷ್ಟಿಯಿಂದ ಮುಂದುವರಿಯ

(ಶ್ರೀಮತಿ ಬಳ್ಳಾರಿ ಸಿದ್ದಮ್ಮ.)

ಬೇಕಾಗಿದೆ. ಯಾವ ಕಾಲದಲ್ಲಿ ನಾವು ಜವಾಬ್ದಾರಿಯಾದ ಸ್ಥಾನವನ್ನು ವಹಿಸಿದೆವೋ ಆಗಿನಿಂದ ಇಲ್ಲಿಯವರೆಗೆ ಬಹಳ ದೊಡ್ಡದೊಡ್ಡ ಕೆಲಸಗಳನ್ನು ಮಾಡಿದ್ದೇವೆಂದು ಹೇಳಿಕೊಳ್ಳುವುದಕ್ಕೆ ಯಾವ ರೀತಿಯ ಸಂಶಯವೂ ಇಲ್ಲ ಎಂದು ಅರಿಕೆಮಾಡಿಕೊಳ್ಳುತ್ತೇನೆ. ಅದು ನಿಜವೆಂದು ಎಲ್ಲರೂ ಒಪ್ಪಲೇಬೇಕು. ಏಕೆಂದರೆ ಹಿಂದೆ ಬಹಳ ಕಷ್ಟಪರಿಸ್ಥಿತಿಯಿದ್ದ ಕಾಲದಲ್ಲಿ ನಾವಿದ್ದೆವು. ಆಹಾರ ಪರಿಸ್ಥಿತಿ ವಿಮರ್ಶೆ ಮಾಡುತ್ತಾ 80 ರೂಪಾಯಿಗಳಿಗೆ ಒಂದು ಪಲ್ಲದಂತೆ ಅಕ್ಕಿ ಮಾರಾಟವಾಗುತ್ತಿದೆಯೆಂದು ಹೇಳುತ್ತಿದ್ದಾರೆ. ಆದರೆ ಬೆಲೆ ಹೆಚ್ಚುವುದಕ್ಕೆ ನಾವು ಕಾರಣರೆ? ಮಳೆಯಿಲ್ಲದೆ ಬೆಳೆ ಕಡಮೆಯಾಗಿ ಬೆಲೆ ಹೆಚ್ಚಿದೆ. ಬೆಳೆಯಾಗುವುದಕ್ಕೂ ಆಗದಿರುವುದಕ್ಕೂ, ಅತಿವೃಷ್ಟಿ ಅನಾವೃಷ್ಟಿಯಾಗುವುದಕ್ಕೂ ನಾವು ಕಾರಣರಲ್ಲ; ಅದು ಭಗವಂತನ ಇಚ್ಛೆ. ನಾವೇನು ಹೀಗಾಗಬೇಕೆಂದು ಭಗವಂತನಿಗೆ ಅರ್ಜಿಹಾಕಿಕೊಂಡಿಲ್ಲ. ಕಾಲಕ್ಕೆ ಸರಿಯಾಗಿ ಏನಾಗಬೇಕೋ ಅದು ಆಗುತ್ತದೆ. ಬೆಲೆ ಏರುವುದು, ಅಭಾವವುಂಟಾಗುವುದು ಕಾಲಕ್ಕೆ ಸರಿಯಾಗಿ ಮಳೆ ಬರುವುದು ಮುಂತಾದವುಗಳ ಮೇಲೆ ಹೋಗುತ್ತದೆ. ಒದಗುವ ಕಷ್ಟವನ್ನು ಹೋಗಲಾಡಿಸಬೇಕೆಂದು ಇದುವರೆಗೆ ನಮ್ಮ ಸರ್ಕಾರದವರು ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆಂಬುದನ್ನು ದಯವಿಟ್ಟು ವಿಮರ್ಶೆಮಾಡಿ ನೋಡಿದರೆ ನಿಜಾಂಶ ಗೊತ್ತಾಗುತ್ತದೆ. ದೊಡ್ಡದೊಡ್ಡ ಪ್ರಾಜೆಕ್ಟ್ ಮಾಡಿದಾಗ ಅದರ ಫಲಿತಾಂಶ ತಿಳಿಯಲು ಹತ್ತುವರ್ಷಗಳ ಕಾಲ ಬೇಕು. ಹಾಗೆ ನಿಧಾನಿಸದೆ ಆತುರಪಟ್ಟರೆ ಪ್ರಯೋಜನವಿಲ್ಲ. ಹಾಗಿಲ್ಲದೆ ಸುಮ್ಮನೆ ಅನೇಕರಿಗೆ ಬಟ್ಟೆಯಿಲ್ಲ, ತಿನ್ನಲು ಆಹಾರವಿಲ್ಲ, ವಾಸಕ್ಕೆ ಮನೆಯಿಲ್ಲ, ಇಷ್ಟು ದಿವಸದಿಂದ ಕಾಂಗ್ರೆಸ್ ಸರ್ಕಾರ ಏನುತಾನೆ ಸಾಧಿಸಿದೆ ಎಂದು ಹೇಳುತ್ತಾ ಅವರು ಮಾಡಿರುವ ಕೆಲಸ, ಹಾಕಿರವ ಯೋಜನೆ, ಕೈಕೊಂಡಿರುವ ಕಾರ್ಯಕ್ರಮ ಇವುಗಳನ್ನು ಪರಿಶೀಲಿಸದೆ, ಟೀಕಿಸಿದರೆ ಪ್ರಯೋಜನವೇನು? ವಿರೋಧಪಕ್ಷದಲ್ಲಿದ್ದೇವೆಂದು ವಿರೋಧ ಮಾಡಲು ಮಾತನಾಡುತ್ತಿದ್ದಾರೆ, ಸಂತೋಷ. ಆದರೆ ಏನು ಕೆಲಸ ನಡೆದಿದೆಯೆಂಬುದನ್ನು ನೋಡಿ ಅದಕ್ಕೆ ಅಭಿನಂದನೆಯನ್ನರ್ಪಿಸುವುದನ್ನು ಬಿಟ್ಟು ವೃಥಾ ಆರೋಪಿಸುವುದು ಸರಿಯಲ್ಲ. ಭೂಸುಧಾರಣೆ ಯಾವ ರೀತಿ ಆಗುತ್ತಿದೆಯೆಂಬುದನ್ನು ನೋಡಬೇಕು. ಈ ಐದು ವರ್ಷಗಳಲ್ಲಿ ಏನು ಮಾಡಿದರೆಂದು ಶ್ರೀಮಾನ್ ಗೋಪಾಲಗೌಡರು ಕೇಳಿದರು. ಈ ದಿವಸ ಕ್ರಾಂತಿಯಿಲ್ಲ. ಕ್ರಾಂತಿಗೆ ಅವಕಾಶ ಕೊಡದೆ ಬಹಳ ಉಪಾಯವಾಗಿ ಈ ದಿವಸ ಒಳ್ಳೆಯ ಯೋಜನೆ ಮಾಡುತ್ತಿದ್ದಾರೆ. ಪ್ರತಿಯೊಬ್ಬರಿಗೂ ಭೂಮಿ ಸಿಕ್ಕುವಂತೆ ಮಾಡುತ್ತಿದ್ದಾರೆ. ಇದನ್ನು ಗಮನಿಸಬೇಕು. ಯೋಜನೆಗಳೇನಿವೆಯೋ ಅವೆಲ್ಲಾ ಪೂರ್ಣವಾಗಬೇಕು. ಅವೆಲ್ಲಾ ಪೂರ್ತಿಯಾದರೆ ನಮಗೆ ಯಾವ ರೀತಿಯ ತೊಂದರೆಯೂ ಇರುವುದಿಲ್ಲವೆಂದು ತಿಳಿದುಕೊಂಡಿದ್ದೇವೆ; ಆಹಾರದ ಅಭಾವ ತಪ್ಪುತ್ತದೆ. ಕಂಟ್ರೋಲ್ ಪ್ರಶ್ನೆ ಈ ದಿವಸ ಇಲ್ಲ, ಮುಂದೆಯೂ ಬರುವ ಸಂಭವವಿಲ್ಲ. ಇದೊಂದು ಉದಾಹರಣೆಯೇ ಸಾಕು. ಸುಮ್ಮನೆ ಮನಸ್ಸಿನಲ್ಲಿ ಏನೋ ಒಂದು ಭಾವನೆಯನ್ನಿಟ್ಟುಕೊಂಡು ಮಾಡಿರುವ ಉತ್ತಮ ಕೆಲಸ ಕಾರ್ಯಗಳನ್ನು ನೋಡದೆ ಆಕ್ಷೇಪಣೆ ಮಾಡಬಾರದೆಂದು ಅರಿಕೆಮಾಡಿಕೊಳ್ಳುತ್ತೇನೆ.

ಹಿಂದೆ ಒಂದುಸಾರಿ ಮಾತನಾಡುವಾಗ ಇಬ್ಬರು ಮೂರು ಮಹಿಳೆಯರು ಈ ಸಭೆಯಲ್ಲಿದ್ದು ಭೂಷಣ ಪ್ರಾಯವಾಗಿದ್ದರೆಂದು ಹೇಳಿದರು ಎಂದು ತಿಳಿಯಬಂತು. ನಾನು ಆಗ ಸಭೆಯಲ್ಲಿರಲಿಲ್ಲ. ಆದ್ದರಿಂದ ಆ ವಿಚಾರದಲ್ಲಿ ಒಂದು ಅರಿಕೆಮಾಡುತ್ತೇನೆ. ದೇಶ ಕಟ್ಟುವುದಕ್ಕಾಗಿ ಎಲ್ಲರೂ ಸಹಕರಿಸಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಭೂಷಣ ಪ್ರಾಯರಾಗಿದ್ದರೆಂದರೆ ಅಲಂಕಾರಕ್ಕಾಗಿ ಇದ್ದರೆಂದು ನಾನು ಹೇಳಲಿಲ್ಲ. ಸಭೆಗೆ ಗೌರವತರುವ ರೀತಿಯಲ್ಲಿ ಅಲಂಕಾರ ಪ್ರಾಯರಾಗಿದ್ದರೆಂದು ಗೌರವ ಸೂಚಕವಾಗಿ ಮಾತನಾಡಿದ್ದೇನೆಯೇ ಹೊರತು ಮೂದಲಿಸುವ ರೀತಿಯಲ್ಲಿ ಮಾತನಾಡಲಿಲ್ಲ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಹಾಗಿದ್ದರೆ ಪರವಾಗಿಲ್ಲ, ದಯವಿಟ್ಟು ಕ್ಷಮಿಸಿ.

ಸ್ಕೂಲುಗಳ ವಿಚಾರದಲ್ಲಿ ಶ್ರೀ ಚಂದ್ರಶೇಖರಯ್ಯನವರು ಹೇಳಿರುವುದು ನಿಜಾಂಶ. ನಾಲ್ಕು ತಿಂಗಳ ರಜಾಇದೆ. ಅದು ಕಳೆಯುವ ವೇಳೆಗೆ ಒಂದು ವರ್ಷ ಕಲಿತಿರುವುದೆಲ್ಲಾ ಮರೆತು ಹೋಗುತ್ತದೆ. ಅದಕ್ಕೆ ಅವಕಾಶ ಕೊಡದಂತೆ ವಿದ್ಯಾ ಇಲಾಖೆಯ ಮಂತ್ರಿಗಳು ನೋಡಿಕೊಳ್ಳಬೇಕು. ಎದರು ಪಕ್ಷದವರು ಏನೇ ಹೇಳಲಿ, ನಮ್ಮ ಕರ್ತವ್ಯವನ್ನು ನಾವು ನಿರ್ವಹಿಸಿದ್ದೇವೆ. ಪ್ರತಿಯೊಂದು ಗ್ರಾಮಕ್ಕೂ ಕುಡಿಯುವ ನೀರಿನ ಬಾವಿಯನ್ನೊದಗಿಸಬೇಕೆಂದು ನಾನು ಈ ಸಭೆಗೆ ಬಂದಲಾಗಾಯಿತು ಹೇಳುತ್ತಿದ್ದೇನೆ. ಅದನ್ನು ಮರೆಯಬಾರದು. ಮುಂದೆ ನಾನು ಹೇಳಲು ಅವಕಾಶವಿಲ್ಲ. ಮುಂದಿನವರು ಆ ಕೆಲಸ ಮಾಡಬೇಕು. ಹೆಚ್ಚು ಕೆಲಸ ಮಾಡುವುದಕ್ಕಾಗದಿದ್ದರೂ ಪ್ರತಿಯೊಂದು ಗ್ರಾಮಕ್ಕೂ ಹೋಗಿಬರುವುದಕ್ಕೆ ರಸ್ತೆಯ ಅನುಕೂಲತೆಯನ್ನೊದಗಿಸಬೇಕು. ಈಗ ಬರೀ ಟಾರು ರಸ್ತೆ, ಸಿಮೆಂಟ್ ರಸ್ತೆ ಮಾಡುತ್ತಿದ್ದಾರೆ, ತೊಂದರೆಯಿರುವ ಕಡೆ ಗಮನ ಕೊಡುತ್ತಿಲ್ಲ. ಇದನ್ನು ಗಮನಿಸಿ ಪ್ರತಿಯೊಂದು ಗ್ರಾಮಕ್ಕೂ ರಸ್ತೆ, ಕುಡಿಯುವ ನೀರಿನ ಬಾವಿ ಸೌಕರ್ಯ, ಇವುಗಳನ್ನು ಒದಗಿಸಬೇಕು. ನಮ್ಮ ಮಕ್ಕಳಿಗೆ ಹೆಚ್ಚು ವಿದ್ಯೆ ಬೇಕಾಗಿಲ್ಲ. ಪ್ರತಿಯೊಬ್ಬರಿಗೂ ಹೆಂಗಸರಿಗೂ ಮತ್ತು ಗಂಡಸರಿಗೂ ಎಸ್. ಎಸ್. ಎಲ್. ಸಿ. ಯವರೆಗೆ ಕಡ್ಡಾಯವಾಗಿ ಶಿಕ್ಷಣ ಕೊಡಬೇಕಾದದ್ದು ಮುಖ್ಯವಾದುದು.

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ವೃತ್ತಿ ಶಿಕ್ಷಣದ ವಿಚಾರವಿದೆ. ಹೆಂಗಸರಿಗೂ ಗಂಡಸರಿಗೂ ಅನುಕೂಲವಾಗುವ ಹಾಗೆ ಈ ಶಿಕ್ಷಣದ ವ್ಯವಸ್ಥೆ ಮಾಡಿ ಎಲ್ಲರಿಗೂ ಶಿಕ್ಷಣ ಕೊಡಬೇಕು. ಕೇವಲ ಪುರುಷರನ್ನೇ ತಯಾರು ಮಾಡಿದರೆ ದೇಶೋದ್ಧಾರವಾಗುವುದಿಲ್ಲ. ಪುರುಷರಷ್ಟೇ ಇರುವ ಹೆಂಗಸರ ಕಡೆಗೂ ಗಮನ ಕೊಟ್ಟು ಅವರಿಗೆ ಸರಿಯಾದ ಶಿಕ್ಷಣ ಕೊಟ್ಟು ದೇಶದ ಏಳಿಗೆಗೆ ಪಾತ್ರರಾಗುವಂತೆ ಮಾಡಬೇಕು. ನಮ್ಮ ಮಾನ್ಯ ಮಂತ್ರಿಗಳು ಇದಕ್ಕೆ ಗಮನ ಕೊಡುತ್ತಾರೆಂದು ತಿಳಿದು, ರಾಜ್ಯಪಾಲರು ನಮ್ಮ ವಿಚಾರದಲ್ಲಿ ಹೇಳಿರುವ ಮಾತಿಗೆ ಹೃತ್ಪೂರ್ವಕವಾಗಿ ವಂದನೆಗಳನ್ನರ್ಪಿಸಿ ಮಾನ್ಯ ಸದಸ್ಯರಿಗೂ ಕೊನೆಯ ವಂದನೆಗಳನ್ನು ಸೂಚಿಸಿ ನನ್ನ ಭಾಷಣವನ್ನು ಪೂರೈಸುತ್ತೇನೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಮಾನ್ಯ ಸಭಾಪತಿಗಳೆ, ತಮ್ಮ ಅಧಿಕಾರದ ಅವಧಿಯಲ್ಲಿ ವಿರೋಧಪಕ್ಷದವರ ಹಕ್ಕುಬಾಧ್ಯತೆಗಳನ್ನು ನಿರ್ವಂಚನೆಯಿಂದ ನಿಷ್ಪಕ್ಷಪಾತ ದೃಷ್ಟಿಯಿಂದ ಕಾದಿರುವುದಕ್ಕಾಗಿ ವಿರೋಧ ಪಕ್ಷದವರ ಪರವಾಗಿ ತಮಗೆ ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸಿ ರಾಜ್ಯಪಾಲರ ಭಾಷಣದ ಬಗ್ಗೆ ತಂದಿರುವ ಅಭಿನಂದನಾ ನಿರ್ಣಯವನ್ನು ವಿರೋಧಿಸುತ್ತಾ, ರಾಜ್ಯಪಾಲರ ಭಾಷಣದಲ್ಲಿ ಅಡಕವಾಗಿರುವ ಅಂಶಗಳ ಮೇಲೆ ಅಭಿಪ್ರಾಯ ಕೊಡು

ವುದಕ್ಕೆ ಸಾಕಷ್ಟು ಕಾಲಾವಕಾಶವಿಲ್ಲವಾದ್ದರಿಂದ ತಾವು ಕೊಟ್ಟಿರುವ ಕಾಲದಲ್ಲಿ ಎಷ್ಟು ಅಂಶಗಳ ಮೇಲೆ ಸಾಧ್ಯವೋ ಅಷ್ಟು ಅಂಶಗಳ ಮೇಲೆ ಮಾತ್ರ ಅಭಿಪ್ರಾಯವನ್ನು ಸೂಚಿಸುತ್ತೇನೆ.

ರಾಜ್ಯಪಾಲರು ಮೊಟ್ಟಮೊದಲನೆಯದಾಗಿ ನಮ್ಮ ದೇಶದ ಪ್ರಜಾಪ್ರತಿನಿಧಿಗಳ ಪ್ರಜಾಪ್ರಭುತ್ವಕ್ಕೆ ಸಂಬಂಧಪಟ್ಟ ಮತ್ತು ಪ್ರತಿನಿಧಿಗಳು ಎಸಗಿರುವ ಅಭಿವೃದ್ಧಿ ಕಾರ್ಯಗಳ ವಿಷಯದಲ್ಲಿ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ, ಆದರೆ ಪ್ರಜಾಪ್ರಭುತ್ವ ಎಂಬ ಕಡೆ 'ಪ್ರಜಾಪೀಡತ್ವ' ಎಂದು ಬರೆದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ನಿಜವಾದ ಪರಿಸ್ಥಿತಿಯನ್ನು ನೋಡಿದ್ದೇ ಆದರೆ ಪ್ರಜಾಪ್ರಭುತ್ವ ವಿದೆಯೋ ಅಥವಾ 'ಪ್ರಜಾಪೀಡತ್ವ' ವಿದೆಯೋ ಎಂಬ ಶಂಕೆ ಬರುತ್ತದೆ. ಹಿಂದಿದ್ದ ಬಿಳಿಯರ ಪ್ರಭುತ್ವ ಹೋಗಿ ಈಗ ಬಿಳಿ ಟೋಪಿಯವರ ಪ್ರಭುತ್ವ ಬಂದಿದೆ. ಅಷ್ಟು ಹೊರತು ಇನ್ನೇನೂ ಉಪಯೋಗವಾಗಿಲ್ಲ. ಆದ್ದರಿಂದ ಈ ದಿವಸ ಏಕಪಕ್ಷ ಪ್ರಭುತ್ವವಿದೆಯೇ ಹೊರತು ಪ್ರಜಾಪ್ರಭುತ್ವದ ವಾತಾವರಣವಿಲ್ಲ ಎಂದು ನಿಜವಾಗಿಯೂ ನಿರ್ದಾಕ್ಷಿಣ್ಯವಾಗಿಯೂ ಹೇಳಬಹುದು. ಜನತೆ ಈ ದಿನ ಪ್ರಜಾಪ್ರಭುತ್ವದ ಸುಖವನ್ನನುಭವಿಸುತ್ತಿಲ್ಲ.

ಚುನಾವಣೆಯ ವಿಚಾರ ಕೊನೆಯಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ನಮ್ಮ ಅಭಿಪ್ರಾಯ ವ್ಯಕ್ತಪಡಿಸುವಾಗ ಚುನಾವಣೆ ವಿಷಯದಲ್ಲಿ ಒಂದೆರಡು ವಿಚಾರಗಳನ್ನು ಗಮನಕ್ಕೆ ತಂದರೆ ನಿಜವಾಗಿಯೂ ಪ್ರಜಾಪ್ರಭುತ್ವ ಇಲ್ಲ, ಪ್ರಜಾಪೀಡತ್ವವಿದೆ ಎಂಬುದು ವೇದ್ಯವಾಗುತ್ತದೆ. ಕಳೆದ ಚುನಾವಣೆಯು ನಿಜವಾಗಿಯೂ ಪ್ರಜಾಪ್ರಭುತ್ವದ ಆಧಾರದ ಮೇಲೆ ನಡೆಯಿತೋ ಅಥವಾ ಇನ್ನಾವುದಾದರೂ ಒಂದು ದುರುದ್ದೇಶ ತತ್ವದ ಮೇಲೆ ನಡೆಯಿತೋ ಎಂಬುದನ್ನು ವಿಮರ್ಶೆ ಮಾಡಬೇಕಾಗಿದೆ. ಸಾಮಾನ್ಯವಾಗಿ ನಿಮ್ಮವರ್ಗದ ಪರವಾಗಿ ಚುನಾವಣೆಗೆ ನಿಂತವರು, ಕೆಲವರಿಗೆ ಗೊತ್ತಿರುವಂತೆ, 'ನಾನು ಖಂಡಿತ ಮಂತ್ರಿಯಾಗುತ್ತೇನೆ, ನಿಮಗೆ ಸ್ವರ್ಗಸುಖವನ್ನುಂಟುಮಾಡುತ್ತೇನೆ' ಎಂದು ಕೂಡ ಪ್ರಚಾರ ಮಾಡಿದ್ದಾರೆ. ಮತ್ತು ನಿಮ್ಮವರ್ಗದ ಮತದಾರರಿಗೆ 'ನೀವುಗಳು ಕಾಂಗ್ರೆಸ್ ಪಕ್ಷಕ್ಕೆ ಮತನೀಡದಿದ್ದರೆ ಕಾಂಗ್ರೆಸ್ ಸರ್ಕಾರ ನಿಮಗೆ ಕೊಟ್ಟಿರುವ ಹೆಂಚು, ಮತ್ತು ಗಳು ಇವುಗಳನ್ನೂ ವಾಪಸು ತೆಗೆದುಕೊಳ್ಳುತ್ತೇವೆ, ಮನೆ ಕೆಡವಿ ಅದಕ್ಕಾಗಿ ಒದಗಿಸಿರುವ ಸಾಮಾನುಗಳನ್ನು ವಶಪಡಿಸಿಕೊಳ್ಳುತ್ತೇವೆ' ಎಂದು ಹೆದರಿಕೆ ತೋರಿಸಿದ್ದಾರೆ. ಶ್ರೀವರ್ಮಾಗೋಪಾಲಗೌಡರು ಹೇಳಿದ ಹಾಗೆ, ಕಾಂಗ್ರೆಸ್ ಪಕ್ಷವೆಂದರೆ ಸರ್ಕಾರ ನಡೆಸತಕ್ಕ ಪಕ್ಷ, ಬಹುಮತವಿರುವ ಪಕ್ಷ, ಅದಕ್ಕೆ ಮತ ನೀಡದಿದ್ದರೆ ಆರು ತಿಂಗಳ ಕಠಿಣ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂದು ಸಹ ಹೆದರಿಸಿ ಓಟುಗಳಿಸಿದ್ದಾರೆ. ಮೊನ್ನೆ ತಾನೆ ಆದ

4-30 P.M.

ಚುನಾವಣೆಯ ಕಾಲದಲ್ಲಿ ಬಹಳ ವಿಚಿತ್ರವಾದ ಘಟನೆಗಳು ನಡೆದವು. ಯಾವ ಉಮೇದುವಾರನಿಗೆ ನಿನ್ನ ಓಟು ಕೊಟ್ಟು ಬಂದಿರುವೆ ಎಂದು ಮತದಾರನನ್ನು ಕೇಳಿದರೆ ಅವನಿಗೆ ಅದು ಗೊತ್ತಿಲ್ಲ. ಉಮೇದುವಾರರ ಪರಿಚಯ ಮತದಾರರಿಗೆ ಇಲ್ಲ. ಬಸವಣ್ಣನ ಚಿತ್ರವಿದ್ದ ಪೆಟ್ಟಿಗೆಗೆ ಕುಂಕುಮಹಚ್ಚಿ ನಮಸ್ಕಾರ ಮಾಡಿ ಅದೇ ಪೆಟ್ಟಿಗೆಯಲ್ಲಿ ಓಟು ಹಾಕಿ ಬಂದಿರುವೆವೆಂದು ಹಳ್ಳಿಗರು ಹೇಳಿದರು. ಕಾಂಗ್ರೆಸ್ಸಿನವರು ಪ್ರಚಾರ ಮಾಡುವಾಗ ಯಾರು ನಿಮಗೆ ಜಮೀನುಗಳನ್ನು ಕೊಟ್ಟಿದ್ದಾರೋ ಅವರಿಗೆ ನಿಮ್ಮ ಓಟು ಕೊಡಿ ಎಂದು ಹೇಳುತ್ತಿದ್ದರು. ಆದಕಾರಣ ಚುನಾವಣೆಯಲ್ಲಿ ಅನ್ಯಾಯವಾಗಿದೆ ಎಂದು ನಮಗೆ ಸಂಶಯ ಬರುತ್ತದೆ. ನಮ್ಮ ದೇಶವು ಜಾತ್ಯಾತೀತ ರಾಷ್ಟ್ರವೆಂದು ನಮ್ಮ ರಾಜ್ಯಾಂಗದಲ್ಲಿ ಇದೆ. ಅದೇ ರೀತಿಯಾಗಿ ಪ್ರಮಾಣ ವಚನವನ್ನು ನಾವೆಲ್ಲ ಸದಸ್ಯರು ತೆಗೆದುಕೊಂಡಿದ್ದೇವೆ. ಆದರೆ ನಮ್ಮಲ್ಲಿ ಕೋಮುವಾರು ಭಾವನೆಯು ಬೆಳೆಯುತ್ತಿರುವದನ್ನು ನೋಡಿದರೆ ಅರ್ಥವಾಗುವುದಿಲ್ಲ.

ಇನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಗ್ರಾಮ ನೌಕರರ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಗ್ರಾಮ ನೌಕರರಾದ ಪಟೇಲ, ಶಾನಭೋಗರು ಪಡೆಯುತ್ತಿರುವ ಪ್ರತಿಫಲದಿಂದ ಅವರು ಜೀವನವನ್ನು ಮನುಷ್ಯರಂತೆ ನಡೆಸಲು ಆಗುತ್ತಿದೆ ಎಂದು ಹೇಳುವುದಕ್ಕಾಗುವದಿಲ್ಲ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಅದರ ದುಡಿಮೆಗೆ ತಕ್ಕ ಪ್ರತಿಫಲ ದೊರೆಯುತ್ತಿಲ್ಲ. ಇಂಥ ಕಠಿಣ ಪರಿಸ್ಥಿತಿಯಲ್ಲಿ ಮುಷ್ಕರ ಹೂಡಬೇಕಾದ ಸನ್ನಿವೇಶ ಅವರಿಗೆ ಬಂದಿದೆ. ಇದು ನಮ್ಮ ಸರ್ಕಾರದ ಘನತೆಗೆ ಧಕ್ಕೆ ತರುತ್ತದೆ ಎಂದು ನಾನು ನಂಬಿದ್ದೇನೆ. ಆದಕಾರಣ ಸರ್ಕಾರದವರು ಇವೆಲ್ಲ ವಿಷಯಗಳ ಕಡೆಗೆ ಗಮನ ಕೊಟ್ಟು ಯೋಗ್ಯ ಪರಿಹಾರ ದೊರೆಯುವಂತೆ ಮಾಡಬೇಕೆಂದು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸೋಲೂರು ಸಿದ್ದಪ್ಪ (ಮಾಗಡಿ).—ಮಾನ್ಯ ಸಭಾಧ್ಯಕ್ಷರೇ, ವಿಶಾಲ ಮೈಸೂರ ರಾಜ್ಯದ ರಾಜ್ಯಪಾಲರವರು ನಮಗೆಲ್ಲಾ ಅಪ್ಪಣೆ ಕೊಡಿಸಿದ ಅವರ ಭಾಷಣವನ್ನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ನಮ್ಮ ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ಸು ಪ್ರಭುತ್ವಕ್ಕೆ ಬಂದ ನಂತರ ದೇಶದ ಉನ್ನತಿಗಾಗಿ ಪ್ರಯತ್ನಮಾಡತೊಡಗಿದೆ. ಚಿನ್ನದ ಗಣಿಯ ರಾಷ್ಟ್ರೀಕರಣವು ಬಹುಕಾಲದಿಂದ ಆಗಬೇಕಾಗಿದ್ದುದನ್ನು ಮಾಡಿ ದೇಶದಲ್ಲಿಯ ಉತ್ಪನ್ನವು ಹೊರಗಡೆಗೆ ಹೋಗುತ್ತಿದ್ದುದನ್ನು ತಡೆಗಟ್ಟಲಾಗಿದೆ. ರಾಷ್ಟ್ರೀಕರಣ ಮಾಡಿರುವುದರಿಂದ ರಾಜ್ಯದ ಸರ್ವತೋಮುಖ ಉನ್ನತಿಗೆ ಸಹಾಯವಾಗಿದೆ. ಪಂಚವಾರ್ಷಿಕ ಯೋಜನೆಗೆ 90 ಕೋಟಿ ರೂಪಾಯಿ ನಿಗದಿ ಮಾಡಿದ್ದುದರಲ್ಲಿ 84 ಕೋಟಿ ರೂಪಾಯಿ ಖರ್ಚು ಆಗಿದೆ. ಪೂರ್ತಿಯಾಗಿ ಎಲ್ಲ ಹಣವೂ ಖರ್ಚು ಆಗುವಂತೆ ವ್ಯವಸ್ಥೆಯನ್ನು ಇನ್ನು ಮುಂದಾದರೂ ಮಾಡುವರೆಂದು ನಂಬುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿಯ ಜನತೆಯ ಅಭಿವೃದ್ಧಿಯು ಯಾವ ರೀತಿಯಾಗಿ ಮಾಡಬೇಕೆಂಬುದನ್ನು ಪರಿಶೀಲನೆ ಮಾಡಿ ತಕ್ಕ ಕ್ರಮಗಳನ್ನು ತೀವ್ರವಾಗಿ ತೆಗೆದುಕೊಳ್ಳಬೇಕು. ಹಳ್ಳಿಗಳಿಗೆ ರಸ್ತೆಯ ಸೌಲಭ್ಯವನ್ನು ಒದಗಿಸಿಕೊಡಬೇಕು. ನೀರಾವರಿ ಯೋಜನೆಗಳು ಇನ್ನೂ ಹೆಚ್ಚಾಗುವಂತೆ ಮಾಡಬೇಕು. ಈಗ ಇರತಕ್ಕಂಥ ನೀರಾವರಿ ಸೌಲಭ್ಯಗಳನ್ನು ಗ್ರಾಮಾಂತರದಲ್ಲಿಯ ಜನರ ಸಹಕಾರ ಪಡೆದು ಹೆಚ್ಚಿಗೆ ಅನುಕೂಲವಾಗುವಂತೆ ಏರ್ಪಾಡುಮಾಡಬೇಕಾಗಿ ವಿನಂತಿಮಾಡಿಕೊಳ್ಳುತ್ತೇನೆ.

ಆದರೆ ನನಗೆ ತಿಳಿದ ಮಟ್ಟಿಗೆ 1952-56ರವರೆಗೆ ರೈತರಿಗೆ ಜಮೀನನ್ನು ವ್ಯವಸಾಯಮಾಡಲು ನೀರು ಸರಿಯಾಗಿ ಸಿಕ್ಕದೆ ಸಾಗುವಳಿಮಾಡಲು ತುಂಬ ತೊಂದರೆಗಳನ್ನು ರೈತರು ಅನುಭವಿಸಬೇಕಾಗಿದೆ. ವ್ಯವಸಾಯಾಭಿವೃದ್ಧಿಗೆ ಅನುಕೂಲವಾಗುವಂತೆ ನೀರಿನ ಸರಬರಾಜನ್ನು ಸಕಾಲದಲ್ಲಿ ರೈತರಿಗೆ ದೊರಕುವಂತೆ ಮಾಡಬೇಕು. ನಾನು ಇದೇ ವಿಷಯವನ್ನು ಈಗ ಸುಮಾರು ಐದು ವರ್ಷಗಳಿಂದಲೂ ಸರ್ಕಾರದ ಗಮನಕ್ಕೆ ತರುತ್ತಲೇ ಇದ್ದೇನೆ. ಅಲ್ಲದೆ ನಮ್ಮ ಜಿಲ್ಲೆಯಲ್ಲಿ ಅನೇಕ ಕಡೆ ಪಿಕ್‌ಅಪ್‌ಗಳನ್ನು ಮಾಡಿ ಕೆರೆ

(ಶ್ರೀ ಸೋಲೂರು ಸಿದ್ದಪ್ಪ.)

ಗಳನ್ನು ಜೀರ್ಣೋದ್ಧಾರ ಮಾಡಿದ್ದಾರೆ. ನಾನು ಈ ಸಭೆಯಲ್ಲಿ ವ್ಯವಸಾಭಿವೃದ್ಧಿಯ ವಿಷಯವಾಗಿ ಅನೇಕ ರೀತಿಯ ಸಲಹೆಗಳನ್ನೂ ಕೊಟ್ಟಿದ್ದರೂ ಅವಕ್ಕೆ ಇದು ವರೆಗೂ ಸರ್ಕಾರದವರು ಏನೂ ಗಮನಕೊಟ್ಟಿಲ್ಲ. ಪದೇ ಪದೇ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದರೂ ಏನೂ ಉಪಯೋಗವಾಗಿಲ್ಲ. ಹಿಂದೆ 1952ನೇ ಇಸವಿ ಯಲ್ಲಿ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಹನುಮಂತಯ್ಯ ನವರೂ ಕೂಡ ಈ ವಿಷಯದಲ್ಲಿ ಭರವಸೆ ಇತ್ತಿದ್ದರು.

ಆಗಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಹನುಮಂತ ಯ್ಯನವರು ಪ್ರಜೆಗಳ ಅಭಿಪ್ರಾಯವನ್ನು ಮತ್ತು ಆಗಿನ ಶಾಸನ ಸಭೆಯ ಸದಸ್ಯರುಗಳ ಅಪ್ಪಣೆಯನ್ನು ಪಡೆದು ವಿಧಾನ ಸೌಧದಂತಹ ದೊಡ್ಡ ಕಟ್ಟಡವನ್ನು ಕಟ್ಟಿದ್ದು ಸಹ ನಿಜವಾಗಿಯೂ ಮೆಚ್ಚುವಂತಹುದು. ಅದಾದ ತರುಣದಲ್ಲಿಯೇ ಈ ವಿಶಾಲ ಮೈಸೂರು ಕೂಡ ಆಯಿತು. ಇಂತಹ ಕಟ್ಟಡವಿದ್ದುದರಿಂದ ಬಹಳ ಪ್ರಯೋಜನವಾಯಿತು. ಇಂತಹ ಒಂದು ಕಟ್ಟಡ ಈ ವಿಶಾಲ ಮೈಸೂರಿನಲ್ಲಿಲ್ಲದ ಪಕ್ಷದಲ್ಲಿ ಈ ಲೆಜಿಸ್ಲೇಚರ್ ಸಭೆ, ಹಾಗೂ ಇತರ ದೊಡ್ಡ ಕಚೇರಿಗಳು ಧಾರವಾಡಕ್ಕೋ ಬೆಳಗಾಂಗೋ ಹೋಗಬೇಕಾದ ಪರಿಸ್ಥಿತಿ ಒದಗುತ್ತಿತ್ತು ಮತ್ತು ರಾಜಧಾನಿ ಕೂಡ ಆಗುವುದ ರಲ್ಲಿತ್ತು. ಇದನ್ನೆಲ್ಲ ಅರಿತು ಆಗಿನ ಮಾನ್ಯ ಸಭೆಯ ಸದ ಸ್ಯರು ಮತ್ತು ಆಗಿದ್ದ ಮಂತ್ರಿಮಂಡಲ ಇದಕ್ಕೆ ಪ್ರೋತ್ಸಾಹವಿತ್ತು ಇದನ್ನು ಪೂರೈಸಿದುದನ್ನು ನೆನಪಿನಲ್ಲಿಡುವುದು ಅತ್ಯಗತ್ಯ. ನಮ್ಮ ಸ್ಪೀಕರ್‌ರವರು ಹೇಳಿದಂತೆ, ಹೆಚ್ಚಿನ ಕಾಲಾವಕಾಶವಿಲ್ಲದ್ದರಿಂದ ನನಗಿರುವ ಅವಕಾಶದಲ್ಲಿ ಅಲ್ಪ ಸ್ವಲ್ಪ ವಿಷಯಗಳನ್ನು ಈ ಸಭೆಯ ಗಮನಕ್ಕೆ ತಂದು ಉಳಿದವನ್ನು ಬಡ್ಜೆಟ್ಟಿನ ವಿಷಯ ಬಂದಾಗ ತಿಳಿಸಲು ಆಶಿಸುತ್ತೇನೆ. ಈ ಕಾಂಗ್ರೆಸ್ಸು ಸರ್ಕಾರದಿಂದ ಆಗಿರತಕ್ಕ ಅನುಕೂಲಗಳನ್ನು ಗಮನಿಸದೆ ನಮ್ಮ ಎದುರು ಪಕ್ಷದ ಮಾನ್ಯ ಸದಸ್ಯರು ಸಮ್ಮನೆ ಟೀಕೆ ಮಾಡುತ್ತಾರೆ. ಅವರ ಮನಸ್ಸಿನಲ್ಲೇನೋ ಒಳ್ಳೆಯ ಅಭಿಪ್ರಾಯವಿದೆ. ಆದರೂ ಕೂಡ ನಮ್ಮಲ್ಲಿ ಮಾತನಾಡುವಾಗ ವಿರೋಧ ಮಾಡಬೇಕೆಂಬ ಭಾವನೆ ಯಿಂದ ಆರೀತಿ ವಿರೋಧಿಸುತ್ತಿದ್ದಾರೆ. ಅವರು ಹಾಗೆಯೇ ಮಾಡಬೇಕು. ಅದು ಅವರ ಧರ್ಮ. ಆ ರೀತಿ ಮನೋಭಾವದಿಂದಲೇ ಅವರೂ ಟೀಕೆ ಮಾಡುತ್ತಾ ಹೋಗುತ್ತಾರೆ.

ಆದರೂ ಕಾಂಗ್ರೆಸ್ ಸರ್ಕಾರ ಮಾಡಿರುವಂತಹ ಕೆಲಸಗಳನ್ನು ಎದುರು ಪಕ್ಷದವರು ಸರಿಯಾಗಿ ಯೋಚಿಸಿ ಒಂದು ವಿಶಾಲವಾದ ಮನಸ್ಸಿನಿಂದ ಸಲಹೆ ನೀಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಮತ್ತು ರಾಜ್ಯಪಾಲರಿಗೆ ಅವರು ಮಾಡಿದ ಭಾಷಣಕ್ಕಾಗಿ ನನ್ನ ವಂದನೆಗಳನ್ನು ಸಮರ್ಪಣೆ ಮಾಡುತ್ತೇನೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ-ಅನುಸೂಚಿತ ಜಾತಿಗಳು).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರು ಅಪ್ಪಣೆ ಕೊಡಿಸಿದ ಭಾಷಣದ ಮೇಲೆ ಈ ಸಭೆಯಲ್ಲಿ ಮಂಡಿಸಿರುವ ನಿರ್ಣಯದ ಮೇಲೆ ಈಗಾಗಲೇ ಅನೇಕರು ಮಾತನಾಡಿದ್ದಾರೆ. ಅದು ಒಂದು ರೀತಿಯಲ್ಲಿ ಮುಂದಿನ ಸರ್ಕಾರ ಯಾವ ರೀತಿಯಲ್ಲಿ ರಾಜ್ಯಭಾರವನ್ನು ಮಾಡಬೇಕು, ಆ ರಾಜ್ಯದಲ್ಲಿ ಮಾಡಬೇಕಾದಂತಹ ಮುಖ್ಯವಾದ ಕೆಲಸಗಳು ಎಂಥವಾಗಿರಬೇಕು, ಎಂತಹ ಮಂತ್ರಿಮಂಡಲವಿರಬೇಕು ಎನ್ನುವ ರೀತಿಯಲ್ಲಿ ಹಲವರು ಹೇಳಿದ್ದಾರೆ. ಆದರೆ ದೇಶದಲ್ಲಿ ಇರತಕ್ಕ ಮೂಲಭೂತವಾದ ಅಭಿಪ್ರಾಯ ಏನು ಎಂದು ನೋಡಿದರೆ, ಹಿಂದೆ ಇದ್ದ ಮೈಸೂರು ರಾಜ್ಯ ವಿಶಾಲವಾಗಿ ಈಗ ಎರಡರಷ್ಟಾಗಿದೆ. ಸರ್ಕಾರದ ಜವಾಬ್ದಾರಿ ಜಾಸ್ತಿಯಾಗಿದೆ. ಅದನ್ನು ಅನುಸರಿಸಿ ಸರ್ಕಾರ ತನ್ನ ರೂಪು ರೇಖೆಗಳನ್ನು ಗೊತ್ತುಪಡಿಸಿ ಯಾವ ರೀತಿ ಇರಬೇಕು ಎಂಬಿವೇ ವಿಷಯಗಳನ್ನು ಮುಂದೆ ಬರುವ ಸರ್ಕಾರ ಹೆಚ್ಚಾಗಿ ಊಹಿಸಬೇಕು. ಉಳಿದ ವಿಚಾರಗಳಲ್ಲಿ ಅದರ ವಿವರ ಏನು ಎಂಬ ವಿಚಾರಗಳನ್ನೆಲ್ಲ ಪರಿಶೀಲಿಸಬೇಕು. ಆಗ ನಾವು ಎಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು ಮತ್ತು ಆಗಿನ ಪಾಂಚವಾರ್ಷಿಕ ಯೋಜನೆ ರೀತಿಯಂತೆ ವರ್ಷ ವರ್ಷವೂ ಯೋಜನೆಗಳನ್ನು ಹಾಕಿಕೊಳ್ಳುತ್ತ, ಯೋಜನೆಯ ಮೊದಲಲ್ಲಿ ಮೈಸೂರನ್ನು ಹೊಸ ಮೈಸೂರನ್ನಾಗಿ ನಿರ್ಮಾಣ ಮಾಡಬೇಕಾಗಿದೆ. ಆಡಳಿತಗಾರರು ಇವುಗಳನ್ನು ಆಡಳಿತಕ್ಕನುಕೂಲಿಸುವ ದೃಷ್ಟಿಯಿಂದ ಡಿವೈಸ್ ಮಾಡಿ ಅದರಂತೆ ದೇಶವನ್ನು ಪ್ರಗತಿ ಗೊಯ್ಯಬೇಕೆನ್ನುವ ದೃಷ್ಟಿಯಿಂದ ಮಾಡಬೇಕು. ಇದು people's administration ಎಂದು ಹೇಳಲಾಗಿದೆ. ಅವರ ಭಾವನೆಗಳಿಗೆ ಅನುಸಾರವಾಗಿ ಯಾವ ಯಾವ ಭಾಗದಲ್ಲಿ ಯಾವ ರೀತಿಯ ಖನಿಜವಿದೆ, ಯಾವರೀತಿಯ ಉತ್ಪನ್ನಗಳು ಸಿಕ್ಕುವ ಸಂಭವವಿದೆ, ಯಾವ ರೀತಿ ಕೊರತೆಯಿದೆ, ಇನ್ನೂ ಯಾವ ರೀತಿಯ ಡೆವಲಪ್‌ಮೆಂಟ್ ಆಗಬೇಕಾಗಿದೆ ಎಂಬ ವಿಷಯಗಳನ್ನೆಲ್ಲ ಕೂಲಂಕಷವಾಗಿ ಯೋಚಿಸಿ ಅದಕ್ಕೆ ಬೇಕಾದ ಹಣವನ್ನು ಬಡ್ಜೆಟ್ಟಿನಲ್ಲಿ ಇಡಿಸಿ ಅದಕ್ಕನುಗುಣವಾಗಿ ಖರ್ಚು ಮಾಡಬೇಕು. ಹೀಗೆ ಈ ಐದು-ಹತ್ತು ವರ್ಷಗಳಲ್ಲಿ ಒಂದು ಕ್ರಮವಾದ ಏರ್ಪಾಟುಗಳಿಂದ ಸರ್ಕಾರ ಕೆಲಸ ಮಾಡಿದರೆ ಜನತೆಗೆ ಸಂತೋಷವುಂಟಾಗುತ್ತದೆ. ರಾಜ್ಯಪಾಲರೂ ಕೂಡ ತಮ್ಮ ಭಾಷಣದಲ್ಲಿ ಈ ವಿಷಯವನ್ನು ತಿಳಿಸಿದ್ದಾರೆ, ಸಣ್ಣ ಪುಟ್ಟ ವಿಚಾರಗಳೇ ಆಗಲಿ ದೊಡ್ಡ ವಿಚಾರಗಳೇ ಆಗಲಿ ದೇಶಕ್ಕೆ ಅನುಕೂಲಿಸುವಂತೆ ಅವುಗಳನ್ನು ಮಾರ್ಪಡಿಸಿಕೊಂಡು ಮುಂದುವರಿಯಬೇಕು. ಕೇವಲ ಸಣ್ಣ ವಿಚಾರಗಳ ಕಡೆಗೆ ಗಮನ ಹರಿಸುವುದು ಅನುಚಿತ. ಮುಖ್ಯವಾಗಿ ಆಡಳಿತಕ್ಕನುಗುಣವಾಗಿ ದೇಶವನ್ನು ಭಾಗಮಾಡಿಕೊಂಡು ಒಂದು ಅಡ್ಮಿನಿಸ್ಟ್ರೇಟಿವ್ ಯೂನಿಟ್ಟನ್ನಾಗಿ ಮಾಡಿಕೊಂಡು ಒಂದು homogeneity ಇರುವಂತೆ ನೈಪುಣ್ಯತೆಯಿಂದ ಆಡಳಿತವನ್ನು ನಡೆಸಿಕೊಂಡು ದೇಶವನ್ನು ಒಂದು ಮಟ್ಟಕ್ಕೆ ತಂದು ಜನಗಳಿಗೆ ಸರ್ಕಾರ ತನ್ನ ಕರ್ತವ್ಯಗಳನ್ನು ಹೇಗೆ ಮಾಡುತ್ತಿದೆ ಮತ್ತು ಅದರಿಂದ ಎಷ್ಟು ಉಪಯೋಗ ಜನತೆಗಾಗುತ್ತಿದೆ ಎಂಬುದನ್ನು ತಿಳಿಸಿದರೆ ಜನತೆಗೆ ಸಂತೋಷವಾಗುತ್ತದೆ. ದೇಶದಲ್ಲಿ ಈಗ ಮೊದಲನೇ ಪಾಂಚವಾರ್ಷಿಕ ಯೋಜನೆ ತೊಂಬತ್ತು ಕೋಟಿ ರೂಪಾಯಿಗಳದಾಗಿದ್ದು ಅದರಲ್ಲಿ ಏಳುಕೋಟಿ ಮಾತ್ರ ಖರ್ಚಾಗಿಲ್ಲ. ಆಯಾ ಪ್ರದೇಶಗಳಿಗನುಗುಣವಾಗಿ ಯಾವುದು ಅತ್ಯವಶ್ಯಕ ಎಂದು, ಕಾಣುತ್ತದೋ ಅದನ್ನು ಆಡಳಿತದ ಕೆಲಸಗಾರರು ಯೋಜನೆಯ ಪ್ರಕಾರ ಕೆಲಸಗಳನ್ನು ಮಾಡಬೇಕಾಗಿತ್ತು. ಈಗ ಮೊದಲನೆಯ ಪಾಂಚವಾರ್ಷಿಕ ಯೋಜನೆ ಮುಗಿದು ಎರಡನೆಯ ಪಾಂಚವಾರ್ಷಿಕ ಯೋಜನೆ ಬಂದಿದೆ. ಈಗ ಇದನ್ನು ಕಾರ್ಯಗತಮಾಡುವುದರ ಕಡೆ ನೋಡಬೇಕು. ಪಾಂಚವಾರ್ಷಿಕ ಯೋಜನೆಯ ಮಟ್ಟದಲ್ಲಿ ಕೆಲಸ ಮಾಡುವುದೇನೋ ಸರಿ. ಅದರಿಂದ ನಮ್ಮ ಗುರಿ ಸಾಧನೆಯಾಗಲಿಲ್ಲ. ಅದಕ್ಕಾಗಿ ಇನ್ನೂ ಹೆಚ್ಚು ಗಮನ ಕೊಡಬೇಕು. ನಮ್ಮ ದೇಶದಲ್ಲಿ ವ್ಯವಸಾಯ ಬಹು ವಿಚಿತ್ರವಾದದ್ದು, ಅದರಲ್ಲಿ ಮುಖ್ಯವಾಗಿ ಭೂ ಸಮಸ್ಯೆ ಮುಖ್ಯವಾದುದು. ಈ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟು ಹೆಚ್ಚು ಹೆಚ್ಚಾಗಿ

ಸೈಂಟಿಫಿಕ್ ರೀತಿಯಲ್ಲಿ ಕೆಲಸ ಮಾಡಿದರೆ ಅದರಿಂದ ದೇಶಕ್ಕೆ ಅನುಕೂಲವಾಗುತ್ತದೆ. ಆದರೆ ಇದು ನಿಜವಾಗಿಯೂ ಒಂದು ಕನಸು, ಈಗಿನ ಪರಿಸ್ಥಿತಿಯಲ್ಲಿ ಬೆಳೆಗಳನ್ನು ಅಭಿವೃದ್ಧಿಪಡಿಸಲು ಡಿಪಾರ್ಟ್‌ಮೆಂಟಿನವರು ಸರಿಯಾದ ವಿವರಗಳನ್ನು ಕೊಟ್ಟು ಸಹಾಯ ಮಾಡುತ್ತಿಲ್ಲ. ಸರ್ಕಾರ ಕೂಡ ಅದನ್ನು ನೋಡುತ್ತಿಲ್ಲ. ಇದರಿಂದ ಈ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್ ಇರುವುದು ಅನುಚಿತ ಎನ್ನುವ ರೀತಿ ಕೆಲವರಿಗೆ ಅನ್ನಿಸುತ್ತದೆ. ಇದು ಸರಿಯಲ್ಲ. ಈ ಇಲಾಖೆಯಲ್ಲಿ ಅನೂಚಾನವಾಗಿ ಬಂದಿರುವ ಕೆಲವು ಪದ್ಧತಿಗಳನ್ನು ಬದಲಾಯಿಸಲು ಸರ್ಕಾರವು ತನ್ನ ಗಮನವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಎರಡನೇ ವಿಚಾರ ಇಲ್ಲಿ ತಿಳಿಸದಿರುವುದು ವಿಧಾನ ಸೌಧದ ವಿಚಾರ. ಅದು ಅಖಂಡ ಕರ್ಣಾಟಕದ ಒಂದು ಮಹತ್ಸಾಧನೆಯೆಂದು ಹೇಳಬಹುದು. ಇದು ನಿಜವಾಗಿಯೂ ಒಂದು ದೊಡ್ಡ ಕೆಲಸ "Mysore is great" ಅದರಂತೆ ದೇಶವು ಈಗ ದೊಡ್ಡದಾಗಿದೆ. ಅದಕ್ಕೆ ತಕ್ಕಹಾಗೆ ಇದು ದೊಡ್ಡದಾದ ಕಟ್ಟಡವಾಗಿದೆ. ಈಗ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶ ಏನೆಂದರೆ, ಮುಂದೆ ರೈತರಿಗೆ ಅನುಕೂಲಗಳನ್ನು ಯಾವರೀತಿಯಾಗಿ ಕೊಡಬಹುದು ಎಂಬುದರ ಕಡೆ ಗಮನಕೊಡದೆ ಇಂತಹ ದೊಡ್ಡ ಕಟ್ಟಡದಲ್ಲಿ ಎಷ್ಟು ಜನ ಆಫೀಸರುಗಳಿರುತ್ತಾರೆ, ಅವರು ಹೇಗಿರಬೇಕು, ದೇಶದಲ್ಲಿರತಕ್ಕ ಮಂತ್ರಿಮಂಡಲ ಹೇಗಿರಬೇಕು ಸರ್ಕಾರದ ಪಕ್ಷ ಹೇಗಿರಬೇಕು ಎಂಬ ವಿಚಾರಗಳಿಗೆ ಕಾಲವನ್ನೆಲ್ಲ ಪೋಲುಮಾಡುವುದು ಸರಿಯಾಗಿಲ್ಲ. ಇದರಲ್ಲಿ ಪ್ರಧಾನವಾಗಿ "If Greece was great, the Greek people were great, not in their mind but in their will of being great." ಎನ್ನುವ ಹಾಗೆ, ಒಂದು ಆಡಳಿತವನ್ನು ಅನಾವಶ್ಯಕವಾಗಿ ಆಕ್ಷೇಪಣೆ ಮಾಡಬಾರದು. ಇಂತಹ ಒಂದು ಪವಿತ್ರವಾದ ಕಾರ್ಯವನ್ನು ಟೀಕೆಮಾಡುವಾಗ ಸಣ್ಣ ಸಣ್ಣ ಐಟಮ್ಸುಗಳ ಕಡೆ ಹೆಚ್ಚಿಗೆ ಗಮನವಿತ್ತು ಈ ಕಟ್ಟಡದ ಸೊಂಡಿಲು ಈ ರೀತಿ ಇರಬಾರದಾಗಿತ್ತು, ಇದರ ಉದ್ದ ಕಡಿಮೆಯಾಗಬೇಕಿತ್ತು, ಇದರಲ್ಲಿ ಹೆಚ್ಚು ಖರ್ಚು ಆಗಬಾರದಾಗಿತ್ತು ಎಂದು ವಿರೋಧವನ್ನು ವ್ಯಕ್ತಪಡಿಸುವುದು ಈ ಕಾಲದಲ್ಲಿ ಅನುಚಿತ. ಈ ವಿಷಯಗಳನ್ನೊಳಗೊಂಡ ವರದಿ ಕೂಡ ಈಗಾಗಲೇ ಬಂದಿದೆ ಎಂದು ಹೇಳಿದ್ದಾರೆ. ಇದೇರೀತಿ ಮಹತ್ವವುಳ್ಳವುಗಳಲ್ಲಿ ಬಹುಶಃ "On an average rate of men, money and material" ಎನ್ನುವಂತೆ ಈ ಕೆಲಸಗಳಾಗಿವೆ.

ಅನೇಕ ವರ್ಷಗಳಿಂದ ಜನತೆಯು ಆಶಿಸಿದ ಕರ್ಣಾಟಕ ಏಕೀಕರಣವು ಕೈಗೂಡಿದ ತರುಣದಲ್ಲಿಯೇ ಇಂಥ ಸುಂದರವಾದ ಸೌಧವು ಮೈಸೂರಿಗೆ ಲಭ್ಯವಾದುದು ನಮ್ಮೆಲ್ಲರ ಪುಣ್ಯ. ಇಂಥ ವಿಧಾನ ಸೌಧವಿಲ್ಲದೆ ಇದ್ದಿದ್ದರೆ ಸರಕಾರದ ಕಚೇರಿಗಳನ್ನು ಎಲ್ಲಿ ನಡೆಸಬೇಕಾಗಿತ್ತು? ಮಾಗಡಿ ತಾಲ್ಲೂಕಿನ ಚುಂಚೇನಕುಪ್ಪೆಯ ಹತ್ತಿರವಿರುವ ದೊಡ್ಡ ಆಲದಮರದ ಕೆಳಗೆ ನಡೆಸಬೇಕಾಗಿತ್ತು. ಅಥವಾ ಹುಬ್ಬಳ್ಳಿಯಲ್ಲಿ ಯಾವುದಾದರೂ ಒಂದು ಕಡಲೇಕಾಯಿ ಫ್ಯಾಕ್ಟರಿಯಲ್ಲಿ ಆಫೀಸುಗಳನ್ನಿಟ್ಟುಕೊಂಡು ಸರಕಾರವನ್ನು ನಡೆಸಬೇಕಾಗಿತ್ತು. ಈ ಕೊರತೆಯನ್ನು ವಿಧಾನಸೌಧವು ನಿವಾರಿಸಿದೆ. ಆರ್ಯ ಮತ್ತು ದ್ರಾವಿಡ ಸಂಸ್ಕೃತಿಗಳ ಕಲೆಯ ಒಂದು ಪ್ರತೀಕದಂತೆ ಈ ಕಟ್ಟಡದ ನಿರ್ಮಾಣವಾಗಿದೆ. ದೇವರು ನಮ್ಮನ್ನು ಸೃಷ್ಟಿಮಾಡುವಾಗ ನಮ್ಮ ಶರೀರದಲ್ಲಿ ಎಷ್ಟೋ ಮೂಳೆ, ನರ, ಮಾಂಸ ಇವುಗಳನ್ನು ಸೃಷ್ಟಿಸಿದ್ದಾನೆ. ಇವುಗಳಲ್ಲಿ ಯಾವುದೊಂದು ಹೆಚ್ಚುಕಡಮೆಯಾದರೂ ಶರೀರವು ಅಂದವಾಗಿ, ಕಾಣುವುದಿಲ್ಲ. ನಮ್ಮ ದೇಹದಲ್ಲಿರುವ ಸಣ್ಣ ನರಗಳಿಂದ ಏನು ಪ್ರಯೋಜನ, ಅವುಗಳು unnecessary ಎಂದು ಕರೆಯುವುದಕ್ಕಾಗುವುದಿಲ್ಲ. ಈಗ ಟೆಕ್ನಲಾಜಿಕಲ್ ಇನ್ಸ್ಟಿಟ್ಯೂಟ್ ಕಟ್ಟಡವನ್ನು ತೆಗೆದುಕೊಳ್ಳೋಣ. ಅದರ ಒಳಗಡೆ ಹೋಗಿ ನೋಡಿದರೆ ಎಷ್ಟುಭಾಗ ಉಪಯುಕ್ತವಾಗಿದೆ, ಎಷ್ಟುಭಾಗ ಇಲ್ಲವೆಂಬುದು ತಿಳಿಯುತ್ತದೆ. ಹಾಗೆಯೇ ಇತರ ಯಾವ ಕಟ್ಟಡವನ್ನೇ ತೆಗೆದುಕೊಂಡರೂ ಸಹ, ದೆಹಲಿಯಲ್ಲಿರುವ ಪಾರ್ಲಿಮೆಂಟ್ ಭವನ, ಬ್ರಿಟಿಷ್ ಸರಕಾರವಿದ್ದಾಗ ಅವರು ಕಟ್ಟಿಸಿರುವ ಕಟ್ಟಡಗಳು ಇವುಗಳಲ್ಲಿ ಯಾವುದನ್ನು ತೆಗೆದುಕೊಂಡರೂ ಸಹ, ಅವುಗಳಲ್ಲಿ ಗೋಡೆಗಳು ವಗೈರೆಗೆ ಜಾಗಹೋಗುತ್ತದೆ, ಆದ್ದರಿಂದ ಕಟ್ಟಡದ ಪೂರ್ತಿಜಾಗ ಉಪಯೋಗಕ್ಕೆ ಅನುಕೂಲವಾಗಿ ಇರುವುದಿಲ್ಲ. ಇಂಥದನ್ನು ಯಾರೂ ಪ್ರಶ್ನೆ ಮಾಡುವುದಿಲ್ಲ. ಹಾಗೆಯೇ ಈ ಕಟ್ಟಡದಲ್ಲಿಯೂ ಎಲ್ಲ ಭಾಗಗಳನ್ನೂ ಉಪಯೋಗಮಾಡುವುದಕ್ಕೆ ಸಾಧ್ಯವಾಗಲಿಲ್ಲವೆಂದು ಕಾಣುತ್ತದೆ. ಒಟ್ಟಿನಲ್ಲಿ ಈ ವಿಧಾನಸೌಧವು ಒಂದು ರಮ್ಯವಾದ ಆಸ್ತಿ ಎಂದು ನನಗನ್ನಿಸುತ್ತದೆ. ಮಾನ್ಯ ಮುಖ್ಯ ಮಂತ್ರಿಗಳಾಗಿದ್ದ ಹನುಮಂತಯ್ಯನವರು ಕಟ್ಟಿಸಿದ ಈ ಕಟ್ಟಡದ ಬೆಲೆಯನ್ನು ಮುಂದಿನ ಜನಾಂಗವು ಶ್ಲಾಘಿಸುತ್ತದೆ ಎಂದು ಧಾರಾಳವಾಗಿ ಹೇಳುತ್ತೇನೆ.

ಈ ವಿಧಾನಸೌಧ ಕಟ್ಟಡದ ವಿಚಾರದಲ್ಲಿ ಕೆಲವರ ಮೇಲೆ disciplinary action ತೆಗೆದುಕೊಳ್ಳಬೇಕೆಂದು ಸಮಿತಿಯವರು ಶಿಫಾರಸು ಮಾಡಿದ್ದಾರೆಂದು ಸರ್ಕಾರದವರು ಒಂದು ಪ್ರೆಸ್‌ನೋಟ್ ಹೊರಡಿಸಿರುವುದರಲ್ಲಿ ತಿಳಿಸಿದ್ದಾರೆ. Council of Ministers ಇರುತ್ತಾರೆ. ಇವರ ಜೊತೆಗೆ ಕಾರ್ಯದರ್ಶಿಗಳು ಇರುತ್ತಾರೆ, ಮಂತ್ರಿಗಳು ಯಾವುದಾದರೂ ಕಾರ್ಯವನ್ನು ಮಾಡಲು ಸೂಚನೆಕೊಟ್ಟರೆ, ಅಂಥ ಸಂದರ್ಭದಲ್ಲಿ responsible officer ಎಂದು ಒಬ್ಬ ಇಂಜನಿಯರನ್ನು ಹಿಡಿದುಕೊಂಡು ಅಂದಾಜಿಲ್ಲದೆ ಕೆಲಸ ಹೇಗೆ ಮಾಡಿದೆ ಎಂದು ಕೇಳಿದರೆ ಅದಕ್ಕೆ ಅವರು ಏನುಮಾಡುವುದಕ್ಕಾಗುತ್ತದೆ? ಏನಾದರೂ ಇಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾದರೆ ತಲೆಗೆ ಬಟ್ಟೆ ಇಲ್ಲದವನನ್ನು ಹಿಡಿದುಕೊಂಡು ಅವನಮೇಲೆ ತಪ್ಪನ್ನು ಹೊರಿಸುತ್ತಾರೆ. ಇದು ಸರಿಯಾದ ಪದ್ಧತಿಯಲ್ಲ. ಈ ದಿನ (19ನೇ ಮಾರ್ಚಿ 1957) ಮಾನ್ಯ ಪೂರಾಮತ್ತು ಇಲಾಖಾ ಮಂತ್ರಿಗಳನ್ನು ಅಂದಾಜು ಮಂಜೂರಾಗುವುದಕ್ಕೆ ಮೊದಲೇ ಕೆಲಸವನ್ನು ಪ್ರಾರಂಭಿಸಲು ಆಜ್ಞೆಮಾಡುವುದು ಕ್ರಮಬದ್ಧವಾಗಿರುತ್ತದೆಯೇ ಎಂದು ಕೇಳಿದ್ದಕ್ಕೆ ಅವರು ಅದು ಮಾನ್ಯ ಸದಸ್ಯರ ಅಭಿಪ್ರಾಯದ ಮಾತು ಎಂದು ತಿಳಿಸಿದರು. ಎಷ್ಟೋ ಸಂದರ್ಭಗಳಲ್ಲಿ ಮಂತ್ರಿಗಳು instructions ಕೊಡುತ್ತಾರೆ. ಅದಕ್ಕೆ ಮಂಜೂರಾತಿ ಆಗಿದೆಯೇ ಇಲ್ಲವೇ ಎಂದು ನೋಡದೆ ಹೋದರೆ ಅದು ಯಾರ ತಪ್ಪು? ಇಂಥ ಸಂದರ್ಭಗಳಲ್ಲಿ ಸಂಬಂಧಪಟ್ಟ ಸೆಕ್ರೆಟೆರಿಗಳು ಇವುಗಳನ್ನು ಸರಿಪಡಿಸಬೇಕು. ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಎಷ್ಟೋ ಸಂದರ್ಭಗಳಲ್ಲ ಸಕಾಲದಲ್ಲಿ ಬರುವುದಿಲ್ಲ. ಇದರಿಂದ ಕೆಲಸದಲ್ಲಿ ಪ್ರೋಗ್ರೆಸ್ ಬರುವುದಿಲ್ಲ. ಇದರಲ್ಲಿ ಇಂಜನಿಯರುಗಳು ಕಷ್ಟಕ್ಕೆ ಸಿಕ್ಕುತ್ತಾರೆ. ನಮ್ಮ ದೇಶದಲ್ಲಿರುವ ಒಳ್ಳೆಯ ಅಧಿಕಾರಿಗಳೂ ಇಂಥ ಸಂದಿಗ್ಧಕ್ಕೆ ಸಿಲುಕಿ ಕಷ್ಟಪಡಬೇಕಾಗುತ್ತದೆ. ಇವರುಗಳಿಗೆ ದೊಡ್ಡ ಜವಾಬ್ದಾರಿ ಇದೆ. ಇದರಲ್ಲಿ ನನಗನ್ನಿಸುವುದೇನೆಂದರೆ, ಇಲಾಖಾ ಇಂಜಿನಿಯರುಗಳು, ಮಂತ್ರಿಗಳು ಹೇಳಿದಂತೆ ಕೆಲಸಮಾಡುತ್ತಾರೆ. ಆದರೆ

(ಶ್ರೀ ಕೆ. ಪ್ರಭಾಕರ್.)

ಸರಕಾರದಲ್ಲಿರುವ ಸೆಕ್ರೆಟರಿಗಳು ಆಯಾ ಇಲಾಖೆಗೆ ಸಂಬಂಧಪಟ್ಟ ಕೆಲಸಕಾರ್ಯಗಳಲ್ಲಿ ಮಂತ್ರಿಗಳಿಗೆ ನೆರವಾಗಿ, ಕೆಲಸಕಾರ್ಯಗಳು ಕಾನೂನುಬದ್ಧವಾಗಿ ನಡೆಯುವಂತೆ ಮಾಡಬೇಕಾದದ್ದು ಅವರ ಕರ್ತವ್ಯ ; ಇದು ಅವರ ಜವಾಬ್ದಾರಿ ಆಗಿರುತ್ತದೆ. ಆದುದರಿಂದ ಕಾರ್ಯಲೋಪ ಎಲ್ಲಿ ಆಗಿದೆಯೋ, ಯಾರು ತಪ್ಪು ಮಾಡಿದ್ದಾರೋ ಅಂಥವರನ್ನು ಶಿಕ್ಷೆಮಾಡಿ. ಅಂಥವರು ಶಿಕ್ಷಾರ್ಹರು ಎಂದು ಹೇಳುತ್ತೇನೆ.

ಕಡೆಯದಾಗಿ ನಿಮ್ನವರ್ಗದವರ ವಿಚಾರವಾಗಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಾವು ಎಷ್ಟೋಸಲ ಈ ಬಗ್ಗೆ ಒತ್ತಿ ಹೇಳಿದರೂ ಸರಕಾರದ ಮನಸ್ಸಿನಲ್ಲಿರುವುದು ನಮಗೆ ಗೊತ್ತಾಗುವುದಿಲ್ಲ. ನಿಮ್ನವರ್ಗದವರ ಅಭಿವೃದ್ಧಿಗಾಗಿ ಪ್ರತ್ಯೇಕವಾದ ಒಂದು ಪಂಚವಾರ್ಷಿಕ ಯೋಜನೆಯನ್ನು ಹಾಕಿಕೊಂಡು ಕೆಲಸಮಾಡಬೇಕು. ಎಂದು ಎಷ್ಟು ಸಾರಿ ಹೇಳಿದರೂ ಕೂಡ ಸರಕಾರದವರು ಹಾಗೆ ಮಾಡುವುದಿಲ್ಲ. ನಿಮ್ನ ವರ್ಗದವರ ಅಭಿವೃದ್ಧಿಗಾಗಿ ಏರ್ಪಟ್ಟಿರುವ ಇಲಾಖಾ ಕಮಿಷನರ್ ಅವರಿಗೆ ಅಧಿಕಾರ ಕೊಡುವುದಿಲ್ಲ. ಈ ಕಾರಣಗಳಿಂದ ನಿಮ್ನವರ್ಗದವರ ಅಭಿವೃದ್ಧಿ ಎಷ್ಟು ಶೀಘ್ರವಾಗಿ ಆಗಬೇಕಾಗಿತ್ತೋ ಅಷ್ಟು ಶೀಘ್ರವಾಗಿ ಆಗುತ್ತಿಲ್ಲ. ಈಗ ಸರಕಾರದವರು ಮಾಡಿರುವ ಕಾರ್ಯಗಳನ್ನು ನಿಜವಾಗಿಯೂ ನಾವು ಕೃತಜ್ಞತೆಯಿಂದ ಸ್ಮರಿಸಿಕೊಳ್ಳಬೇಕು. ಆದರೆ ಇನ್ನೂ ಹೆಚ್ಚಿನ ಕಾರ್ಯವಾಗಬೇಕೆಂದು ಹೇಳುತ್ತೇನೆ. ಈಗ ಸರಕಾರದವರು ಮಾಡುತ್ತಿರುವ ವಯಸ್ಕರ ಶಿಕ್ಷಣಕ್ರಮ, ಸಂಗೀತ ನಾಟಕ ಅಕಾಡೆಮಿ, ಸಮಾಜವಿಕಾಸ ಯೋಜನೆ, ರಾಷ್ಟ್ರೀಯ ವಿಸ್ತರಣಾಯೋಜನೆ, ಪಂಚವಾರ್ಷಿಕ ಯೋಜನೆ ಮುಂತಾದುವುಗಳ ಪ್ರಯೋಜನ ಜನಗಳಿಗೆ ನೇರವಾಗಿ ಮುಟ್ಟುತ್ತಿಲ್ಲ. ಬಡ್ಜೆಟ್ಟಿನಲ್ಲಿ ಇಷ್ಟು ಹಣವನ್ನು ಒದಗಿಸಿದ್ದೇವೆ, ಹರಿಜನರ ಪ್ರಗತಿಯನ್ನು ಸಾಧಿಸಿದ್ದೇವೆ ಎಂದು ಹೇಳಿದರೆ ಸಾಲದು. ಹರಿಜನರಿಗೆ ಎಲ್ಲ ಸೌಲಭ್ಯಗಳೂ ದೊರೆಯುವಂತೆ ಮಾಡಬೇಕು ಎಂದು ಮತ್ತೊಮ್ಮೆ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಹಿಂದಿನ ಸರಕಾರಗಳಲ್ಲಿ 'policy of preference' ಎಂದು ಹರಿಜನರಿಗೆ ಹೆಚ್ಚು ಅವಕಾಶವನ್ನು ಕೊಟ್ಟು ಕೆಲಸಗಳಿಗೆ ನೇಮಿಸುವುದರಲ್ಲಿ ಮತ್ತು ಇತರ ವಿಷಯಗಳಲ್ಲಿ ಆದ್ಯತೆ ಕೊಡಬೇಕು ಎಂಬ ಪದ್ಧತಿ ಇತ್ತು. ಈಗಲೂ ಕೂಡ ರೂಲ್ಸ್ ಮಾಡುತ್ತಾರೆ. ಆದರೆ ಅದನ್ನು ಕಾರ್ಯಗತಮಾಡುವಾಗ ಅನೇಕ ವಿಚಾರಗಳು ಲೋಪವಾಗುತ್ತವೆ. ಈ ಕಡೆ ಸರಕಾರದವರು ನಿಗಾಕೊಡಬೇಕು. ಹರಿಜನರ ಪ್ರಗತಿಯ ಬಗ್ಗೆ ಹೆಚ್ಚು ಆಸಕ್ತಿಯಿಂದ ಕೆಲಸಮಾಡಬೇಕೆಂದು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸಭಾಧ್ಯಕ್ಷರೇ, ರಾಜ್ಯಪಾಲರು ಉಭಯಸದನಗಳನ್ನುದ್ದೇಶಿಸಿ ಮಾಡಿದ ಭಾಷಣಕ್ಕಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತ ಒಂದೆರಡು ಮಾತುಗಳನ್ನು ಮಾತ್ರ ತಮ್ಮ ಗಮನಕ್ಕೆ ತರಬೇಕೆಂದು ನಿಂತಿದ್ದೇನೆ. ನಾವು ಕಳೆದಿರುವ ಐದು ವರ್ಷಗಳು ಎಲ್ಲ ದೃಷ್ಟಿಯಲ್ಲಿಯೂ ಬಹಳ ಚರಿತ್ರಾರ್ಹವಾದ ಅವಧಿ. ಈ ಅವಧಿಯಲ್ಲಿ ನಾವು ಹೆಮ್ಮೆ ಪಡಬಹುದಾದ ಅನೇಕ ಕೆಲಸಕಾರ್ಯಗಳನ್ನು ಸಾಧಿಸಿದ್ದೇವೆ. ಅವುಗಳಲ್ಲಿ ಪ್ರಾಂತ ವಿಂಗಡಣೆ ಕಾರ್ಯವೆನ್ನುವುದು ಅತಿ ಪ್ರಾಮುಖ್ಯವಾದದ್ದು. ನಾನು ಹೇಳಬಹುದಾದರೆ ಬಹುಶಃ ಭಾರತದಲ್ಲಿ ಎಲ್ಲೆಲ್ಲೂ ಕಾಣದೆ ಇದ್ದಷ್ಟು ಒಂದು ರಾಜಕೀಯ ಕೌಶಲ್ಯ ಮತ್ತು ಜಾಣ್ಮೆಯನ್ನು ತೋರಿ ನಮ್ಮ ಈ ಶಾಸನ ಸಭೆಯು ಪ್ರಾಂತ ವಿಂಗಡಣೆ ಮಸೂದೆಯನ್ನು ಮತ್ತು ಅದರ ಜೊತೆಗೆ ಸಮಯ ಬಂದಲ್ಲಿ ಬಹು ಭಾಷಾ ಪ್ರಾಂತದ ನಿರ್ಮಾಣಕ್ಕೂ ಸರ್ವಾನುಮತದ ಸ್ವಾಗತವನ್ನು ನೀಡುವ ನಿರ್ಣಯವನ್ನು ಕೈಗೊಂಡು ಪ್ರಧಾನಿ ಜವಹರಲಾಲ ನೆಹರೂ ಅವರ ಮೆಚ್ಚುಗೆಯನ್ನು ಪಡೆಯಿತು. ಇಂಥ ಮಹತ್ಸಾಧನೆಯ ಕೀರ್ತಿಯ ಒಂದುಭಾಗ ಅಂದಿನ ಸಭಾನಾಯಕರಾಗಿದ್ದ ಶ್ರೀ ಕೆ. ಹನುಮಂತಯ್ಯನವರಿಗೆ ಸಲ್ಲತಕ್ಕದಾಗಿದೆ ಎಂದರೆ ಯಾರಿಗೂ ಭಿನ್ನಾಭಿಪ್ರಾಯಕ್ಕೆ ಅವಕಾಶ ಕೊಟ್ಟಿರುವ ಮಾತು ಎಂದು ಭಾವಿಸಲಿಕ್ಕಿಲ್ಲವೆಂದು ನಂಬಿದ್ದೇನೆ.

ಈ ಶಾಸನ ಸಭೆ, ರೈತಾಪಿ ಜನರಲ್ಲಿ ಭೂಸುಧಾರಣೆ ಕುರಿತಾಗಿ ಶಾಂತಿಕಾರಕ ಕ್ರಾಂತಿಯಾಗಬೇಕೆಂದೂ ಅಂಥ ಒಂದು ಕ್ರಾಂತಿಗೆ ಶಾಸನ ನಿರ್ಮಾಣ ಕಾರ್ಯದಲ್ಲಿ ಒಂದು ಹೆಜ್ಜೆಯನ್ನು ಮುಂದಿಟ್ಟಿದೆ. ಇನಾಂ ರದ್ದಿಯಾತಿ ಮಸೂದೆಯನ್ನು ಪಾಸ್ ಮಾಡಲಾಗಿದೆ. ಇನ್ನು ಉಳಿದಂಥ ಭೂಸುಧಾರಣೆಯ ಬಗ್ಗೆ ಕಾರ್ಯಗಳನ್ನು ಮುಂದಿನ ಶಾಸನ ಸಭೆ ನಡೆಸಬೇಕಾಗಿದೆ. ಇಲ್ಲಿ ಹೆಚ್ಚು ವಿಷಯಗಳನ್ನು ಪ್ರಸ್ತಾಪ ಮಾಡುವ ಅವಕಾಶವಿಲ್ಲದೆ ಇರುವುದರಿಂದ ಒಂದೆರಡು ವಿಷಯಗಳ ಬಗ್ಗೆ ನನ್ನ ಸಂತೋಷವನ್ನು ಸೂಚಿಸಬಯಸುತ್ತೇನೆ.

ಅನೇಕ ವರ್ಷಗಳಿಂದ ಕರಾಚಿಗೂ ಗೋವಕ್ಕೂ ಮಧ್ಯೆ ಕನ್ನಡನಾಡಿಗೆ ಬೇಕಾದಂಥ ಒಂದು ಬೃಹತ್ ಬಂದರನ್ನು ನಿರ್ಮಾಣ ಮಾಡಬೇಕೆಂಬ ಪ್ರಯತ್ನವನ್ನು ಮದರಾಸಿನ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಮಿತ್ರರು ಮಾಡುತ್ತಿದ್ದಾರೆ. ಕೇಂದ್ರ ಸರಕಾರದವರು ಒಂದು ಸಮಿತಿಯನ್ನು ನೇಮಕಮಾಡಿದಾಗ ಆ ಸಮಿತಿಯವರು ಮಲ್ಪೆ ಬಂದರು ಅರ್ಹವಾಗಿದೆ ಎಂದು ಶಿಫಾರಸು ಮಾಡಿದರು. ಅದು ನಾನಾಕಾರಣಗಳಿಂದ ಕಾರ್ಯರೂಪಕ್ಕೆ ಬರಲಿಲ್ಲ. ಬಹುಶಃ ಈ ಕನ್ನಡನಾಡಿನ ಅವಶ್ಯಕತೆಗಳನ್ನು ಅರಿತು, ಕನ್ನಡನಾಡಿನ ಕೃಷಿ, ಕೈಗಾರಿಕೆಗಳ ಅಭಿವೃದ್ಧಿಗೆ ಬೇಕಾದಂಥ ವಾದವನ್ನು ಕೇಂದ್ರ ಸರಕಾರದ ಮುಂದೆ ಮಾಡಿಸಿ ತಮಗೆ ಬೇಕಾದ ಸೌಕರ್ಯವನ್ನು ಪಡೆದುಕೊಳ್ಳಬಹುದಾದ ಸರಕಾರ, ಇಲ್ಲದಿದ್ದುದೇ ಕಾರಣವಾಗಿರಬಹುದು. ಸುದೈವವಶಾತ್ ಇಂದು ಇಡೀ ನಾಡಿನ ಸರ್ವತೋಮುಖವಾದ ಅಭಿವೃದ್ಧಿ ಸಾಧನೆಗಾಗಿ ಹೋರಾಡುವ ಸರಕಾರ ನಮ್ಮಲ್ಲಿದೆ. ಇಂಥ ಸರಕಾರವಿರುವುದರಿಂದ ಮಲ್ಪೆ ಬಂದರನ್ನು ಉತ್ತಮಪಡಿಸುವ ಆಶ್ವಾಸನೆ ಕೊಟ್ಟಿದ್ದಾರೆ. ಇದು ಬಹಳ ಸಂತೋಷದ ವಿಚಾರ. ಹಾಗೆಯೇ ಭದ್ರಾವತಿ ಮತ್ತು ಸುತ್ತಮುತ್ತಲೂ ಸ್ಥಾಪಿಸಲ್ಪಡಲಿರುವ ಕೈಗಾರಿಕೆಗಳ ಅಭಿವೃದ್ಧಿ ಈ ಬಂದರನ್ನು ಹೊಂದಿಕೊಂಡಿದೆ ಎಂದು ಅಂಕಿ ಅಂಶಗಳಿಂದ ಪ್ರಸ್ತಾಪಿಸುವುದು ಅನಾವಶ್ಯಕವೆಂದು ತಿಳಿದುಕೊಂಡಿದ್ದೇನೆ. ಭದ್ರಾವತಿಗೆ ಬೇಕಾಗಿರುವ ಕಲ್ಲಿದ್ದಲು 300 ಮೈಲಿ ದೂರವಿರುವ ಮದರಾಸಿನಿಂದ ಬರುತ್ತಿದೆ. ಮಲ್ಪೆ ಬಂದರಾದರೆ ಭದ್ರಾವತಿಗೆ 108 ಮೈಲಿ ದೂರ ಮಾತ್ರವಿದ್ದು ಬಹಳ ಸಮೀಪವಾಗುತ್ತದೆ. ಹಾಗೂ ಮಲೆನಾಡಿನ ಅನೇಕ ಉದ್ಯೋಗಗಳಿಗೂ ವ್ಯವಹಾರಗಳಿಗೂ ಈ ಮಲ್ಪೆ ಬಂದರು ಬಹಳ ಸಹಾಯಕ ವಾಗುತ್ತದೆ. ಅನೇಕ ವರ್ಷಗಳಿಂದ ಬಯಸಿದ್ದಂಥ ಕನ್ನಡನಾಡಿನ ಬಂದರಿನ ಆವಶ್ಯಕತೆಯನ್ನು ಪೂರೈಸುವ ಕಾರ್ಯದಲ್ಲಿ ಸರಕಾರದವರು ಆಸಕ್ತಿವಹಿಸಲೆಂದು ಆಶಿಸುತ್ತೇನೆ.

ಪಂಚವಾರ್ಷಿಕ ಯೋಜನೆಯಲ್ಲಿ ಮೊದಲು ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಅಭಿವೃದ್ಧಿಗೆ 12 ಕೋಟಿ

ರೂಪಾಯಿಗಳ ಹಣವನ್ನು ಒದಗಿಸಿದ ಘೋಷಣೆ ಯಾಗಿತ್ತು. ಇದನ್ನು ಸ್ಟೈರ್ಯಿಲೆಸ್ ಸ್ಟೀಲ್ ಮೊದಲಾದ ಪದಾರ್ಥಗಳನ್ನು ಮಾಡುವುದಕ್ಕೆ ಒದಗಿಸಲಾಗಿತ್ತು. ಕೊನೆಗೆ ಕೇವಲ 7 ಕೋಟಿರೂಪಾಯಿಗಳಿಗೆ ಈ ಹಣವನ್ನು ಇಳಿಸಿರುವುದಾಗಿ ತೀರ್ಮಾನವಾಗಿದೆ. ಇದಾಗಬಾರದಾಗಿತ್ತು. ಯಾರ ಲೋಪ ದೋಷಗಳಿಂದ ಅಥವಾ ಯಾವ ನ್ಯೂನತೆಯಿಂದ ಈ ರೀತಿ ಭದ್ರಾವತಿಗೆ ದೊರಕಬೇಕಾದಂಥ ಹಣ ಕಡಮೆ ಯಾಯಿತು, ಸ್ಟೈರ್ಯಿಲೆಸ್ ಸ್ಟೀಲ್ ಮೊದಲಾದ ಸ್ಕೀಮುಗಳನ್ನು ಕೈಬಿಡಲಾಗಿದೆ ಎನ್ನುವುದನ್ನು ಪರಿಶೀಲನೆ ಮಾಡಿ ನಮ್ಮ ಸರಕಾರದವರು ಕೇಂದ್ರದೊಡನೆ ವ್ಯವಹರಿಸಲು ಪ್ರಯತ್ನ ಮಾಡಬೇಕು. ಏಕೆಂದರೆ ಮುಂದೆ ಉತ್ತರ ಹಿಂದೂಸ್ಥಾನದ ದೊಡ್ಡ ದೊಡ್ಡ ಕಾರ್ಖಾನೆಗಳು ತಯಾರಿಕೆಯನ್ನು ಪ್ರಾರಂಭಿಸಿದಾಗ ಇಲ್ಲಿ ತಯಾರ್ಮಾಡುವ ಉಕ್ಕು, ಕಬ್ಬಿಣ ಮುಂತಾದವುಗಳಿಗೆ ಪೇಟೆಯನ್ನು ಒದಗಿಸುವುದಕ್ಕೆ ಬಹಳ ಕಷ್ಟಬರಬಹುದು.

5 P.M.

ಆದ್ದರಿಂದ ಕೆಲವು ವಿಶೇಷ 'ಮನಾಪಲಟಿ' ಇಟ್ಟುಕೊಂಡು ನಮ್ಮ ಹಿತವನ್ನು ಕಾಪಾಡಿಕೊಳ್ಳಬೇಕು. ಆ ಕಾರ್ಯದಿಂದ ಏನಾದರೂ ಲೋಪ ದೋಷವಾಗಿದ್ದರೆ ಅದನ್ನು ಸರಿಪಡಿಸಿಕೊಳ್ಳಬೇಕಾದದ್ದು ಬಹಳ ಅಗತ್ಯ.

ಪಟೇಲ್ ಶ್ಯಾನುಭೋಗರ ಬೇಡಿಕೆಗಳನ್ನು ಸರ್ಕಾರದವರು ಎಷ್ಟು ಶೀಘ್ರವಾಗಿ ಪರಿಶೀಲನೆ ಮಾಡಬೇಕಾಗಿತ್ತೋ ಅಷ್ಟು ಶೀಘ್ರವಾಗಿ ಮಾಡಲಿಲ್ಲ, ಕೇವಲ ಆಶ್ವಾಸನೆಯನ್ನು ಮಾತ್ರಕೊಟ್ಟಿದ್ದಾರೆ ಎಂದು ನಮ್ಮ ಅನೇಕ ಸ್ನೇಹಿತರು ಪ್ರಸ್ತಾಪಮಾಡಿದ್ದಾರೆ. ಅದು ನಿಜ. ಪಟೇಲ್‌ಶ್ಯಾನು ಭೋಗರು ಈ ಗ್ರಾಮ ಜೀವನದ ಬಹಳ ಪ್ರಭಾವ ಶಾಲಿಗಳಾದ ವ್ಯಕ್ತಿಗಳು ಅವರು ತಮ್ಮ ಬೇಡಿಕೆಯನ್ನು ಸುಮಾರು ಎರಡು ಮೂರು ವರ್ಷಗಳಿಂದ ಅತ್ಯಂತ ಸೌಜನ್ಯಯುತವಾದ ರೀತಿಯಲ್ಲಿ ಸರ್ಕಾರದ ಮುಂದೆ ಇಟ್ಟರೂ ಕೂಡ ಸರಕಾರ ಯಾವ ವಿಧವಾದ ಸಂಧಾನವನ್ನೂ ಮಾಡದೆ ಉದಾಸೀನ ಮಾಡಿದ್ದಾರೆ. ಅದು ನಿಜವಾಗಿಯೂ ನ್ಯಾಯವಲ್ಲ. ಈಗಲಾದರೂ ಕೂಡ ಅವರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ ಯಾವುದು ಅವರಿಗೆ ಆಗಬೇಕಾಗಿದೆಯೋ ಯಾವುದು ನ್ಯಾಯವೋ ಯಾವುದು ಸಾಧುವೋ ಅದನ್ನು ಮಾಡಿಕೊಡಬೇಕಾದದ್ದು ಸರಕಾರದವರ ಅಗತ್ಯ ಕರ್ತವ್ಯ.

ಇನ್ನೊಂದು ವಿಷಯವನ್ನು ಮಾತ್ರ ಪ್ರಸ್ತಾಪಿಸಬೇಕಾಗಿದೆ. ಈ ಸಭೆ ಇನ್ನೂ ಕೆಲವು ದಿನಗಳಲ್ಲಿ ತನ್ನ ಅವಧಿಯನ್ನು ಮುಗಿಸಿಕೊಳ್ಳುತ್ತದೆ. ಮುಂದೆ ಬರತಕ್ಕ ಶಾಸನಸಭೆಯಲ್ಲಿ ಅನೇಕರು ದಕ್ಷರಾಗಿ, ತಾವು ಅಂದುಕೊಂಡ ತತ್ವಗಳ ಧ್ಯೇಯಗಳನ್ನು ನಿಷ್ಠೆಯಿಂದ ಪ್ರತಿಪಾದಿಸಿ, ನ್ಯಾಯವಾದ ರೀತಿಯಲ್ಲಿ ಸೇವೆ ಆಗಬೇಕು ಎಂಬ ಹುರುಪನ್ನಿಟ್ಟುಕೊಂಡು ಹೋಗುತ್ತಾ ಇದ್ದ ನಾಯಕರುಗಳು ಇರುವುದಿಲ್ಲ. ಹಾಗೆಯೇ ಆಡಳಿತ ಪಕ್ಷದಲ್ಲೂ ಕೂಡ ಪ್ರಾಮಾಣಿಕತನ. ನಿಷ್ಠೆ ಮತ್ತು ಪ್ರತಿಭೆಗೆ ಹೆಸರಾದಂಥ ಅನೇಕ ನಾಯಕರುಗಳು ಈ ಶಾಸನ ಸಭೆಯ ಚುನಾವಣೆಯಲ್ಲಿ ಪರಾಜಿತರಾಗಿದ್ದಾರೆ. ಈ ರೀತಿ ಆಗುವುದಕ್ಕೆ ಈ ಚುನಾವಣೆಗಳು ನಡೆಯುವ ಕಾಲದಲ್ಲಿ ಏನು ಲೋಪದೋಷಗಳಿದ್ದವು ಎನ್ನುವುದನ್ನು ಪ್ರಜಾಪ್ರಭುತ್ವದ ಬೆಳವಣಿಗೆಯಲ್ಲಿ ಆಸಕ್ತಿಯುಳ್ಳ ಸರ್ವರೂ ಯೋಚಿಸಬೇಕಾದ ವಿಷಯ ಇದರಲ್ಲಿದೆ ಎಂದು ನಾನು ಅಂದುಕೊಂಡಿದ್ದೇನೆ. ಇದರ ಕಡೆಗೆ ದೃಷ್ಟಿ ಬೀಳಬೇಕು. ವಿರೋಧ ಪಕ್ಷ ಇದ್ದರೂ ಕೂಡ ಒಳ್ಳೆಯ ನಿಸ್ಪೃಹತೆಯಿಂದ ಮಾರ್ಗದರ್ಶನ ಮಾಡುವಂಥ ವ್ಯಕ್ತಿಗಳು ಇರಬೇಕಾದ್ದು ಅಗತ್ಯ. ಅಂಥ ವ್ಯಕ್ತಿಗಳಿಗೆ ಸೇವೆಮಾಡ ತಕ್ಕಂಥ ಅವಕಾಶ ಕೊಡುವ ಪದ್ಧತಿ ಎಲ್ಲಿದೆಯೋ ಗೊತ್ತಿಲ್ಲ. ಅಂತೂ ಮುಂದಿನ ಸಭೆಯ ಕಾರ್ಯಕಲಾಪಗಳು ಪರಿಪೂರ್ಣ ಯಶಸ್ವಿಯಾಗಿ ನಡೆಯಲಿ ಎಂದು ಹಾರೈಸಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಸಭಾಪತಿಗಳನ್ನು ವಂದಿಸುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ನಿರ್ಣಯವನ್ನು ನಾನು ವಿರೋಧಿಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿರತಕ್ಕ ಅಂಕಿ ಅಂಶಗಳು ವಾಸ್ತವಾಂಶಕ್ಕೆ ದೂರವಾಗಿವೆ ಎಂದು ಹೇಳಿ ನನಗೆ ಬಹಳ ವಿಷಾದವಾಗುತ್ತದೆ. ನಾವು ನಿಜವಾಗಿಯೂ ಹೆಮ್ಮೆ ಪಡಬೇಕಾಗಿದ್ದರೆ ಈ ಐದು ವರ್ಷಗಳಲ್ಲಿ ದೇಶದಲ್ಲಿ ಸ್ವಾತಂತ್ರ್ಯಾನಂತರ ಬಂದ ಪ್ರಜಾಪ್ರಭುತ್ವದ ತತ್ವವನ್ನು ಎಷ್ಟರ ಮಟ್ಟಿಗೆ ಪಾಲಿಸಿಕೊಂಡು ಬಂದಿದ್ದೇವೆ, ಅಲ್ಲದೆ ಈಗ ಸೋಷಿಯಲಿಸ್ಟಿಕ್ ಪ್ಯಾಟರನ್ ಎಂದು ಹೇಳುತ್ತಾರಲ್ಲಾ ಆ ಸಮಾಜವಾದ ತತ್ವವನ್ನು ಎಲ್ಲಿಯವರೆಗೆ ಜಾರಿಗೆ ಕೊಟ್ಟಿದ್ದಾರೆ, ಎಷ್ಟರಮಟ್ಟಿಗೆ ದೇಶದ ಸರ್ವ ಜನರಿಗೂ ಅನ್ವಯವಾಗುವ ರೀತಿಯಲ್ಲಿ ಆಡಳಿತ ಪದ್ಧತಿಯನ್ನು ಬದಲಾಯಿಸುತ್ತಿದ್ದಾರೆ ಎನ್ನುವುದನ್ನು ನಾವು ನಮ್ಮ ಈ 5 ವರ್ಷದ ಅವಧಿಯಲ್ಲಿ ಅನುಭವಿಸಿದ ಕಾರ್ಯಕಲಾಪಗಳಿಂದ ಅಳತೆ ಮಾಡಿಕೊಳ್ಳಬಹುದಾಗಿದೆ. ನಾನು ಅತ್ಯಂತ ವಿಷಾದದಿಂದ ಹೇಳುತ್ತೇನೆ, ಈ ಎರಡರಲ್ಲಿ ಕೂಡ ನಾವು ಬಹಳ ಹಿಂದುಬಿದ್ದಿದ್ದೇವೆ. ಪ್ರಜಾಪ್ರಭುತ್ವ ಎಂದರೆ ನಾವು ಸ್ವಲ್ಪ ಯೋಚನೆ ಮಾಡೋಣ. ಸ್ಥಳೀಯ ಸಂಸ್ಥೆಗಳ ಚುನಾವಣೆ,ಜಿಲ್ಲಾಬೋರ್ಡ್ ಚುನಾವಣೆ ಒಂದೊಂದು ತೆಗೆದುಕೊಂಡರೂ ಸ್ವಾತಂತ್ರ್ಯಾನಂತರ ಒಂದು ಸಾರಿಯೂ ಕೂಡ ಚುನಾವಣೆ ಆಗಲಿಲ್ಲ. ಸ್ಥಳೀಯ ಸಂಸ್ಥೆಗಳಿಗೆ ಮುಟ್ಟುಗೋಲು ಹಾಕಿದ ಪರಿಸ್ಥಿತಿಯಿಂದ ಅಲ್ಲಿ ಜನಗಳ ಸ್ವಯಮಾಡಳಿತಕ್ಕೆ ಅವಕಾಶ ಬಾರದಂತೆ ಕಾಂಗ್ರೆಸ್ ಸರ್ಕಾರ ನಡೆದುಕೊಂಡಿದೆ. ಮುಖ್ಯವಾಗಿ ಪ್ರಜಾಪ್ರಭುತ್ವತತ್ವವನ್ನು ಅರಿಯುವುದಕ್ಕೆ ಮತ್ತು ಜನಗಳು ಆಡಳಿತದಲ್ಲಿ ತಮ್ಮ ಅನುಭವವನ್ನು ಸಂಪಾದಿಸುವುದಕ್ಕೆ ಸ್ಥಳೀಯ ಸಂಸ್ಥೆಗಳೇ ಒಂದು ಮುಖ್ಯವಾದ ಜಾಗವಾಗಿತ್ತು. ಅಂಥದರಲ್ಲಿ ಅದನ್ನು ಮೂಲೆಗೆ ಹಾಕಿದರು. ಅಲ್ಲದೆ ಅದಕ್ಕೆ ಸಂಬಂಧಪಟ್ಟ ಕಾನೂನು 1952ರಲ್ಲಿ ಜಾರಿಗೆ ಬರಬೇಕಾಗಿತ್ತು. ಅದನ್ನು ಜಾರಿಗೆ ಕೊಟ್ಟರೂ ಕೂಡ ಅದನ್ನು ಆಚರಣೆಗೆ ತಾರದೆ ಮೂರು ಸಾರಿ ತಿದ್ದುಪಡಿ ಮಾಡಿದ್ದಾರೆ. ಯಾವುದೇ ಕಾನೂನು ಆದರೂ ಕೂಡ ಅದನ್ನು ಕಾನೂನು ಮಾಡಿದ ಮೇಲೆ ಅದರ ಅನುಭವದ ಮೇಲೆ ತಿದ್ದುಪಡಿ ಮಾಡುವುದು ಒಂದು ಪದ್ಧತಿ. ಆದರೆ ಅದನ್ನು ಜಾರಿಗೆ ತಾರದೆ ಮೂರು ಸಾರಿ ತಿದ್ದುಪಡಿ ಮಾಡಿರತಕ್ಕದ್ದು ಒಂದು ನಾಚಿಕೆಗೇಡಿನ ಪ್ರಸಂಗ. ಅಲ್ಲದೆ ಈ ಸೋಷಿಯಲಿಸ್ಟಿಕ್ ಪ್ಯಾಟರನ್ ಎಂದು ಹೇಳುತ್ತಾ ಇರುವುದು, ಈ ಆರ್ಡಿನೆನ್ಸ್ ತಂದಿರುವುದು—ಇದನ್ನು ನೋಡಿದರೆ ಎಷ್ಟು ಅಸಂಬದ್ಧ, ಎಷ್ಟು ಕೆಡಕು ಮನೋಭಾವದಿಂದ ಈ ಸರ್ಕಾರ ವರ್ತಿಸುತ್ತಾ ಇದೆ ಎಂಬುದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈ ಸರ್ಕಾರ ಮೊದಲಿನಿಂದಲೂ ಕೂಡ ಗೇಣೀ ಶಾಸನವನ್ನು ತಿದ್ದುಪಡಿ ಮಾಡುವುದಕ್ಕೆ ಹತ್ತು ವರ್ಷ ತೆಗೆದುಕೊಂಡಿತು. ಈಗಾಗಲೇ ಅದು ಜಾರಿಗೆ ಬರಬೇಕಾಗಿದ್ದರೂ ಕೂಡ ಅದನ್ನು ತಡೆಹಿಡಿದಿದ್ದಾರೆ. ಅದೂ ಅಲ್ಲದೆ ಬೊಂಬಾಯಿ

(ಶ್ರೀ ಬಿ. ಹುಚ್ಚೇಗೌಡ.)

ಶಾಸನ ಸಭೆಯಲ್ಲಿ ಅವರೂ ಕೂಡ ಬಹಳ ವಿಚಕ್ಷಣೆಯಿಂದ ಮತ್ತು ಪ್ರಜಾಭಿಪ್ರಾಯಕ್ಕೆ ಮತ್ತು ಯಾವ ಒಂದು ಸಮಾಜವಾದತತ್ವವನ್ನು ಸರ್ಕಾರ ಅಂಗೀಕರಿಸಿದೆಯೋ ಆ ತತ್ವದ ಆಧಾರದ ಮೇಲೆ ಮಾಡಿರತಕ್ಕ ಗೇಣೀಶಾಸನವನ್ನು ಈಗ ಆರ್ಡಿನೆನ್ಸ್ ಮೂಲಕ ಮೊಟಕು ಮಾಡಿದ್ದಾರೆ. ಒಂದು ವೇಳೆ ಎಲ್ಲ ಕಡೆಯೂ ಒಂದೇ ಶಾಸನ ಜಾರಿಗೆ ಬರಬೇಕಾಗಿದ್ದರೆ ಈ ಆರ್ಡಿನೆನ್ಸ್ ಮಾಡತಕ್ಕಂಥ ಒಂದು ಅಧಿಕಾರ ಸರ್ಕಾರಕ್ಕೆ ಏನಿದೆಯೋ ಅದನ್ನು ಚಲಾಯಿಸಿ ಎಲ್ಲ ಕಡೆಯೂ ಜಾರಿಮಾಡುವುದಕ್ಕೆ ಏಕೆ ಉಪಯೋಗಿಸಬಾರದಾಗಿತ್ತು ಎಂದು ನಾನು ಪ್ರಶ್ನೆ ಮಾಡುತ್ತೇನೆ. ನಿಜವಾಗಿಯೂ ಇದು ಪ್ರತಿಗಾಮಿ ತತ್ವವನ್ನು ಮುಂದುವರಿಸುತ್ತಾ ಇರತಕ್ಕ ಸರ್ಕಾರವೇ ಹೊರತು ಪ್ರಗತಿಗಾಮಿ ಅಲ್ಲ ಎನ್ನುವುದಕ್ಕೆ ಇದು ಒಂದೇ ದೃಷ್ಟಾಂತ ಸಾಕು. ಮೊದಲನೆಯದಾಗಿ, ಪ್ರಜಾಪ್ರಭುತ್ವ ತತ್ವಕ್ಕೇ ತಿಲಾಂಜಲಿಯನ್ನು ಕೊಟ್ಟಿದ್ದಾರೆ. ಎರಡನೆಯದಾಗಿ ಸಮಾಜವಾದ ತತ್ವಕ್ಕೂ ಕೂಡ ಮಣ್ಣುಮುಕ್ಕಿಸಿದ್ದಾರೆ. ಇಂಥ ಸರ್ಕಾರವನ್ನು ನಾವು ಎಷ್ಟು ಮಟ್ಟಿಗೆ ಪುರಸ್ಕರಿಸಬೇಕು ಎನ್ನುವುದನ್ನು ಈಗ ನಮ್ಮ ಮುಂದೆ ಈ ನಿರ್ಣಯವನ್ನು ಸೂಚಿಸಿದವರೇ ಹೇಳಬೇಕು.

ಇನ್ನೊಂದು ಪ್ರೊಹಿಬಿಷನ್ ವಿಚಾರ. ಈ ತತ್ವವನ್ನು ಎಷ್ಟುಮಟ್ಟಿಗೆ ಜಾರಿಮಾಡಿದ್ದಾರೆ, ಇದು ಯಾವರೀತಿ ಆಚರಣೆಯಲ್ಲಿದೆ ಎನ್ನುವುದನ್ನು, ನನಗೆ ಈಗ ಕಾಲವ್ಯವಧಾನವಿಲ್ಲದೆ ಇರುವುದರಿಂದ, ಮತ್ತೊಂದು ಕಾಲದಲ್ಲಿ ಹೇಳುತ್ತೇನೆ. ಮಾನ್ಯ ಸದಸ್ಯರೆಲ್ಲರೂ ಕೂಡ ಆ ವಿಷಯದಲ್ಲೂ ಅವರ ಧರ್ಮಬುದ್ಧಿ (conscience) ಯನ್ನು ನೋಡಿಕೊಂಡು ತಿಳಿದುಕೊಳ್ಳಬಹುದಾಗಿದೆ.

ಇನ್ನೊಂದು ವಿಷಯ ಏನೆಂದರೆ, ಪ್ರಜೆಗಳ ಆಶೋತ್ತರಗಳಿಗೆ ಮತ್ತು ಅವರ ಒಂದು ನೈತಿಕ ಆರ್ಥಿಕ ಮಟ್ಟ ಹೆಚ್ಚಬೇಕಾದರೆ, ವಿದ್ಯಾಭ್ಯಾಸ ಅತ್ಯವಶ್ಯಕ. ಈ ವಿದ್ಯಾಭ್ಯಾಸದ ಬೆಳವಣಿಗೆಯಲ್ಲೂ ಕೂಡ ಎಷ್ಟು ಹಿಂದುಳಿದಿದೆ; ಯಾವ ರೀತಿ ಈ ಸರ್ಕಾರ ಮುಂದೆ ಹೋಗುತ್ತಾ ಇದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ನಮ್ಮ ಹಿಂದಿನ ಮೈಸೂರಿನಲ್ಲೂ ಕೂಡ 36 ತಾಲ್ಲೂಕುಗಳಲ್ಲಿ ಬಲತ್ಕಾರ ವಿದ್ಯಾಭ್ಯಾಸ ಇದ್ದುದನ್ನು ಈ ಸರ್ಕಾರ ನಿಲ್ಲಿಸಿದೆ. ಹಿಂದಿನ ಸರ್ಕಾರ ಎಂದರೆ ಬೇಜವಾಬ್ದಾರಿ ಸರ್ಕಾರ ಇದ್ದಾಗ ವರ್ಷ ಒಂದಕ್ಕೆ 400 ಸ್ಕೂಲು ಕೊಡುತ್ತಾ ಇದ್ದಿತು. ಅದೇ ಈಚೆಗೆ ಒಂದು ಪ್ರಾಥಮಿಕ ಶಾಲೆ ಆಗಲಿ, ಒಂದು ಮಾಧ್ಯಮಿಕ ಶಾಲೆ ಆಗಲಿ ಆಗದೇ ಇರುವ ಪರಿಸ್ಥಿತಿ ಒದಗಿದೆ. ಇದನ್ನು ನೋಡಿದರೆ ಇವರು ಯಾವರೀತಿ ಒಂದು ಮಾನ ಮರ್ಯಾದೆ ಬಿಟ್ಟು ಈ ಐದು ವರ್ಷಗಳಲ್ಲಿ ಎಷ್ಟೋ ಪ್ರಗತಿಯಾಗಿದೆ ಎಂದು ಹೇಗೆ ಹೇಳುತ್ತಾರೋ ಅರ್ಥವಾಗುವುದಿಲ್ಲ. ಯಾವದೃಷ್ಟಿಯಿಂದ ಯಾವ ಅಳತೆ ಕೋಲಿನಿಂದ ಈ ಪ್ರಗತಿಯನ್ನು ಅಳೆಯಬೇಕು ಎನ್ನುವುದನ್ನು ಹೇಳುವುದಕ್ಕೆ ನಮಗೆ ಸಾಧ್ಯವಾಗಿಲ್ಲ. ಅಲ್ಲದೆ ನಾವು 150 ಸೇತುವೆಗಳನ್ನು ಕಟ್ಟಿಸಿದ್ದೇವೆ, ಸಾವಿರಾರು ಕೆರೆಗಳನ್ನು ಕಟ್ಟಿಸಿದ್ದೇವೆ ಎಂದು ಸಚಿವರು ಹಿಂದೆ ಹೇಳಿದ್ದರು ಅದು ಯಾವುದೆಂಬುದನ್ನು ನೋಡಬೇಕಾಗಿದೆ. ಆರು ಸಾವಿರ ಪಂಪುಗಳನ್ನು 5 ವರ್ಷಗಳಲ್ಲಿ ಕೊಟ್ಟಿವೆಂದು ಹೇಳಿದರು. ನಮ್ಮ ದೇಶದಲ್ಲಿರುವ ಸುಮಾರು 20 ಲಕ್ಷ ರೈತರಿಗೆ ಆರು ಸಾವಿರ ಕೊಟ್ಟಿವೆಂದು ಹೇಳುವುದು ಎಷ್ಟು ಹೆಮ್ಮೆಯ ವಿಷಯವೆಂಬುದನ್ನು ಯೋಚನೆ ಮಾಡಬೇಕು. ವರ್ಷಕ್ಕೆ ಎಷ್ಟಾಯಿತು, ಅದಕ್ಕೆ ಎಷ್ಟು ಖರ್ಚು ಎಂಬುದನ್ನು ನೋಡಬೇಕು. ಇದರ ಜೊತೆಗೆ 5 ವರ್ಷಗಳಲ್ಲಿ ಎಷ್ಟು ಆಸ್ತಿ ಮಾಡಲಾಗಿದೆ. ಸಾಲವೆಷ್ಟು ಎಂಬುದನ್ನೂ ಸಹ ಹೇಳಿದ್ದರೆ ಒಪ್ಪಬಹುದಾಗಿತ್ತು. ಹಿಂದಿನ ಕಾಲದ ತುಂಗಾ, ಭದ್ರಾ ಮೊದಲಾದ ಪ್ರಾಜೆಕ್ಟುಗಳ ವಿಷಯವನ್ನೆಲ್ಲಾ ಹೇಳುತ್ತಾರೆ, ಇದಕ್ಕೆ ಹಿಂದೆ ಬೇಜವಾಬ್ದಾರಿ ಸರ್ಕಾರ ಮಂಜೂರು ಮಾಡಿರುವುದನ್ನು ಹೇಳುವುದನ್ನು ನೋಡಿದರೆ ಸರ್ಕಾರದಲ್ಲಿ ದಕ್ಷತೆ, ಪ್ರಾಮಾಣಿಕತೆ ಇದೆಯೆ ಎಂಬ ಸಂದೇಹ ಬರುತ್ತದೆ. ಅದು ಪ್ರತಿಗಾಮಿ ಸರ್ಕಾರವಾದರೂ ಒಂದು ಯೋಜನೆ ಹಾಕಿದರೆ ಅದಕ್ಕೆ ತಕ್ಕಷ್ಟು ಹಣ ಮೀಸಲಾಗಿಡುತ್ತಿತ್ತು. ಹಿಂದೆ 24 ಕೋಟಿ ಮತ್ತು 12 ಕೋಟಿ, ಒಟ್ಟು 36 ಕೋಟಿ ರೂಪಾಯಿಗಳ ರಿಸರ್ವ್ ಫಂಡ್ ಇತ್ತು. ಆಗ ಯಾವ ಯಾವ ಕೆಲಸಗಳನ್ನು ಕೈಕೊಂಡಿದ್ದರೋ ಅದಕ್ಕೆ ಹಣ ಮುಡುಪಾಗಿತ್ತು. ಈಗ ಅಷ್ಟು ಹಣವೂ ಖರ್ಚಾಗಿ ವರ್ಷಕ್ಕೆ ಮೂರು ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಕೊಟ್ಟರೆ ಮುಂದುವರಿಯಬೇಕು, ಇಲ್ಲದಿದ್ದರೆ ಇಲ್ಲ, ಈ ಅವಸ್ಥೆಯಿದೆ. ಒಂದು ವರ್ಷ ಕೇಂದ್ರದವರು ಆ ಹಣ ಕೊಡದಿದ್ದರೆ ನಮ್ಮ ಸರ್ಕಾರದವರ ಅವಸ್ಥೆಯೇನಾಗುತ್ತದೆಂಬುದನ್ನು ಯೋಚನೆಮಾಡಬೇಕು. ಈ ರೀತಿ ನಮ್ಮ ಆಸ್ತಿ ಪಾಸ್ತಿಯನ್ನು ನೋಡಿದರೆ ಮನಸ್ಸಿಗೆ ಬಹಳ ಜುಗುಪ್ಸೆಯಾಗುತ್ತದೆ. ಯಾವ ಕೆಲಸ ಮಾಡಬೇಕಾದರೂ ತಮ್ಮ ಕಾಲಮೇಲೆ ತಾವು ನಿಂತು ಮಾಡುವ ಹಾಗಿಲ್ಲ. ಕೆಲಸಗಳನ್ನು ಕಾರ್ಯಗತ ಮಾಡದಿರುವುದಕ್ಕೆ ಹಣದ ಅಭಾವವೇ ಕಾರಣ. ಇದೂ ಅಲ್ಲದೆ ಕಂದಾಯ ಕಾಣಿಕೆ ಎಷ್ಟು ಮಟ್ಟಿಗೆ ಹೆಚ್ಚಾಗಿದೆಯೆಂಬುದನ್ನು ಕೂಡ ಈ ಸರ್ಕಾರ ಬಂದಮೇಲೆ ನಾವು ನೋಡಿದ ಪಕ್ಷದಲ್ಲಿ ಇಪ್ಪತ್ತಾರು ಸಾರಿ ಕರಗಳ ಮಸೂದೆಗಳನ್ನು ನಾವು ಅಂಗೀಕಾರ ಮಾಡಿದ್ದೇವೆ. ಕೇಂದ್ರ ಸರ್ಕಾರಕ್ಕೆ ಹೋಗುವ ತೆರಿಗೆ ನೋಡಿದರೆ ವರ್ಷಕ್ಕೆ ಹತ್ತು ಕೋಟಿ ರೂಪಾಯಿಗಳ ಮೇಲ್ಪಟ್ಟು ನಮ್ಮ ದೇಶದಿಂದ ಹೋಗುತ್ತಿದೆ. ಸೆಂಟ್ರಲ್ ಎಕ್ಸೈಜ್ ನಿಂದ, ಹಿಂದಿನ ಮೈಸೂರನ್ನು ತೆಗೆದು ಕೊಂಡರೆ, 25 ಲಕ್ಷ ರೂಪಾಯಿಗಳು ಬರುತ್ತಿದ್ದುವು. ಈಗ 5 ಕೋಟಿ ರೂಪಾಯಿಗಳು ವಸೂಲಾಗುತ್ತಿವೆ; ಆದಾಯ ತೆರಿಗೆಯೂ ಕೂಡ ಇದೇರೀತಿ ಹೋಗುತ್ತಿದೆ. ಈ ರೀತಿ ಹೋಗುವ ಹಣದ ಜೊತೆಗೆ ರೈಲ್ವೆಯಿಂದ ಹೋಗುತ್ತಿದ್ದ ಒಂದು ಕೋಟಿ ರೂಪಾಯಿಗಳು 2½ ಕೋಟಿ ರೂಪಾಯಿಗಳವರೆಗೆ ಹೆಚ್ಚಿವೆ. ಹೀಗೆ ಲಾಭದಾಯಕವಾದ ಇಲಾಖೆಗಳನ್ನೆಲ್ಲಾ ಕೇಂದ್ರಕ್ಕೆ ಬಿಟ್ಟಿದ್ದೇವೆ. ಈಗ ಅವರು ಕೊಡುವ ಎಂಜಲು ಕಾಸುಗಳ ಮೇಲೆ ನಾವು ಆಡಳಿತ ನಡೆಸಬೇಕಾಗಿದೆ. ಈಗ ಬರತಕ್ಕ ನಮ್ಮ ಆದಾಯ ಕೊಡತಕ್ಕ ಸಂಬಳಕ್ಕೆ ಸಾಕಾಗುತ್ತದೆಯೋ ಇಲ್ಲವೋ ಎಂಬ ಅನುಮಾನ ಬರುತ್ತಿದೆ. ಮುಂದೆ ಹೊಸ ತೆರಿಗೆ ಹಾಕುವುದಕ್ಕೆ ಕಾದುಕೊಂಡಿದ್ದಾರೆ. ಕಾಂಗ್ರೆಸ್ಸಿಗೆ ಬಹುಮತವಿದೆಯೆಂದು ಹೀಗೆಲ್ಲಾ ಮಾಡುತ್ತಿದ್ದಾರೆ. ಇನ್ನೂ ಐದು ವರ್ಷಗಳ ಕಾಲ ಹೀಗೆಯೇ ನಡೆಯುತ್ತದೆ.

ಆಹಾರ ಪರಿಸ್ಥಿತಿಯ ವಿಚಾರ ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಹೇಳಿದ್ದಾರೆ; ನಾನು ಹೇಳಲು ಕಾಲಾವಕಾಶವಿಲ್ಲ. ಕಾಗದದಲ್ಲೇ ಎಲ್ಲವನ್ನೂ ತೋರಿಸಿ ಪ್ರಗತಿಯಾಗಿದೆಯೆಂದು ಹೇಳುತ್ತಿದ್ದಾರೆಯೇ ವಿನಾ ಎಳ್ಳಷ್ಟೂ ಅದರಲ್ಲಿ ವಾಸ್ತವಾಂಶವಿಲ್ಲ. ಜನರಸ್ಥಿತಿ, ಮಟ್ಟ ದಿನ ದಿನಕ್ಕೆ ಇಳಿಯುತ್ತಾ ಹೋಗುತ್ತಿರುವುದು ವಿಷಾದಕರ. ಅಂಕಿ ಅಂಶವನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಆಗ ಹೇಳುವುದನ್ನು ಒಪ್ಪಬಹುದಾಗಿತ್ತು. ನಮ್ಮ ದೇಶದಸ್ಥಿತಿಯನ್ನು ಹತ್ತು ವರ್ಷಗಳ ಹಿಂದೆ ಇದ್ದುದಕ್ಕೂ ಈ ವರ್ಷ ಇರುವುದಕ್ಕೂ ಹೋಲಿಕೆ

ಮಾಡಿದರೆ ನಾವು ಅಧೋಗತಿಗೆ ಇಳಿಯುತ್ತಿದ್ದೇವೆ. ಇದನ್ನು ಎಚ್ಚರಿಕೆ ರೂಪವಾಗಿ ಹೇಳುತ್ತಿದ್ದೇನೆ. ಮುಂದಾದರೂ ಮಾನ್ಯಸಭೆ ಸರ್ಕಾರದ ಆಡಳಿತದ ಮೇಲೆ ಸರಿಯಾದ ಹತೋಟಿಯನ್ನಿಟ್ಟುಕೊಂಡು ಆದಾಯ ಮತ್ತು ವೆಚ್ಚವನ್ನು ಸರಿಪಡಿಸಿ ಕಂದಾಯದ ಹೊರೆಯನ್ನು ತಪ್ಪಿಸುವುದಕ್ಕೆ ದಾರಿ ಮಾಡಲೆಂದು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಂಡು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಚ್. ಎಸ್. ರುದ್ರಪ್ಪ (ವ್ಯವಸಾಯ ಶಾಖೆಯ ಮಂತ್ರಿಗಳು).- —ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ಇಲ್ಲಿಯವರೆಗೆ ಚರ್ಚೆ ನಡೆದಿದೆ. ಈಗ ಸರ್ಕಾರದವರು ಐದು ವರ್ಷಗಳಲ್ಲಿ ಸಾಧಿಸಿರತಕ್ಕ ಕೆಲಸಕಾರ್ಯಗಳ ತಃಖ್ತೆಯನ್ನು ಸೂಕ್ಷ್ಮವಾಗಿ ಸಭೆಯ ಮುಂದೆ ಇಟ್ಟಿದ್ದಾರೆ. ಆದರೂ ನಮ್ಮ ಸ್ನೇಹಿತರನೇಕರು ಇದನ್ನು ಈಗಲೂ ಸಹ ಕಟುವಾಗಿ ಟೀಕಿಸಿದ್ದಾರೆ. ಆದರೆ ಅವರು ಈ ಐದು ವರ್ಷಕಾಲ ಎಷ್ಟೇ ತೀವ್ರ ಭಿನ್ನಾಭಿಪ್ರಾಯವಿದ್ದರೂ ಅನೇಕ ಸಂದರ್ಭಗಳಲ್ಲಿ ಸರ್ಕಾರದೊಂದಿಗೆ ಸಹಕರಿಸಿ ನಮಗೆ ಸಹಾಯ ಮಾಡಿದ್ದಾರೆ, ನಮ್ಮ ಕೆಲಸವನ್ನು ಸಾಧಿಸುವುದಕ್ಕೆ ಬಹಳ ಸಹಾಯ ಮಾಡಿದ್ದಾರೆ. ಆದುದರಿಂದ ನಾನು ಸರ್ಕಾರದ ಪರವಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ ಒಂದು ವಿಷಯವನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಅವರ ಮುಂದೆ ಇಡತಕ್ಕದ್ದು ಬಹಳ ಸೂಕ್ತವಾಗಿದೆ. ಸರ್ಕಾರದವರು ಸಾಧಿಸಿರತಕ್ಕ ಅಭಿವೃದ್ಧಿಕಾರ್ಯಗಳ ವಿಷಯವನ್ನು ಮತ್ತು ವಾಸ್ತವಾಂಶವನ್ನು ಈ ಕೊನೆಯ ಕಾಲದಲ್ಲೂ ಅವರು ಸಭೆಯ ಮುಂದೆ, ಅನಂತರ ಜನರ ಮುಂದೆ ವ್ಯಕ್ತಪಡಿಸುವುದಕ್ಕೆ ಒಪ್ಪುವುದಿಲ್ಲ. ಇದು ದೇಶದ ದುರದೃಷ್ಟ. ಪ್ರಜಾ ಪ್ರಭುತ್ವ ಸರಿಯಾಗಿ ನಡೆಯಬೇಕಾದರೆ ಸರ್ಕಾರ ನಡೆಸುವ ಪಕ್ಷದವರೂ ಮತ್ತು ಎದುರು ಪಕ್ಷದವರೂ ಸಹ ವಾಸ್ತವಾಂಶವನ್ನು ದೇಶದ ಮುಂದಿಡುವುದು ಬಹಳ ಸೂಕ್ತವಾದುದು. ಇದರಲ್ಲಿ ಒಂದು ವಿಷಯವನ್ನು ಮಾತ್ರ ಮುಚ್ಚು ಮರೆಯಿಲ್ಲದೆ ಹೇಳಬೇಕಾಗಿದೆ. ಸರ್ಕಾರದವರು ಯಾವ ಕೆಲಸವನ್ನು ಮಾಡಿದರೂ ಬಹುಶಃ ಮುಚ್ಚುಮರೆಯಿಂದ ಮಾಡಿರುವುದಿಲ್ಲ. ಪ್ರತಿ ವರ್ಷವೂ ಸರ್ಕಾರದವರು ಆದಾಯ ತಃಖ್ತೆಯನ್ನು ಈ ಸಭೆಯ ಮುಂದಿಟ್ಟು ಆ ಮೂಲಕ ದೇಶದ ಮುಖಂಡರ, ಅಂದರೆ, ಈ ಸಭೆಯ ಅಂಗೀಕಾರವನ್ನು ಪಡೆದು ಕೆಲಸವನ್ನು ಮುಂದುವರಿಸಿದ್ದಾರೆ. ಆ ಮೂಲಕ ಐದು ವರ್ಷಗಳ ಅವಧಿಯಲ್ಲಿ ಯಾವ ಯಾವ ಕೆಲಸಗಳನ್ನು ಸಾಧಿಸಿದ್ದೇವೋ ಅದನ್ನು ಆದಾಯ ವ್ಯಯ ತಃಖ್ತೆಯಲ್ಲಿ ನಮೂದಿಸಿ ಸಭೆಯ ಮುಂದಿಟ್ಟು ವಿಷಯಗಳನ್ನು ಅನೇಕ ಸಂದರ್ಭಗಳಲ್ಲಿ ತಿಳಿಸಿ ಚರ್ಚೆ ಮಾಡಲು ಅವಕಾಶ ಕೊಟ್ಟು ಒಪ್ಪಿಗೆ ಪಡೆದಿದ್ದೇವೆ. ವಿರೋಧ ಪಕ್ಷದವರೂ ಒಪ್ಪಿಕೊಂಡಿದ್ದಾರೆ. ಪ್ರಜಾ ಪ್ರಭುತ್ವ ತತ್ವಕ್ಕನುಸಾರವಾಗಿ ಕಾಂಗ್ರೆಸ್ ಸರ್ಕಾರದವರು ವಿರೋಧ ಪಕ್ಷದವರ ಸಹಾಯವನ್ನು ಅನೇಕ ಸಾರಿ ಬೇಡಿದ್ದಾರೆ; ಅನೇಕ ಸಾರಿ ಅವರ ಸಹಕಾರ, ಸಹಾಯಬೇಕೆಂದು ನಾವು ಅವರೊಡನೆ ಸಹಕರಿಸಿ ಅವರ ಸಲಹೆಯನ್ನು ತೆಗೆದುಕೊಂಡುದೂ ಅಲ್ಲದೆ ನಮ್ಮ ಅಭಿಪ್ರಾಯವನ್ನೂ ಸಹ ಸ್ವಲ್ಪಮಟ್ಟಿಗೆ ಅವರೊಡನೆ ಸರಿತೂಗಿಸುವುದಕ್ಕೆ ಪ್ರಯತ್ನಪಟ್ಟಿದ್ದೇವೆ. ಆದ್ದರಿಂದ ಅವರು ಯಾವ ಸಂದರ್ಭದಲ್ಲೂ ಸರ್ಕಾರದವರು ಏಕಪಕ್ಷೀಯವಾಗಿ ಆಡಳಿತ ನಡೆಸಿದ್ದಾರೆಂದು ಹೇಳುವುದಕ್ಕೆ ಯಾವ ಕಾರಣವೂ ಇಲ್ಲ, ಅಂಕಿ ಅಂಶಗಳ ಮೂಲಕವೂ ಅವರು ಈ ಬಗ್ಗೆ ಭಿನ್ನಾಭಿಪ್ರಾಯವನ್ನು ದೇಶದ ಮುಂದೆ ಇಡಲು ಅವಕಾಶವಿಲ್ಲ.

ಮುಖ್ಯವಾಗಿ ವಿರೋಧ ಪಕ್ಷದವರು ಅನೇಕ ವಿಷಯಗಳನ್ನು ಹೇಳಿದರು. ಈ ಸರ್ಕಾರದವರು ಸಮತಾವಾದವನ್ನು ಸಾಧಿಸುವುದಕ್ಕೆ ಪ್ರಯತ್ನ ಪಟ್ಟಿಲ್ಲವೆಂದು ಹೇಳಿದರು. ದೇಶದಲ್ಲಿ ಸಮತಾವಾದವನ್ನು ಜಾರಿಗೆ ತರುವುದು ಎಷ್ಟು ಕಷ್ಟ ಸಾಧ್ಯವೆಂಬುದು ಅವರಿಗೆ ಗೊತ್ತಿರಬಹುದು. ಪ್ರಜಾಭಿಪ್ರಾಯವನ್ನು ಕ್ರೋಡೀಕರಿಸಿ ಅದನ್ನು ಕಾರ್ಯರೂಪಕ್ಕೆ ತರುವುದು ಪ್ರಜಾಪ್ರಭುತ್ವದ ಜವಾಬ್ದಾರಿ; ಅದನ್ನು ಸಾಧಿಸುವುದು ಬಹಳ ಕಷ್ಟವಾದುದು. ಈ ಸಾಧನೆಯಲ್ಲಿ ಅನೇಕ ಎಡರು ತೊಡರುಗಳು ಬಂದುವು. ಅವುಗಳನ್ನು ನಾವು ಎದುರಿಸಿದ್ದೇವೆ.

ಈ ಗೇಣಿ ಕಾನೂನಿನಲ್ಲಿ ಮಾರ್ಪಾಟು ಮಾಡುವದಕ್ಕೋಸ್ಕರ ಒಂದು ಮಸೂದೆಯನ್ನು ತಂದು ಹಾಗೆ ಮಾಡಿಕೊಳ್ಳಲು ಎದುರುಪಕ್ಷದವರಿಗೂ ಅಧಿಕಾರವಿದೆ, ಹಕ್ಕು ಇದೆ. ಹೀಗೆ ಇದ್ದರೂ ಯಾವುದೇ ಮಸೂದಾ ಕಾನೂನನ್ನೂ ಅವರು ತರಲಿಲ್ಲ. ನಾವು ಮಾಡುವ ಕಾರ್ಯವನ್ನು ಟೀಕಿಸುವದರಲ್ಲಿಯೇ ಸಮಾಧಾನವನ್ನು ಪಡೆಯುತ್ತಾರೆ. ಸಮಾಜ ಸುಧಾರಣೆಯಾಗಬೇಕೆಂಬ ಉದ್ದೇಶವಿದ್ದರೆ ಒಂದು ಮಸೂದೆಯನ್ನು ಈ ಸಭೆಯಲ್ಲಿ ತರಬೇಕಾಗಿತ್ತು. ಜನತೆಯ ಅಭಿಪ್ರಾಯದಂತೆ ನಾವು ಮಾರ್ಪಾಟುಗಳನ್ನು ಮಾಡುತ್ತಿದ್ದೇವೆ. ಇನ್ನೂ ಹೆಚ್ಚು ಮುಂದಕ್ಕೆ ಪ್ರಗತಿ ಪಥದಲ್ಲಿ ನಾವು ಹೋಗಬಹುದು. ಅಷ್ಟು ಮುಂದೆ ಸದ್ಯಕ್ಕೆ ನಾವು ಹೋಗದೆ ಇರುವುದಕ್ಕೆ ಅನೇಕ ಕಾರಣಗಳು ಇವೆ. ಕಾಂಗ್ರೆಸ್ ಪಕ್ಷದ ಉದ್ದೇಶ ಮತ್ತು ಧ್ಯೇಯ ಜನತೆಯ ಜೀವನ ಮಟ್ಟವನ್ನು ಸುಧಾರಿಸಬೇಕೆಂಬುದೇ ಆಗಿದೆ. ಆದಕಾರಣ ಸಮಾಜ ಸುಧಾರಣೆಯೇ ಆಗಲಿ, ಜಮೀನಿನ ಕಾನೂನುಗಳ ಸುಧಾರಣೆಯೇ ಆಗಲಿ, ಈ ವಿಚಾರಗಳಲ್ಲಿ ಸಾವಧಾನದಿಂದ ಮುಂದೆ ಸಾಗುತ್ತ ಎಲ್ಲ ಪ್ರಯತ್ನಗಳನ್ನೂ ಮಾಡಿ ಗುರಿಯನ್ನು ಮುಟ್ಟುತ್ತೇವೆಂದು ನಾನು ಹೇಳುತ್ತೇನೆ.

ಬೊಂಬಾಯಿ ಗೇಣಿ ಕಾನೂನನ್ನು ಸದ್ಯಕ್ಕೆ ಜಾರಿಯಲ್ಲಿ ತರದಂತೆ ಮಾಡಿ ಮುಂದೂಡುವಂತೆ ಮಾಡಿದ ಕಾನುನನ್ನು ತಂದಿರುವದನ್ನು ಬಹಳ ಕಟುವಾಗಿ ಟೀಕೆ ಮಾಡಿ ವಿರೋಧ ಪಕ್ಷದಲ್ಲಿಯ ಸದಸ್ಯರು ಮಾತನಾಡಿದರು. ಹೀಗೆ ಯಾವ ಕಾರಣದ ಮೂಲಕ ಮಾಡಲಾಗಿದೆ ಎಂಬುದು ಅವರಿಗೆ ಗೊತ್ತಿದೆ. ವಿಶಾಲ ಮೈಸೂರು ರಾಜ್ಯವಾದ ಮೇಲೆ ಒಂದೊಂದು ರಾಜ್ಯದಿಂದ ಬಂದಿರುವ ಪ್ರತಿಯೊಂದು ಭಾಗದಲ್ಲೂ ಒಂದೊಂದು ತರಹದ ಬೇರೆಬೇರೆ ಕಾನೂನು ಅಲ್ಲಿ ಜಾರಿಯಲ್ಲಿ ಇದೆ. ಬೇರೆಬೇರೆ ಭಾಗದಲ್ಲಿ ಬೇರೆಬೇರೆ ಪರಿಣಾಮ ಜನತೆಯ ಮೇಲೆ ಉಂಟಾಗುತ್ತದೆ. ಈಗ ಅನೇಕ ಭಾಗಗಳು ಸೇರಿ ಒಂದು ವಿಶಾಲ ಮೈಸೂರು ರಾಜ್ಯ ರಚಿತವಾದನಂತರ ಎಲ್ಲ ಕಡೆಯಲ್ಲಿಯೂ ಒಂದೇ ರೀತಿಯಾಗಿ ಇರತಕ್ಕಂಥ ಕಾನೂನನ್ನು ಜಾರಿಯಲ್ಲಿ ತರುವದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಹೊಸ ಕಾನೂನು ಬಂದು ಎಲ್ಲ ಭಾಗಗಳಲ್ಲಿಯೂ ಒಂದೇ ರೀತಿಯಾಗಿ ಅನ್ವಯಿಸುವಂತೆ ಮಾಡುವವರೆಗೆ ಸದ್ಯಕ್ಕಿರುವದನ್ನು ಮುಂದೂಡುವಂತೆ ಮಾಡಲಾಗಿದೆಯೇ ಹೊರತು ರೈತರ ಹಕ್ಕನ್ನು ಮೊಟಕು ಮಾಡುವ ಉದ್ದೇಶದ ಸಲುವಾಗಿ ಅಲ್ಲ. ರೈತರಿಗೆ ಯಾವ ಕಾಲಕ್ಕೂ ವಂಚನೆಯನ್ನು ನಾವು ಮಾಡಲಾರೆವು. ಕಾಂಗ್ರೆಸ್ಸು ದೇಶದಲ್ಲಿ ತನ್ನ ಪ್ರಭುತ್ವವನ್ನು ಉಳಿಸಿಕೊಳ್ಳಬೇಕಾದರೆ ರೈತರ ಪರಿಸ್ಥಿತಿಯು ಉತ್ತಮಗೊಳ್ಳುವ ಸುಧಾ

(ಶ್ರೀ ಎಚ್. ಎಸ್. ರುದ್ರಪ್ಪ).

ರಣೆಗಳನ್ನು ಮಾಡಲು ಪ್ರಯತ್ನ ಮಾಡುವುದು. ನಮ್ಮ ರಾಜ್ಯದಲ್ಲಿಯ ಐದು ಭಾಗಗಳಲ್ಲಿ ಐದು ವಿಧವಾದ ಗೇಣಿ ಕಾನೂನು ಜಾರಿಯಲ್ಲಿ ಇರುವದು ಸೂಕ್ತವೇ ಎಂಬುದನ್ನು ಯೋಚನೆ ಮಾಡಬೇಕು. ಬೊಂಬಾಯಿ ಗೇಣಿ ಕಾನೂನನ್ನು ವಿಮರ್ಶೆ ಮಾಡಿ ನೋಡಬೇಕು. ಈ ವಿಷಯದ ಬಗ್ಗೆ ಒಂದು ಕಮಿಟಿಯನ್ನು ನೇಮಕ ಮಾಡಿ ಈ ಕಮಿಟಿಯು ಯಾವ ರೀತಿಯಾಗಿ ಅಭಿಪ್ರಾಯವನ್ನು ಕೊಡುವುದೋ ಅದೇ ಪ್ರಕಾರವಾಗಿ ಒಂದು ಕಾನೂನನ್ನು ಜಾರಿಯಲ್ಲಿ ತರುವದು ಸೂಕ್ತ ವಿಚಾರ. ಹೆಚ್ಚಿನ ಕಾಲಾವಕಾಶವಿಲ್ಲದೆ ಇರುವದರಿಂದ ಈ ರೀತಿಯಾಗಿ ಮಾಡಬೇಕಾಯಿತು. ಈಗ ತಾನೆ ಚುನಾವಣೆಗಳು ನಡೆದು ಮುಗಿದಿವೆ. ಚುನಾವಣಾ ಭಾಷಣ ಮಾಡುವ ಆವಶ್ಯಕತೆಯು ಇಲ್ಲ. ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬಂದ ಮೇಲೆ ಇಲ್ಲಿಯವರೆಗೆ ಯಾವ ಯಾವ ಮಹಾ ಕಾರ್ಯಗಳನ್ನು ಸಾಧಿಸಿದ್ದಾರೆ, ಇನ್ನು ಮುಂದೆ ಯಾವ ಯಾವುದನ್ನು ಸಾಧಿಸಬೇಕೆಂದು ಗುರಿಯನ್ನು ಇಟ್ಟುಕೊಂಡಿದ್ದಾರೆ, ಇದನ್ನು ನೋಡಬೇಕು. ರಸ್ತೆಗಳ ಸುಧಾರಣೆ, ಶಾಲೆಗಳ ಸ್ಥಾಪನೆ ಮಾಡುವದು ಅವಶ್ಯವಾಗಿದೆ. ಆದರೆ ಮಳೆ ಆಗುವಂತೆ ಮಾಡುವದು ಅಥವಾ ಹೆಚ್ಚಾಗಿ ಆಗದಂತೆ ತಡೆಗಟ್ಟುವದು ನಮಗೆ ಸಾಧ್ಯವಿಲ್ಲ. ಮಳೆ ಹೆಚ್ಚಾಗಿ ಏನಾದರೂ ಹಾನಿಯಾದರೆ ಅದನ್ನು ಸರಿಪಡಿಸುವದು ನಮ್ಮ ಕರ್ತವ್ಯ ಎಂದು ನಾನು ಹೇಳಬಲ್ಲೆನು.

ಇನ್ನು ಒಂದು ಪ್ರಾಮುಖ್ಯವಾದ ವಿಷಯ ಎಂದರೆ ಆಹಾರ. ಇದು ನನಗೆ ಸಂಬಂಧಪಟ್ಟದ್ದಾಗಿರುವದರಿಂದ ಇದರ ಬಗ್ಗೆ ಹೇಳುವದು ಸೂಕ್ತವಾಗಿದೆ. ಆಹಾರದ ವಿಷಯದ ಬಗ್ಗೆ ತಪ್ಪು ಲೆಖ್ಖ ಕೊಟ್ಟಿದ್ದೇವೆ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ತಪ್ಪು ಲೆಖ್ಖ ಕೊಟ್ಟಿಲ್ಲ, ಆದರೆ ಅವರು ತಪ್ಪು ಭಾವನೆ ಮಾಡಿಕೊಂಡಿದ್ದಾರೆ. ಈಗ ನಾನು ವಾಸ್ತವಾಂಶಗಳನ್ನು ತಮ್ಮೆಲ್ಲರಿಗೆ ಹೇಳುತ್ತೇನೆ. ಐದು ವರ್ಷಗಳ ಹಿಂದಿನ ಸ್ಥಿತಿಯು ಯಾವ ರೀತಿಯಾಗಿತ್ತು, ಇಂದಿನ ಸ್ಥಿತಿಯು ಯಾವ ರೀತಿಯಾಗಿದೆ ಎಂಬುದನ್ನು ತೂಲನ ಮಾಡಿ ನೋಡಿದರೆ ವಾಸ್ತವಾಂಶವು ಏನು ಇದೆ ಎಂಬುದು ಗೊತ್ತಾಗುತ್ತದೆ. ಕಳೆದ ಐದು ವರ್ಷಗಳಲ್ಲಿ ನೀರಾವರಿಯಾದ ಭೂಮಿಯು ಎಷ್ಟು ಎಂಬುದನ್ನು ನೋಡಬೇಕು.

ಶ್ರೀ ಎಸ್. ಗೋಪಾಲಗೌಡ.—ಪರದೇಶದಿಂದ ಆಮದು ಮಾಡಿ ತರಿಸಿದ ಧಾನ್ಯ ಎಷ್ಟು ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಈ ಐದು ವರುಷಗಳ ಅವಧಿಯಲ್ಲಿ ಎಷ್ಟು ಖರ್ಚಾಗಿದೆ, ಎಷ್ಟು ತರಿ ಜಮೀನು ನೀರಾವರಿಯಾಗಿದೆ ಎಂಬುದನ್ನು ನೋಡುವದು ಮಹತ್ವದ್ದಾಗಿದೆ. ಕೆರೆಗಳನ್ನು ದುರಸ್ತಿ ಮಾಡಿದೆ. ಜಲಾಶಯಗಳನ್ನು ಕಟ್ಟಿ ಸುಮಾರು ಎರಡು ಲಕ್ಷ ಎಕರೆ ಭೂಮಿಗೆ ನೀರಾವರಿ ಸಾಗುವಳಿಗೆ ಅನುಕೂಲ ಮಾಡಿದೆ. ಮೊದಲು ಹೆಸರಿಗೆ ಮಾತ್ರ ಕೆರೆಗಳು ಇದ್ದವು. ಇಂತಹ ಕೆರೆಗಳನ್ನು ದುರಸ್ತು ಮಾಡಲಾಗಿದೆ. ಈ ವಿಷಯವು ಶ್ರೀ ಗೋಪಾಲ ಗೌಡರಿಗೆ ಗೊತ್ತಿರಲಿಕ್ಕೆ ಸಾಕು. ಆದುದರಿಂದ ಅವರು ವರದಿಯನ್ನು ತರಿಸಿ ಬೇಕಾದರೆ ನೋಡಲಿ. ಏನು ಕೆಲಸ ಮಾಡಲಾಗಿದೆ ಎಂಬುದನ್ನು ತನಿಖೆ ಮಾಡಿ ನೋಡುವುದಿಲ್ಲ. ಅಸೆಂಬ್ಲಿಯಲ್ಲಿ ಭಾಷಣ ಮಾಡಿ ಟೀಕಿಸಿದರೆ ಅದು ಪೇಪರುಗಳಲ್ಲಿ ಬರುತ್ತದೆ ಎಂದು ಸಂತೋಷಪಡುತ್ತಾರೆ. ಮೈಸೂರು ರಾಜ್ಯದಲ್ಲಿಯ ಕಮ್ಯೂನಿಟಿ ಪ್ರೊಜೆಕ್ಟಿನಲ್ಲಿ ಎಷ್ಟು ಲಕ್ಷ ರೂಪಾಯಿ ಜನತೆಯ ಸುಧಾರಣೆಗಾಗಿ ಖರ್ಚು ಮಾಡಲಾಗಿದೆ ಎಂಬ ಅಂಕಿ ಅಂಶಗಳನ್ನು ನೋಡಿದರೆ ಎಲ್ಲವೂ ತಿಳಿಯುವುದು. ಎರಡು ಲಕ್ಷ ಎಕರೆ ತರಿ ಭೂಮಿಯು ನೀರಾವರಿ ಆದದ್ದು ನಿಜವೋ ಅಲ್ಲವೋ ಎಂಬುದನ್ನು ಅವರೇ ನೋಡಬೇಕು. ನಾಲ್ಕು ಲಕ್ಷ ಎಕರೆ ಖುಷ್ಕಿ ಜಮೀನು ಸಾಗುವಳಿಯಲ್ಲಿ ಬಂದಿದೆ ಹೊಸದಾಗಿ ಒಂದು ಲಕ್ಷ ಎಕರೆ ತರಿ ಜಮೀನು ಮಾಡಲಾಗಿದೆ. ಗ್ರಾಮಗಳಲ್ಲಿಯ ವ್ಯವಸಾಯಕ್ಕೆ ಸಹ ಉತ್ತೇಜನ ಕೊಟ್ಟಿರುವದರಿಂದ ಎಷ್ಟು ಬದಲಾವಣೆಯು ಆಗಿದೆ ಎಂಬುದನ್ನು ಅವರೇ ಕಂಡುಕೊಳ್ಳಬಹುದು. ಹಳ್ಳಿಗಳಲ್ಲಿಯ ವ್ಯವಸಾಯಗಳಿಗೆ ಸಹಾಯವನ್ನು ಕೊಡುವುದಕ್ಕೆ ಕಾಂಗ್ರೆಸ್ಸು ಪ್ರಾಮುಖ್ಯತೆಯನ್ನು ಕೊಟ್ಟಿದೆ. ಇವೆಲ್ಲ ಕಾರಣಗಳ ಮೂಲಕ ಆಹಾರ ಧಾನ್ಯಗಳ ಬೆಳವಣಿಗೆಯು ನಮ್ಮ ದೇಶದಲ್ಲಿ ಹೆಚ್ಚಾಗಿದೆ.

5-30 P.M.

ವ್ಯವಸಾಯ ಜಾಸ್ತಿಯಾಗಿ ಅಭಿವೃದ್ಧಿಯಾಗುವ ರೀತಿಯಲ್ಲಿ ಮಾಡಿದ್ದಾರೆ. ಅದನ್ನು ತಾವು ನೋಡಬೇಕು. ಸರ್ಕಾರ ಹಿಂದಿನಿಂದಲೂ ಈ ವ್ಯವಸಾಯಕ್ಕೆ ಸಾಕಷ್ಟು ಉತ್ತೇಜನ ಕೊಟ್ಟಿರಲಿಲ್ಲ. ಆದ್ದರಿಂದ ದೇಶದಲ್ಲಿ ಸಾಕಾದಷ್ಟು ಆಹಾರ ಬೆಳೆಯಲಿಲ್ಲ. ಆದರೆ ಕಾಂಗ್ರೆಸ್ ಸರ್ಕಾರ ಬಂದಮೇಲೆ ಈ ವ್ಯವಸಾಯಕ್ಕೆ ಇನ್ನೂ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟು ವ್ಯವಸಾಯಗಾರರಿಗೆ ಹೆಚ್ಚಿನ ಉತ್ತೇಜನವನ್ನು ಕೊಟ್ಟಿದೆ. ಈ ದೇಶದಲ್ಲಿ ವ್ಯವಸಾಯ ಒಂದು ಮುಖ್ಯ ಕಸಬಾಗಿದೆ. ಅದಕ್ಕಾಗಿ ದೇಶದಲ್ಲಿ ಈ ಕಸಬಿಗೆ ಹೆಚ್ಚಿನ ಉತ್ತೇಜನ ಕೊಡಲಾಗಿದೆ. ಇದನ್ನು ತಾವೂ ಕೇಳಿದ್ದೀರಿ. ಹಿಂದೆ ಎಷ್ಟೆಷ್ಟು ಹೆಚ್ಚಾಗಿ ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದರು ಎಂಬ ವಿಷಯದ ಬಗ್ಗೆ ನನ್ನ ಸ್ನೇಹಿತರು ಸರಿಯಾಗಿ ಯೋಚನೆ ಮಾಡಿ ನೋಡಬೇಕು. ಹಿಂದಿನ ಕಾಲ ಹೇಗಿತ್ತು, ಈಗ ಕಾಲ ಹೇಗೆ ಬದಲಾಯಿಸಿದೆ ಇವೆರಡನ್ನೂ ಸರಿಯಾಗಿ ನೋಡಿ ಜವಾಬು ಕೊಡಬೇಕು. ಆದರೆ ಈಗಿರತಕ್ಕ ಆಹಾರ ಪದಾರ್ಥಗಳ ಧಾರಣೆ ಕಡಮೆ ಆಗಬೇಕೆ ಅಥವ ಇದೇ ರೀತಿ ಇರಬೇಕೆ ಎಂಬುದನ್ನು ನಾವು ಈಗ ಯೋಚನೆಮಾಡಬೇಕಾಗಿದೆ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಈಗ ಐದು ವರ್ಷಗಳಲ್ಲಿ ಹೊರ ದೇಶಗಳಿಂದ ಎಷ್ಟು ಆಹಾರ ಪದಾರ್ಥಗಳು ಬಂದಿವೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಹೆಚ್. ಎಸ್. ರುದ್ರಪ್ಪ.—ಅದನ್ನೂ ಹೇಳುತ್ತೇನೆ. ತಾವು ಮರೆತುಬಿಟ್ಟಿದ್ದೀರಿ. ನಮ್ಮ ದೇಶಕ್ಕೆ ಪ್ರತಿವರ್ಷವೂ ಎಂದರೆ, ಕಾಂಗ್ರೆಸ್ ಸರ್ಕಾರ ಬರುವುದಕ್ಕಿಂತ ಮೊದಲೂ ಮತ್ತು ಈಚೆಗೂ, ಸುಮಾರು ನೂರರಿಂದ ನೂರೈವತ್ತು ಕೋಟಿ ರೂಪಾಯಿಗಳ ಆಹಾರ ಪದಾರ್ಥಗಳನ್ನು ಹೊರಗಿನಿಂದ ತರಿಸುತ್ತಿದ್ದೆವು. ನೂರು ಕೋಟಿಗಿಂತ ಕಡಮೆ ಯಾವ ವರ್ಷವೂ ತರಿಸಿಲ್ಲ. ಆಗಿನ ಪರಿಸ್ಥಿತಿ ಹಾಗಿತ್ತು. ನಮ್ಮ ಇಂಡಿಯಾ ದೇಶದಲ್ಲಿ ಸುಮಾರು ನೂರು ಕೋಟಿಯಿಂದ ನೂರೈವತ್ತು ಕೋಟಿ ರೂಪಾಯಿಗಳ ಬೆಲೆಯ ಆಹಾರಧಾನ್ಯಗಳನ್ನು ಕಳೆದ ನೂರಾರು ವರ್ಷಗಳಿಂದ ತರಿಸಬೇಕಾಯಿತು. ಏಕೆಂದರೆ ಆಗ ಆಹಾರದ ಅಭಾವದಿಂದ ತೊಂದರೆಯಾಗಿತ್ತು. ತಾವು ಈಗ ಕೇಳತಕ್ಕ ಅಂಶ ನನಗೂ ಗೊತ್ತು. ಎಂದರೆ, ಈಗ ಎರಡು ವರ್ಷಗಳಿಂದೀಚೆಗೆ ಆಹಾರದ ಅಭಾವ ಕಾಣುತ್ತಿಲ್ಲ. ಅನೇಕ ಕಡೆ ಹೇರಳವಾಗಿ ಆಹಾರ

ಧಾನ್ಯಗಳ ಬೆಳೆಯಾಗಿದೆ; ಮತ್ತು ದೇಶದಲ್ಲಿ ಕಂಟ್ರೋಲ್ ತೆಗೆದಮೇಲೆ ಆಹಾರಪದಾರ್ಥಗಳ ಅಭಾವ ಕಡಿಮೆಯಾಗಿದೆ. ಈಗ ಎರಡು ವರ್ಷಗಳಿಂದೀಚೆಗೆ ಹೆಚ್ಚಿಗೆ ಆಹಾರ ಪದಾರ್ಥಗಳನ್ನೇನನ್ನೂ ತರಿಸಿಲ್ಲ. ಈಗ 1955-56ನೇ ಸಾಲಿನಲ್ಲಿ ದೇಶದಲ್ಲಿ ಆಹಾರಧಾನ್ಯಗಳು ಹೆಚ್ಚಾಗಿ ಬೆಳೆದಿವೆ. ಆಹಾರ ಧಾನ್ಯಗಳು ಹೆಚ್ಚು ಬೆಳೆದರೂ ಆಹಾರಧಾನ್ಯಗಳ ಬೆಲೆ ಇಳಿಯಲಿಲ್ಲ. ಅದಕ್ಕಾಗಿ ಇಂಡಿಯಾ ಸರ್ಕಾರದವರು ಧಾರಣೆಯನ್ನು ಒಂದೇ ಸಮವಾಗಿರಿಸಲು ಪ್ರಯತ್ನ ಮಾಡುತ್ತಿದ್ದಾರೆ.

ತಾವು ಕೇಳಿರಬಹುದು, ಯಾವ ಸರ್ಕಾರವೂ ಈ ರೀತಿ ಮಾಡಿಲ್ಲ. ಬಹುಶಃ ಇಂಡಿಯಾ ದೇಶದ ಸುಮಾರು ನೂರು, ಇನ್ನೂರು ವರ್ಷಗಳ ಚರಿತ್ರೆಯನ್ನು ನೋಡಿದರೂ ಕೂಡ ನಾವು ಆಹಾರವನ್ನು ಹೊರಗಡೆಯಿಂದ ತರಿಸುತ್ತಿದ್ದೆವು. ಆದರೆ ಕಾಂಗ್ರೆಸ್ಸು ಪಕ್ಷದವರು ಆಡಳಿತಕ್ಕೆ ಬಂದಮೇಲೆ ಮಾಡಿದಂತಹ ಕೆಲಸ ಎಂದರೆ ನಮ್ಮ ದೇಶದಲ್ಲಿ ಹೆಚ್ಚಿಗೆ ಬೆಳೆ ಬೆಳೆಯಲು ಕ್ರಮಗಳನ್ನು ಕೈಗೊಂಡರು. 1953-54, ಮತ್ತು 1954-55ನೇ ಸಾಲುಗಳಲ್ಲಿ ಆಹಾರಧಾನ್ಯಗಳನ್ನು ಹೊರಗಿನಿಂದ ತರಿಸಿಲ್ಲ. ನಮ್ಮಲ್ಲಿ ಬಹುಭಾಗ ಎಂದರೆ, ನೂರಕ್ಕೆ ತೊಂಬತ್ತು ಭಾಗ, ಮಳೆ ನೀರಿನಿಂದ ಬೆಳೆಯುತಕ್ಕ ರೈತರಿದ್ದಾರೆ. ದುರದೃಷ್ಟವಶಾತ್ ಈ ವರ್ಷ ಮಳೆ ಕೆಲವುಕಡೆ ಜಾಸ್ತಿಯಾಗಿ ಬಂದುದರ ದೆಸೆಯಿಂದ ಮತ್ತೆ ಕೆಲವೆಡೆ ಅನಾವೃಷ್ಟಿಯ ದೆಸೆಯಿಂದ ಬಹುವಾಗಿ ಆಗುವ ಬೆಳೆಯಲ್ಲಿ ಹೆಚ್ಚುಕಡಿಮೆಯಾಗಿರಬಹುದು. ಆದ್ದರಿಂದ ನಾವು ನಿರೀಕ್ಷೆ ಮಾಡಿದಷ್ಟು ಆಹಾರಧಾನ್ಯಗಳ ಬೆಳೆಯಾಗಲಿಲ್ಲ. ಸ್ವಲ್ಪ ಕಡಿಮೆಯಾಗಿರಬಹುದು. ಇದನ್ನೆಲ್ಲ ತಾವು ಯೋಚನೆ ಮಾಡಬೇಕು. ದೇಶದಲ್ಲಿ ಬೆಳೆಯೇ ಆಗಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಅತಿವೃಷ್ಟಿಯಿಂದ ಕೆಲವೆಡೆ ಬೆಳೆ ಹಾಳಾಗಿರಬಹುದು. ಅನಾವೃಷ್ಟಿಯ ದೆಸೆಯಿಂದ ಕೆಲವೆಡೆ ಬೆಳೆಗಳು ಬಾರದಿರಬಹುದು. ಈ ದೃಷ್ಟಿಯಿಂದ ಇಂಡಿಯಾ ಸರ್ಕಾರದವರು ಆಹಾರ ಧಾನ್ಯಗಳನ್ನು ತರಿಸಲು ಯೋಚಿಸುತ್ತಿದ್ದಾರೆ. ನಮ್ಮ ದೇಶದಲ್ಲಿ ಆಹಾರದ ಬೆಳೆ ಸಮರ್ಪಕವಾಗಿದೆ. ಅತಿವೃಷ್ಟಿಯ ದೆಸೆಯಿಂದ ಸ್ವಲ್ಪ ಬೆಳೆ ಕಡಿಮೆ ಬಂದಿರಬಹುದು. ಆಹಾರ ಪದಾರ್ಥಗಳು ಕಡಿಮೆ ಬಂದಿರುವುದರಿಂದ ಈ ವರ್ಷ ಎಂಭತ್ತು ಕೋಟಿ ರೂಪಾಯಿಗಳಷ್ಟು ಆಹಾರ ಪದಾರ್ಥಗಳನ್ನು ತರಿಸಬೇಕಾಗುತ್ತದೆಂದು ಇಂಡಿಯಾ ಸರ್ಕಾರದವರು ಯೋಚಿಸುತ್ತಿದ್ದಾರೆ. ಆಹಾರಧಾನ್ಯಗಳ ಬೆಳೆಯನ್ನು ಹೆಚ್ಚಿಸಲು ಸರ್ಕಾರವು ಹೆಚ್ಚಾಗಿ ಸಹಾಯಮಾಡುತ್ತಿದ್ದರೂ ಈ ಸಲ ಮೊದಲೇ ಹೇಳಿದ ಕಾರಣಗಳಿಂದ ಆಹಾರದ ಬೆಳೆಯು ಸ್ವಲ್ಪ ಕಡಿಮೆಯಾಗಿದೆ. ಈ ವರ್ಷ ಕೆಲವು ಅನಿವಾರ್ಯಗಳ ದೆಸೆಯಿಂದ ಸ್ವಲ್ಪ ಆಹಾರ ಪದಾರ್ಥಗಳನ್ನು ತರಿಸಬೇಕಾಗಿದೆ.

ಶ್ರೀ ಯು. ಎಂ. ಮಾದಪ್ಪ.—ನಾವು ಕೇಳತಕ್ಕ ವಿಷಯ ಮೈಸೂರು ದೇಶಕ್ಕೆ ಸಂಬಂಧಪಟ್ಟಿದ್ದು ಇಂಡಿಯಾದೇಶಕ್ಕಲ್ಲ.

ಶ್ರೀ ಹೆಚ್. ಎಸ್. ರುದ್ರಪ್ಪ.—ಸುಮಾರು ಐದು-ಹತ್ತು ವರ್ಷಗಳಿಂದ ಸ್ವಲ್ಪ ತರಿಸುತ್ತಿದ್ದೇವೆ. ತಾವು ಲೆಕ್ಕಹಾಕಿ ನೋಡಬೇಕು.

ಅಧ್ಯಕ್ಷರು.—ನಾನು ಈಗ ಸ್ವಲ್ಪಹೊತ್ತಿನಿಂದ ನೋಡುತ್ತಿದ್ದೇನೆ. ಒಬ್ಬ ಸದಸ್ಯರು ಮಾತನಾಡುತ್ತಾ ನಿಂತಿರುವಾಗ ಮತ್ತೊಬ್ಬರೂ ಕೂಡ ಮಾತನಾಡಲುಪಕ್ರಮಿಸುತ್ತಾರೆ. ಆ ರೀತಿಯಾಗಬಾರದು. ಯಾರಾದರೂ ಒಬ್ಬರು ಪ್ರಶ್ನೆ ಕೇಳಬೇಕಾಗಿದ್ದರೆ ಮಾತನಾಡುತ್ತಿರುವವರು ಅವಕಾಶ ಕೊಟ್ಟು ಕುಳಿತುಕೊಂಡರೆ ಕೇಳಬಹುದು.

ಶ್ರೀ ಡಿ. ವೈ. ಸಾಂಬ್ರಾಣಿ.—ಸರ್ಕಾರದ ಪಕ್ಷದವರು ಮಾತನಾಡುತ್ತಿರುವಾಗ, ಎದುರು ಪಕ್ಷದವರು ಸವಾಲುಹಾಕಿ ಮಾತನಾಡುತ್ತಿರುವುದು ಕ್ರಮಬದ್ಧವಾಗಿದೆಯೇ ಎಂಬುದನ್ನೂ, ತಾವೇ ತಿಳಿಸಬೇಕು.

ಅಧ್ಯಕ್ಷರು.—ಯೋಚನೆ ಮಾಡಿ ಅವರೂ ಕೇಳುತ್ತಿದ್ದರೆ ಅದರಲ್ಲೂ ಒಂದು ಅರ್ಥವಿದೆ. ಈ ರೀತಿಯ ಪರಿಸ್ಥಿತಿ ಈಗ ಐದು ವರ್ಷದಿಂದಲೂ ಮುಂಬಯಿನಲ್ಲಿಯೂ ಕೂಡ ಇತ್ತು. ಅದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಮಿನಿಸ್ಟರುಗಳು ಮಾತನಾಡುವಾಗ ಸ್ವಲ್ಪ ವಿನೋದವಾಗಿ ಮಾತನಾಡುವ ಪದ್ಧತಿ ಇದೆ. ಅದರಲ್ಲೂ ಮುಖ್ಯಮಂತ್ರಿಗಳು ಮಾತನಾಡುವಾಗ ಮುಂಬಯಿಯಲ್ಲಿ ವಿರೋಧಪಕ್ಷದವರು ಈ ರೀತಿಯಾಗಿ ಮಾತನಾಡುತ್ತಿದ್ದರು; ಮತ್ತು ಅಲ್ಲಿಯ ಆಗಿನ ಮುಖ್ಯಮಂತ್ರಿಗಳಾದ ಶ್ರೀ ಮೊರಾರ್ಜಿದೇಶಾಯಿಯವರೂ ಬಹಳ ಚೆನ್ನಾಗಿ ಜವಾಬನ್ನು ಕೊಡುತ್ತಿದ್ದರು. ಇಲ್ಲಿಯೂ ಕೂಡ ಮಂತ್ರಿಗಳು ಮಾತನಾಡುವಾಗ ಈ ರೀತಿಯಾಗಿ ಪ್ರಶ್ನೆಗಳೇಳುತ್ತವೆ. ಅದಕ್ಕೆ ತಕ್ಕಂತೆ ಚೆನ್ನಾಗಿ ಇಲ್ಲಿಯ ಮಂತ್ರಿಗಳೂ ಜವಾಬು ಕೊಡುತ್ತಿದ್ದಾರೆ. ಆದರೆ ಎಲ್ಲದಕ್ಕೂ ಒಂದು ಮಿತಿಯಿರಬೇಕು. ಅತಿಯಾಗಿ ಮಾಡಬಾರದು ಅಷ್ಟೇ ನನ್ನ ಕೋರಿಕೆ. ಈ ರೀತಿಯಾಗಿ ಮಾತನಾಡುವುದು ಚೆನ್ನಾಗಿ ಕಾಣುವುದಿಲ್ಲ.

ಶ್ರೀ ಹೆಚ್. ಎಸ್. ರುದ್ರಪ್ಪ.—ನಾನು ಹೇಳುತ್ತಿರುವುದು ಹೀಗೆ ವ್ಯವಸಾಯವನ್ನು ಅಭಿವೃದ್ಧಿಗೆ ತರುವ ವಿಷಯದಲ್ಲಿ ಸರ್ಕಾರ ಸಾಕಷ್ಟು ಸಹಾಯ ಮಾಡುತ್ತಿದೆ. ಆದರೆ ಚುನಾವಣೆಗಳಲ್ಲಿ ಘೋಷಣೆ ಮಾಡಿದ ಹಾಗೆ ಈಗ ಹೇಳುತ್ತಿರುವುದು ಸೂಕ್ತವೇ ಯೋಚಿಸಿ ನೋಡಬೇಕು. ವಿರೋಧ ಪಕ್ಷದವರಿಗೆ ಅದು ಒಂದು ಚಟವಾಗಿದೆ. ಆ ಚಟತೀರಿಸಿಕೊಳ್ಳಲಿ, ನಾನೇನೂ ಹೇಳಲು ಸಾಧ್ಯವಿಲ್ಲ. ಆಹಾರ ಬೆಳೆಯಲು ವ್ಯವಸಾಯಗಾರರಿಗೆ ಎಷ್ಟೋ ಏರ್ಪಾಡುಗಳನ್ನು ಮಾಡಿ ಸಹಾಯ ಮಾಡುತ್ತಿದ್ದೇವೆ. ಹೀಗೆ ಮಾಡುತ್ತಿರುವುದರಿಂದ ಈಗ ಮಲೆನಾಡಿನಲ್ಲಿ ಕೂಡ ಎಕರೆ ಒಂದಕ್ಕೆ ಬೆಳೆ—ಐದು-ಆರು ಪಲ್ಲದಿಂದ ಸುಮಾರು ಎಂಟು-ಹತ್ತು ಪಲ್ಲಕ್ಕೆ ಹೆಚ್ಚಿರುತ್ತೆ. ಈ ರೀತಿ ವ್ಯವಸಾಯಾಭಿವೃದ್ಧಿ ಮಾಡುತ್ತಿರುವ ವಿಷಯ ಶ್ರೀ ಗೋಪಾಲಗೌಡರಿಗೆ ತಿಳಿದಿಲ್ಲ. ಏಕೆಂದರೆ ಅವರು ಬೆಂಗಳೂರಿನಲ್ಲಿಯೇ ಇರುವುದರಿಂದ ಈ ವಿಷಯ ಗೊತ್ತಾಗುವುದಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀಮಾನ್ ಸಾಂಬ್ರಾಣಿಯವರು ಹೇಳಿದ್ದು ನಿಜ. ಸಭೆಯ ನಿಯಮಗಳನ್ನು ಯಾರೂ ಪಾಲಿಸುವುದಿಲ್ಲವೆನ್ನುವುದು ವಿಷಾದವಾದ ಸಂಗತಿ. ಈ ಅಧಿವೇಶನವೇ ಈ ಮಾನ್ಯ ಸಭೆಯ ಕೊನೆಯ ಅಧಿವೇಶನ. ಅದಕ್ಕಾಗಿ ವಿಶೇಷವಾದ ಕಾಲವನ್ನು ನಿವೃತ್ತಿಹೊಂದುವ ಸದಸ್ಯರುಗಳಿಗೆ ಕೊಟ್ಟಿದ್ದೇನೆ. Across the table ಮಾತನಾಡಬಹುದು. People enjoy such sort of things. ಆದರೆ ಅದಕ್ಕೂ ಮಿತಿ ಇದೆ. ತಾವುಗಳು ಇಲ್ಲಿ ಗೊಂದಲ ಹಚ್ಚಿದರೆ ಅದರಿಂದ ಏನೂ ಕೆಲಸವಾಗುವುದಿಲ್ಲ. ಮಂತ್ರಿಗಳ ಕೊಠಡಿಯಲ್ಲಿ ಅವರ ಸಂಗಡ ಏನುಬೇಕಾದರೂ ಮಾತನಾಡಬಹುದು. ಸಭೆಯ ಘನತೆ ಮತ್ತು ಗೌರವಗಳನ್ನೂ ಕಾಪಾಡಬೇಕು.

ಶ್ರೀ ಎಸ್. ಗೋಪಾಲಗೌಡ.—ನಾನು ಒಂದು ವಿಷಯವನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಪ್ರಜಾಪ್ರಭುತ್ವದಲ್ಲಿ interrupt ಮಾಡುವುದಕ್ಕೆ ಎಷ್ಟುಮಟ್ಟಿಗೆ ಅವಕಾಶವಿದೆಯೋ ಅಷ್ಟನ್ನು ಈಗ

(ಶ್ರೀ ಎಸ್ ಗೋಪಾಲಗೌಡ.)

ಉಪಯೋಗಿಸಿಲ್ಲ. ಮಾನ್ಯಮಂತ್ರಿಗಳು ಹೇಳಿದಹಾಗೆ, ಚಟ ತೀರಿಸಿಕೊಳ್ಳಬೇಕಾದದ್ದೇನೂ ಇಲ್ಲ. ಹೀಗೆ ಅವರು ಮಾತನಾಡಬಾರದು. ಏಕೆ ಮಧ್ಯೆ ಪ್ರವೇಶಿಸಬೇಕಾಗುತ್ತದೆಂದರೆ, ಅವರು ಏನು statement ಮಾಡಿದ್ದಾರೆಯೋ ಅದರಲ್ಲಿ ಅನೇಕ ವಿಷಯಗಳು facts ನಿಂದ ದೂರ ಇವೆ. ಅವರು emotion ಇಂದ ಹೇಳುತ್ತಾರೆ. ಹೊಸ ಹುರುಪಿನಲ್ಲಿ ಈ ರೀತಿ ಹೇಳುತ್ತಾರೆ. ಅವರು ಮಾತನಾಡುವಾಗ ಗೋಪಾಲ ಗೌಡರಿಗೆ ಗೊತ್ತು ಎಂದು ನನ್ನ ಹೆಸರನ್ನು ತೆಗೆದು, ಹೇಳಿದರೆ ನಾನು ಇಲ್ಲಿದ್ದೂ ಕೂಡ ಸುಮ್ಮನೆ ಇದ್ದರೆ ನನ್ನ ಗತಿ ಏನು ? ಅವರು ಹೇಳುವುದೆಲ್ಲ ಸರಿಯಲ್ಲ. No statement of his can stand scrutiny. He is simply making statements which can be challenged at every stage. I cannot sit quietly.

Mr. SPEAKER.—I can understand the feelings of the Hon'ble Member, Sri Gopala Gowda. The point is: when one Hon'ble Member is speaking, it is very difficult to stop him unless it is a point of order. The Hon'ble Members concerned are entitled to speak whatever they feel. As for myself, I cannot stop them. And if the Hon'ble Member has anything to contradict in the statement of the Hon'ble Minister, he may stand up and ask the permission of the Chair to speak. If the Hon'ble Minister speaking yields to him, I will give him the chance to explain the position.

ಶ್ರೀ ಎಚ್. ಎಸ್. ರುದ್ರಪ್ಪ.—ಈಗ ಬಹಳ ವೇಳೆಯಾಗಿರುವುದರಿಂದ ಒಂದೆರಡು ವಿಷಯಗಳನ್ನು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ. ವ್ಯವಸಾಯದ ಅಭಿವೃದ್ಧಿ ಬಗ್ಗೆ ಬಹಳಮಾಡಿದ್ದೇವೆಂದು ನಾನಾಗಲೇ ಹೇಳುತ್ತಿದ್ದೆ. ಒಂದು ಎಕರೆಗೆ ನಾಲ್ಕು ಪಲ್ಲ ಬರುತ್ತಿದ್ದ ಕಡೆ ಐದು ಪಲ್ಲ ಬೆಳೆಯುವಂತೆ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ರಾಷ್ಟ್ರೀಯ ವಿಸ್ತರಣೆ ಯೋಜನೆಯನ್ನು ಜಾರಿಗೆ ತರುವ ಉದ್ದೇಶ ಬೆಳೆಯುವ ಕ್ರಮವನ್ನು ಬದಲಾವಣೆ ಮಾಡುವುದು ಮತ್ತು ಬೆಳೆಯನ್ನು ಹೆಚ್ಚಿಗೆ ಮಾಡುವುದು ಇದು ಸಮರ್ಪಕವಾಗಿ ನಡೆಯುತ್ತಿದೆ. ಆಹಾರದ ಉತ್ಪತ್ತಿಯನ್ನು ಹೆಚ್ಚುಮಾಡಬೇಕೆಂದು ಹೇಳಿದ್ದಾರೆ. ಹನ್ನೊಂದು ಲಕ್ಷ ಟನ್ ಹೆಚ್ಚಿಗೆ ಬೆಳೆಯುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಧಾರಣೆವಾಸಿಗಳು ಇಷ್ಟು ಹೆಚ್ಚಿಗೆ ಇರಲು ಕಾರಣವೇನೆಂದು ಪ್ರಶ್ನೆ ಮಾಡಿದರು. ಧಾರಣೆವಾಸಿಗಳು ಜಾಸ್ತಿಯಾಗುವುದಕ್ಕೆ ಅನೇಕ ಕಾರಣಗಳಿವೆ. ರೈತರ ಆರ್ಥಿಕಸ್ಥಿತಿ ಉತ್ತಮವಾಗಿರುವುದು ಒಂದು ಕಾರಣ. ನಾನು ಅನೇಕ ಕಡೆಗಳಲ್ಲಿ ನೋಡಿದ್ದೇನೆ ಮತ್ತು ವಿಚಾರ ಮಾಡಿದ್ದೇನೆ. ನನ್ನ ಮಿತ್ರರೊಬ್ಬರು ರೈತರು ತಾವು ಬೆಳೆದ ಭತ್ತವನ್ನೆಲ್ಲ ಮಾರಿದ್ದಾರೆ, ಅವರಿಗೆ ತಿನ್ನುವುದಕ್ಕೆ ಇಲ್ಲವೆಂದು ಹೇಳಿದರು. ಕೆಲವು ಸದಸ್ಯರು ವ್ಯಾಪಾರಸ್ಥರು ದಾಸ್ತಾನುಮಾಡಿರುವುದರಿಂದ ಧಾರಣೆ ಏರಿದೆ ಎಂದು ಹೇಳಿದರು. ನಾನು ವ್ಯಾಪಾರಸ್ಥರಲ್ಲಿ ಮತ್ತು ರೈತರಲ್ಲಿ ವಿಚಾರಮಾಡಿದ್ದೇನೆ. ಹೆಚ್ಚಿನ ಧಾರಣೆಯಲ್ಲಿ ಭತ್ತವನ್ನು ಕೊಂಡು ದಾಸ್ತಾನುಮಾಡಲು ವ್ಯಾಪಾರಸ್ಥರು ಹೋಗಿಲ್ಲ. ಅವರು ಅಂಥ ದಡ್ಡರಲ್ಲ. ಆದ್ದರಿಂದ ವ್ಯಾಪಾರಸ್ಥರು ದಾಸ್ತಾನು ಮಾಡಿರುವುದರಿಂದ ಧಾರಣೆವಾಸಿಗಳು ಹೆಚ್ಚಿವೆ ಎಂದು ಹೇಳಿರುವುದರಲ್ಲಿ ಸತ್ಯಾಂಶವಿಲ್ಲ. ಒಂದು ವೇಳೆ ದೇಶದಲ್ಲಿ ಹೆಚ್ಚು ಆಹಾರ ಬೆಳೆದಿದ್ದರೆ ಬಹುಭಾಗ ರೈತರಲ್ಲಿದೆ. ರೈತರು ಬುದ್ಧಿವಂತರಾಗಿದ್ದಾರೆ. ಅವರು ಎಷ್ಟು ಧಾನ್ಯವನ್ನು ಕೊಡಬಹುದೋ ಅಷ್ಟನ್ನು ಮಾತ್ರ ಕೊಟ್ಟು ಹೆಚ್ಚಿನ ಧಾನ್ಯವನ್ನು ತಾವೇ ಇಟ್ಟುಕೊಂಡಿದ್ದಾರೆ. ರೈತರ ಆರ್ಥಿಕ ಸ್ಥಿತಿ ಉತ್ತಮವಾಗಿದೆ. ಸರ್ಕಾರದವರು ಅನೇಕ ವಿಧದಲ್ಲಿ, ಅಂದರೆ, ಸಾಲಕೊಡುವುದು ಮುಂತಾದುವುಗಳ ಮೂಲಕ ಸಹಾಯ ಮಾಡುತ್ತಿದ್ದಾರೆ. ಆ ದೃಷ್ಟಿಯಿಂದ ರೈತನಲ್ಲಿರತಕ್ಕ ಆಹಾರಧಾನ್ಯ ಮಾರುಕಟ್ಟೆಗೆ ಬಂದಿಲ್ಲ. ದೇಶದಲ್ಲಿ ಪ್ರತಿಯೊಂದು ಪದಾರ್ಥದ ಬೆಲೆಗಳೂ, ನಮಗೆಲ್ಲರಿಗೂ ಗೊತ್ತಿರುವ ಹಾಗೆ, ಬಹಳ ಜಾಸ್ತಿಯಾಗಿವೆ. ಈ ಕಾರಣದಿಂದ ಆಹಾರ ಧಾನ್ಯಗಳ ಧಾರಣೆ ಜಾಸ್ತಿಯಾಗುವುದಕ್ಕೆ ಕಾರಣವಾಗಿದೆ. ದೇಶದಲ್ಲಿ ಆಹಾರಾಭಾವವಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಸತ್ಯಾಂಶವಿಲ್ಲ. ಅನೇಕ ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸೂಚನೆಯನ್ನು ನಾವು ಬಹಳ ವಿಶ್ವಾಸದಿಂದ ಒಪ್ಪಿಕೊಂಡಿದ್ದೇವೆ. ಅವರು ಅನೇಕ ವಿಷಯಗಳನ್ನೂ ತಿಳಿಸಿದ್ದಾರೆ. ಅದರಲ್ಲಿ ಕೆಲವು ಮಾರ್ಪಾಡು ಆಗತಕ್ಕ ವಿಷಯಗಳಿಗೆ ಸಂಬಂಧಪಟ್ಟುವು. ಇವುಗಳನ್ನೆಲ್ಲ ಗಮನದಲ್ಲಿಟ್ಟುಕೊಳ್ಳುತ್ತೇವೆ. ಸರಕಾರದ ಪರವಾಗಿ ಮಾನ್ಯ ಸದಸ್ಯರೆಲ್ಲರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—ಈಗಾಗಲೇ ಮಾನ್ಯ ಮಂತ್ರಿಗಳು ಅನೇಕ ಮಾನ್ಯ ಸದಸ್ಯರಿಗೆ ಸೂಕ್ತವಾದ ಉತ್ತರ ಕೊಟ್ಟಿರುವುದರಿಂದ ನಾನು ಉತ್ತರ ಕೊಡಬೇಕಾದ ಅವಶ್ಯಕತೆ ಇಲ್ಲವೆಂದು ಭಾವಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮರಾಮತ್ತು ಶಾಖೆಯ ಮಂತ್ರಿಗಳು).—ಸರಕಾರದ ಪರವಾಗಿ ಮಾನ್ಯ ಮಿತ್ರರಾದ ಶ್ರೀ ರುದ್ರಪ್ಪನವರು ಇಲ್ಲ ನಡೆದಿರತಕ್ಕ ಟೀಕೆಗಳಿಗೆ ಉತ್ತರ ಹೇಳಿದ್ದಾರೆ. ಪುನಃ ಆ ವಿಷಯಗಳನ್ನು ಪ್ರಸ್ತಾಪಿಸುವುದಕ್ಕೆ ಇಷ್ಟಪಡುವುದಿಲ್ಲ. ನನ್ನ ಆಡಳಿತಕ್ಕೆ ಸಂಬಂಧಪಟ್ಟಂತೆ ಒಂದೆರಡು ಮಾತುಗಳು ಟೀಕೆಯಲ್ಲಿ ಅಡಕವಾಗಿದ್ದುವು. ಅವುಗಳನ್ನು ಕುರಿತು ಕೆಲವು ಮಾತುಗಳನ್ನಾಡಬೇಕಾಗಿದೆ. ಅದಕ್ಕೆ ಮೊದಲು ನನ್ನ ಮಿತ್ರರಾದ ಶ್ರೀ ರುದ್ರಪ್ಪನವರು ಎದುರು ಪಕ್ಷದ ಸ್ನೇಹಿತರ ಬಗ್ಗೆ ಏನು ಹೇಳಿದರೋ ಆ ವಿಚಾರದಲ್ಲಿ ನಾನೂ ಸಹ ವೈಯಕ್ತಿಕವಾಗಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಎದುರು ಪಕ್ಷದ ಸದಸ್ಯರ ಸಂಖ್ಯಾಬಲ ಕಡಮೆ ಇತ್ತು. ಎದುರು ಪಕ್ಷವೆಂದು ಅಂಗೀಕಾರ ಮಾಡುವುದಕ್ಕೆ ಸಾಕಾದಷ್ಟು ಸಂಖ್ಯೆ ಇರಲಿಲ್ಲ. ಎದುರು ಪಕ್ಷವೆಂದು ಹೆಸರಿಗೆ ಆಯಿತು. ವೈಯಕ್ತಿಕವಾಗಿ ನನ್ನ ಅಭಿಪ್ರಾಯದಲ್ಲಿ ಅವರು ಕೆಲವು ಸಮಯಗಳಲ್ಲಿ ಸ್ವಲ್ಪ 'ಉಚಾಯಿಸಿ' ಎಂದು ಹೇಳುವಹಾಗೆ, ಮಾತನಾಡಿದ್ದಾರೆ. ಹಳ್ಳಿಯ ಕಡೆ ಒಂದು ಗಾದೆ ಹೇಳುತ್ತಾರೆ "ನಾಲಗೆ ಕುಲ ಹೇಳಿತು" ಎಂದು. ಹಾಗೆ ಕೆಲವರು ಸ್ವಲ್ಪ ಉಚಾಯಿಸಿ ಮಾತನಾಡಿದ್ದಾರೆ. . . .

ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಮಂತ್ರಿಗಳು ಆ ಮಾತನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Sri B. P. KADAM.—I take strong objection, Sir. That is not my statement.

Sri S. GOPALA GOWDA.—He must withdraw those words.

(*Some Hon'ble Members stood up at this stage*).

Mr. SPEAKER.—Why so many Hon'ble Members stand up at one time? One Hon'ble Member will do. I did not follow exactly what the Hon'ble Minister said.

Sri H. K. VEERANNA GOWDH.—What I meant was, "the expressions speak of their minds". Sometimes they use foul language. That shows the standard of the person who uses that language.

Mr. SPEAKER.—As I could find, it is not objectionable to use such words. I have already said that I have not been able to follow what exactly he said in Kannada.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ಅವರು ಮತ್ತೊಂದು ಸಲ ಹೇಳಲಿ. ಈ ಮಾನ್ಯ ಸಭೆಯಲ್ಲಿ ಇಂಥ ಅವಾಚ್ಯ (vulgar) ಮಾತುಗಳನ್ನಾಡಿದ್ದಾರೆ.

ಅಧ್ಯಕ್ಷರು.—ಅವರು ಹೇಳಿದ್ದನ್ನು ನಾನು ಸರಿಯಾಗಿ ಗಮನಿಸಲಿಲ್ಲ, ಅವರು ಅಂಥ ಮಾತನ್ನು ಆಡಿದರೆಂದು ನನಗೆ ಕಾಣುವುದಿಲ್ಲ.

ಶ್ರೀ ಹೆಚ್. ಕೆ. ವೀರಣ್ಣಗೌಡ.—ನಮ್ಮ ಕಡೆ ಒಂದು ಗಾದೆ ಇದೆ, "ನಾಲಿಗೆ ಕುಲವನ್ನು ಸೂಚಿಸುತ್ತದೆ" ಎಂದು. ಅದರ ಅರ್ಥ ಕೆಟ್ಟಮಾತನಾಡಿದರೆ ಕೆಟ್ಟ ಜನಗಳು, ಮತ್ತು ಅವರ ಸ್ವಭಾವವನ್ನು ಸೂಚಿಸುತ್ತದೆ. ಇದನ್ನೇ ನಾನು ಹೇಳಿದ್ದು.

ಶ್ರೀ ಜೆ. ಕೆ. ಪ್ರಾಣೇಶಾಚಾರ್ಯ (ತಂಡೂರು—ಸೇರಾಮ್).—ಹರಿಶ್ಚಂದ್ರ ಕಾವ್ಯದಲ್ಲಿ ಸಹ ಈ ಗಾದೆ ಬರುತ್ತದೆ.

ಅಧ್ಯಕ್ಷರು.—ಇದರಲ್ಲಿರುವ ಆಕ್ಷೇಪಣೆ ನನಗೆ ಗೊತ್ತಾಗಲಿಲ್ಲ. ಇದು ಪಾರ್ಲಿಮೆಂಟರಿಯೇ ಅಥವಾ ಅನ್‌ಪಾರ್ಲಿಮೆಂಟರಿಯೇ ಎನ್ನುವ ಪ್ರಶ್ನೆ ಬರುತ್ತದೆ. ಇದು ಅನ್‌ಪಾರ್ಲಿಮೆಂಟರಿ ಎಂದು ನನಗೆ ಕಾಣುವುದಿಲ್ಲ.

*ಶ್ರೀ ಎಚ್. ಕೆ. ವೀರಣ್ಣಗೌಡ.—ಇದು ಅನ್‌ಪಾರ್ಲಿಮೆಂಟರಿ ಅಲ್ಲವೆಂದು ತಿಳಿದುಕೊಂಡು ಉಪಯೋಗಿಸಿದ್ದೇನೆ. ಹಾಗೆ ಕೆಲವರು ಉಚಾಯಿಸಿ ಮಾತನಾಡಿದ್ದರಿಂದ, ಸಣ್ಣ ಸಣ್ಣ ಮಾತುಗಳನ್ನು ಉಪಯೋಗಿಸಿದ್ದರಿಂದ ನನಗೆ ಖೇದವಾಗಲಿಲ್ಲ; ಎದುರು ಪಕ್ಷದವರು ಈ ಐದು ವರ್ಷಗಳಿಂದಲೂ ಬಹಳ ಸಹಕರಿಸಿದ್ದಾರೆ ಮತ್ತು ಸಮಯೋಚಿತವಾದ ಸಲಹೆಗಳನ್ನೂ ಕೊಟ್ಟಿದ್ದಾರೆಂದು ಹೇಳುವುದಕ್ಕೆ ನಾನು ಹಿಂದುಮುಂದು ನೋಡುವುದಿಲ್ಲ. ಈ ಅಧಿವೇಶನದಲ್ಲಿ ಕೂಡ ಪ್ರತಿಯೊಬ್ಬರೂ ದುಗುಡದಿಂದ ಮಾತನಾಡಿದ್ದಾರೆ. ಅದಕ್ಕೆ ಕಾರಣ ಸ್ಪಷ್ಟವಾಗಿದೆ, ಎದುರು ಪಕ್ಷದಲ್ಲಿ ಅನೇಕ ಹಿರಿಯರೂ, ಅನುಭವಸ್ಥರೂ ಇದ್ದರು; ವಯಸ್ಸರೂ ತಿಳುವಳಿಕಸ್ಥರೂ ಇದ್ದರು. ಅವರ ಸಹಕಾರ, ಅವರ ಅನುಭವ, ಅವರ ಸದುಪಯುಕ್ತವಾದ ಟೀಕೆಗಳು ಮುಂದಿನ ಸಭೆಗೆ ಇರುವುದಿಲ್ಲವಲ್ಲ ಎಂದು ವ್ಯಸನದಿಂದ ಹೇಳುತ್ತೇನೆ. ಶ್ರೀಮಾನ್ ಎಲ್. ಸಿದ್ದಪ್ಪನವರು ಈಸಲ ಚುನಾವಣೆಗೆ ನಿಂತುಕೊಳ್ಳಲಿಲ್ಲ. ಶ್ರೀಮಾನ್ ಕೆ. ಪಟ್ಟಾಭಿರಾಮನ್ ಅವರೂ ಅಷ್ಟೆ. ಶ್ರೀಮಾನ್ ಇಮಾಂ ಅವರು ದೆಹಲಿ ಲೋಕ ಸಭೆಗೆ ಹೋಗುವವರಿದ್ದಾರೆ. ಅಂತೂ ಕಾರಣವೇನಾದರೂ ಆಗಿರಲಿ ಎದುರು ಪಕ್ಷದ ಸ್ನೇಹಿತರೆಲ್ಲ ಮುಂದಿನ ಸಭೆಗೆ ಬಾರದೆ ಇರುತ್ತಾರೆ. ಇವರುಗಳೆಲ್ಲ ನಾನಾಗಲೇ ಹೇಳಿದಂತೆ, ಸಮಯೋಚಿತವಾಗಿ ವರ್ತಿಸಿದ್ದಾರೆಂದರೆ ಉತ್ಪ್ರೇಕ್ಷೆಯಲ್ಲ. ಆದರೆ ಕೆಲವರು ಒಂದೊಂದುಸಲ ಕೆಲವು ಸಣ್ಣ ಮಾತುಗಳನ್ನು ಉಪಯೋಗಿಸಿದ್ದು ವ್ಯಸನಕರವಾದುದು. ಅಂಥ ಮಾತುಗಳನ್ನಾಡಬಾರದಾಗಿತ್ತು. ಅದು ವ್ಯಕ್ತಿಗತವಾದದ್ದು.

ಈ ಸ್ನೇಹಿತರ ಸಹಕಾರ ಏನಿದೆ, ಈ ಒಂದು ಟೀಕೆ ಅವರ ಉಪಯುಕ್ತವಾದ ಸಲಹೆ ಮುಂದಿನ ಸಭೆಗೆ ಇಲ್ಲದೇ ಹೋದರೂ ಅವರ ಸ್ಥಾನದಲ್ಲಿ ಬರತಕ್ಕ ಸ್ನೇಹಿತರು ಅಷ್ಟೇಮಟ್ಟಿಗೆ, ಅದಕ್ಕಿಂತ ಉನ್ನತವಾಗಿ ವರ್ತಿಸುತ್ತಾರೆ ಎಂದು ಆಶಿಸಿ ಅದನ್ನು ಅಲ್ಲಿಗೇ ನಿಲ್ಲಿಸುತ್ತೇನೆ.

ಇನ್ನು ಎದುರು ಪಕ್ಷದ ಸ್ನೇಹಿತರು ಅನೇಕರು ಆಹಾರದ ವಿಷಯದಲ್ಲಿ, ಚೆನ್ನಿ ಅಕ್ಕಿ ವಿಚಾರದಲ್ಲಿ ಹೇಳಿದಂಥ ಟೀಕೆಗಳಿಗೆ ಶ್ರೀಮಾನ್ ರುದ್ರಪ್ಪನವರು ಉತ್ತರ ಕೊಟ್ಟಿದ್ದಾರೆ. ಕೆಲವರು ಚುನಾವಣೆ ವಿಚಾರದಲ್ಲಿ ಬಹಳ ಕಟುವಾಗಿ ಟೀಕೆ ಮಾಡಿದರು. ಏನು ಆಶ್ಚರ್ಯವಾಯಿತು ಎಂದರೆ ನನ್ನ ಬಂಧುಗಳಾದ ನಾಗರಾಜಮೂರ್ತಿಯವರು ಬಹು ಕಟುವಾಗಿ ಟೀಕೆ ಮಾಡಿದರು. ಆದರೆ ಅವರು ಹೇಳಿದ ಮಾತುಗಳು ನನ್ನ ಮನಸ್ಸಿಗೆ ಹಿಡಿಸಲಿಲ್ಲ. ಕಾರಣ ಇಷ್ಟೆ. ಗವರ್ನರ್ ಅವರ ಭಾಷಣದಲ್ಲಿ ಇರುವುದು ಚುನಾವಣೆ ಚೆನ್ನಾಗಿ ನಡೆಯಿತು, ಗಲಭೆಯಾಗಲಿಲ್ಲ, ಶಾಂತಿಯುತವಾಗಿ ನಡೆಯಿತು ಎಂದು. ಅಲ್ಲಿ ಅರ್ಥ ನಾನು ತಿಳಿದುಕೊಂಡಿರುವುದು, ಚುನಾವಣೆಗೆ ಅನುಸರಿಸಿದ ನೀತಿ, ನಿಯಮ ಮತ್ತು ಅದಕ್ಕೆ ಆಗಬೇಕಾಗಿದ್ದಂಥ ಮೇಲ್ವಿಚಾರಣೆ, ಓಟು ತೆಗೆದುಕೊಳ್ಳತಕ್ಕ ದಿನ, ಎಣಿಕೆ ದಿನ, ಇವನ್ನು ಕುರಿತು ಅವರು ಪ್ರಸ್ತಾಪ ಮಾಡಿದ್ದಾರೆ ಎಂದು. ಶ್ರೀಮಾನ್ ನಾಗರಾಜ ಮೂರ್ತಿಯವರು 'ಅವರು ಹಾಗೆ ಹೇಳಿದರು, ಹೀಗೆ ಹೇಳಿದರು' ಎಂದು ಹೇಳಿದರು. ಪ್ರಚಾರ ಕಾರ್ಯದಲ್ಲಿ ಯಾರು ಯಾರು ಏನೇನು ಹೇಳಿದರು ಎಂದು ಪ್ರತಿಯೊಬ್ಬರು ಹೇಳಿದ್ದನ್ನು ತುಲನ ಮಾಡುವುದು ಅಗತ್ಯವಲ್ಲ. ಕಾಂಗ್ರೆಸ್‌ನವರು ಹೀಗೆ ಹೇಳಿದರು ಎಂದು ಎದುರು ಪಕ್ಷದವರು ಅದಕ್ಕೆ ತಿರುಗಿಸಿ ಹೇಳಿರುವುದು ನನ್ನ ಕ್ಷೇತ್ರದಲ್ಲಿ ನನ್ನ ಗಮನಕ್ಕೆ ಬಂದಿದೆ. ಆದ್ದರಿಂದ ಅದನ್ನು ಉದಹರಿಸಿ ಚುನಾವಣೆಯೇ ತೃಪ್ತಿಕರವಾಗಿಲ್ಲವೆಂದು ಹೇಳುವುದು ಅಸಂಬದ್ಧ ಎಂದು ಹೇಳಬಲ್ಲೆ. ಎಣಿಕೆ ವಿಚಾರದಲ್ಲಿ ಹೆಚ್ಚು ಕಡಮೆ ಆಯಿತು, ಪೆಟ್ಟಿಗೆಗಳ ವಿಷಯದಲ್ಲಿ ಮೋಸವಾಯಿತು, ಓಟು ತೆಗೆದುಕೊಳ್ಳುವ ದಿನ ಸರಿಯಾದ ಏರ್ಪಾಡು ನಡೆದಿರಲಿಲ್ಲ ಎನ್ನುವ ಪರಿಸ್ಥಿತಿಗಳಿಗೆ ಉದಾಹರಣೆ ಕೊಟ್ಟು ಆಕ್ಷೇಪಣೆ ಮಾಡಿದರೆ ಪರವಾಗಿಲ್ಲ. A-B-C-D ಹಾಗೆ ಹೇಳಿದರು, ಎದುರು ಪಕ್ಷದವರು ಹೀಗೆ ಹೇಳಿದರು ಎಂದರೆ ವ್ಯಕ್ತಿಗತವಾಗಿ ಹೇಳಿದ್ದನ್ನು ಇಲ್ಲಿ ಪ್ರಸ್ತಾಪ ಮಾಡಿ ಚುನಾವಣೆ ಸರಿಯಾಗಿ ನಡೆಯಲಿಲ್ಲ ಎಂದು ವಾದಿಸುವುದು ಅಷ್ಟು ಸೂಕ್ತವಾಗಿಲ್ಲ ಎಂದು ಅಷ್ಟು ಮಾತ್ರ ಹೇಳಬಯಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—ಪ್ರಜಾಪ್ರಭುತ್ವಕ್ಕನುಗುಣವಾಗಿ ನಡೆಯಲಿಲ್ಲ ಎಂದು.

ಶ್ರೀ ಎಚ್. ಕೆ. ವೀರಣ್ಣಗೌಡ.—ಎಷ್ಟುಮಟ್ಟಿಗೆ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತು. ವ್ಯಕ್ತಿಗತವಾದ ವಿಷಯವನ್ನು ಉದಹರಿಸಿ ಚುನಾವಣೆ ಸರಿಯಾಗಿ ನಡೆಯಲಿಲ್ಲ ಎಂದು ಹೇಳುವುದು ಸೂಕ್ತವಾದುದಲ್ಲ ಎಂದು ಮತ್ತೊಮ್ಮೆ ಹೇಳುತ್ತೇನೆ.

ನನ್ನ ಆಡಳಿತಕ್ಕೆ ಒಳಪಟ್ಟಂತೆ, ಎಲೆಕ್ಟ್ರಿಸಿಟಿ ಬೋರ್ಡ್ ರಚನೆ ಮಾಡುವುದನ್ನು ನಿಧಾನ ಮಾಡಿದ್ದಾರೆ ಎಂಬ ಆಕ್ಷೇಪಣೆ ಮಾಡಿದರು. ನಿಧಾನ ಮಾಡಿದ್ದು ನಿಜ. ನಿಧಾನ ಮಾಡುವುದಕ್ಕೆ ಸರ್ಕಾರದವರಿಗೆ ಕಾರಣಗಳಿದ್ದವು. ಅವು ಮಾನ್ಯ ಸದಸ್ಯರಿಗೆ ಅನೇಕರಿಗೆ ಗೊತ್ತಿದೆ. ಹಿಂದಿನ ಸರ್ಕಾರ ಅದನ್ನು ಬಹಳವಾಗಿ ಯೋಚನೆ ಮಾಡಿ ಒಂದು ದೃಷ್ಟಿಯಿಂದ ಸದ್ಯಕ್ಕೆ ಬೇಡ ಎಂದು ಇಂಡಿಯಾ ಸರ್ಕಾರದವರನ್ನು ಕೇಳಿಕೊಳ್ಳುತ್ತಾ ಬಂದರು. ಅದರ ವಿವರಗಳನ್ನು ಈಗ ಹೇಳುವುದಕ್ಕೆ ಅವಕಾಶವಿಲ್ಲದೇ ಇದ್ದರೂ ಸ್ಥೂಲವಾಗಿ ಒಂದೆರಡು ಮಾತುಗಳನ್ನು ಆಡಳಿತ ದೃಷ್ಟಿಯಿಂದ ಹೇಳಬೇಕಾಗಿದೆ. ಎಲೆಕ್ಟ್ರಿಸಿಟಿ ಆಕ್ಟು ಇದೆ. ಲಾಭ ಅಥವಾ ನಷ್ಟಕ್ಕೆ ಅವಕಾಶವಿಲ್ಲದ ರೀತಿಯಲ್ಲಿ ನಡೆಸಬೇಕು ಎಂದು ವಿಧಾಯಕವಾಗಿದೆ. ಎಂದ ಮೇಲೆ ಇವೊತ್ತು ನಾವು ವಿದ್ಯುಚ್ಛಕ್ತಿ ಸರಬರಾಯಿ ವಿಚಾರದಲ್ಲಿ ಕೆಲವು ರಿಯಾಯಿತಿಗಳನ್ನು ಜನಗಳಿಗೆ ತೋರಿಸುತ್ತಾ ಇದ್ದೇವೆ,—ವ್ಯವಸಾಯಕ್ಕೆ, ಕೈಗಾರಿಕೆಗೆ ಇತ್ಯಾದಿಗಳಿಗೆ.—ಈಗ ಒಂದು ಬೋರ್ಡ್ ಆದರೆ, ಒಂದು ಕಂಪೆನಿ ಆಗುತ್ತದೆ. ಅವರು ನಷ್ಟಕ್ಕೆ ಅವಕಾಶವಿಲ್ಲದ ಹಾಗೆ ಮಾಡಬೇಕೆಂದರೆ ಬಹುಶಃ ವ್ಯವಸಾಯಗಾರರಿಗೆ ತೊಂದರೆ ಆಗಬಹುದು. ಇದನ್ನು ಸ್ಥೂಲವಾಗಿ ಹೇಳುತ್ತಾ ಇದ್ದೇನೆ. ಕಡೆಗೆ, ಇಂಡಿಯಾ ಸರ್ಕಾರದವರು ''ಎಲ್ಲಾ ಸಂಸ್ಥಾನಗಳಲ್ಲೂ ಇದೆ, ನೀವು ಮಾಡಬೇಕು'' ಎಂದು ಹೇಳಿದರು, ಒಪ್ಪಿಕೊಂಡಿದ್ದೇವೆ. ಈಗ ಮೈಸೂರಿಗೆ ಹೊಸದಾಗಿ ಸೇರಿರುವ ಭಾಗಗಳಲ್ಲಿ ಇಲಾಖೆಯವರು ನಡೆಸುತ್ತಾ ಇರಲಿಲ್ಲ, ಕಂಪನಿಯವರು ನಡೆಸುತ್ತಾ ಇದ್ದರು. ಕಂಪೆನಿಯವರ ಆಸ್ತಿಪಾಸ್ತಿಗಳನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಅವರಿಗೆ ಪರಿಹಾರ ನೀಡಬೇಕಾಗುತ್ತದೆ. ಅವರಿಗೆ ಕೊಡಬೇಕಾದ ಪರಿಹಾರ ಕೊಟ್ಟು, ಆಡಳಿತವನ್ನು ಸರ್ಕಾರದ ಕೈಕೆಳಗೆ ತೆಗೆದುಕೊಂಡು ಆಮೇಲೆ ಒಂದು ಬೋರ್ಡ್ ರಚಿಸಬೇಕು. ಆ ವಿವರಗಳನ್ನು ಕುರಿತು ಚರ್ಚೆಮಾಡಿ ತೀರ್ಮಾನ ಮಾಡಬೇಕಾದರೆ ಮೂರು ನಾಲ್ಕು ತಿಂಗಳು ಬೇಕಾಯಿತು, ಆದ್ದರಿಂದ ಇನ್ನೂ ಕೆಲವು ತಿಂಗಳೇ ಹೊರತು ವರ್ಷಾನುಗಟ್ಟಲೆ ಹಿಡಿಯುವುದಿಲ್ಲ. ಸುಮಾರು ಏಪ್ರಿಲ್ ಒಂದನೇಯ ತಾರೀಖಿನಿಂದ ಬೋರ್ಡ್ ಸ್ಥಾಪನೆ ಮಾಡಬೇಕೆಂದು ಉದ್ದೇಶ ಮಾಡಿರುತ್ತಾರೆ. ಬಹುಶಃ ಜುಲೈ ಅಥವಾ ಆಗಸ್ಟಿಗೆ ಹೋಗಬಹುದು. ಅಂತೂ ನಾಲ್ಕಾರು ತಿಂಗಳೊಳಗೆ ಆ ಬೋರ್ಡನ್ನು ರಚನೆ ಮಾಡುವುದರಲ್ಲಿ ಏನೂ ಸಂದೇಹವಿಲ್ಲ.

ಇನ್ನೊಂದು ವಿಷಯವನ್ನು ಮಾನ್ಯ ಸದಸ್ಯರನೇಕರು ಪ್ರಸ್ತಾಪ ಮಾಡಿದ್ದಾರೆ. ಅದು ಗ್ರಾಮಾಧಿಕಾರಿಗಳ ವಿಚಾರ. ಕಾಂಗ್ರೆಸ್ ಸದಸ್ಯರೂ ಪ್ರಸ್ತಾಪ ಮಾಡಿದ್ದಾರೆ, ಕಾಂಗ್ರೆಸ್ಸೇತರರೂ ಮಾಡಿದ್ದಾರೆ. ಆ ವಿಚಾರದಲ್ಲಿ ಒಂದು ಮಾತು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಇದು ಬಹಳ ಚರ್ಚಾಸ್ಪದವಾದ ವಿಚಾರ. ಜವಾಬ್ದಾರಿ ಸರ್ಕಾರ ಬರುವುದಕ್ಕೆ ಹಿಂದಿನಿಂದಲೂ ಸಹ ಈ ಪ್ರಶ್ನೆ ಇದ್ದೇ ಇದೆ. ಇದನ್ನು ಸರ್ಕಾರದವರು ಬೇರೆ ಬೇರೆ ಕಾಲದಲ್ಲಿ ಪರ್ಯಾಲೋಚನೆ ಮಾಡಿ ತಾತ್ಕಾಲಿಕವಾದ ಕೆಲವು ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ. ಆದರೂ ಇದು ಎಷ್ಟು ಮಟ್ಟಿಗೆ ಅಂತ್ಯವಾಗಿ ತೀರ್ಮಾನವಾಗಬೇಕಾಗಿತ್ತೋ ಅಷ್ಟು ಮಟ್ಟಿಗೆ ಆಗಿಲ್ಲ. ಅವರು ಸರ್ಕಾರಿ ನೌಕರರೇ ಅಥವಾ ಖಾಸಗೀ ಜನರೇ; ಅವರಿಗೆ ಸಂಬಳ ಕೊಡಬೇಕೇ, ವಂಶಪಾರಂಪರ್ಯವಾಗಿ ಇರಬೇಕೇ ? ಎಂಬ ಪ್ರಶ್ನೆ ಆಗಿಂದಾಗ್ಗೆ ಬರುತ್ತಾ ಇದೆ. ಇದನ್ನು ತೀರ್ಮಾನ ಮಾಡುವುದಕ್ಕೆ ಸ್ವಲ್ಪ ಕಷ್ಟ ಇದೆ. ಆದರೂ ಹಿಂದೆ ಶ್ರೀಮಾನ್ ಎಚ್. ಬಿ. ಗುಂಡಪ್ಪಗೌಡರ ಸಮಿತಿಯವರು ಈ ವಿಚಾರದಲ್ಲಿ ಬಹಳ ವಿವರವಾಗಿ ಪರಿಶೀಲನೆ ಮಾಡಿ ಸರ್ಕಾರಕ್ಕೆ ಒಂದು ಶಿಫಾರಸು ಸಹ ಮಾಡಿದ್ದಾರೆ. ಅವರು ತಿರುವಾಂಕೂರು ಕೊಚ್ಚಿನ್ ಮುಂತಾದ ಸಂಸ್ಥಾನಗಳಿಗೆ ಹೋಗಿ ಅಲ್ಲಿರುವ ಪದ್ಧತಿ ಹೇಗೆ ಎಂಬುದನ್ನು ನೋಡಿಕೊಂಡು ಬಂದು ಮಾಡಿದ್ದಾರೆ. ಅದನ್ನು ಕಾರ್ಯಗತ ಮಾಡುವುದರಲ್ಲಿ ಅನೇಕ ಕಾರಣಗಳಿಂದ ನಿಧಾನವಾಗಿದೆ. ಆದರೆ ಈಗ ತಾತ್ಕಾಲಿಕವಾಗಿ ಮೊದಲು ಅವರು ಸರ್ಕಾರಿ ನೌಕರರೇ ಅಥವಾ ಖಾಸಗೀ ಜನರಾಗಿ ವಂಶಪಾರಂಪರ್ಯವಾಗಿ ಇರಬೇಕೇ, ವರ್ಗಾವಣೆ ಮುಂತಾದ್ದು ಆಗಬೇಕೇ ಎಂಬುದನ್ನು ತೀರ್ಮಾನ ಮಾಡುವುದಕ್ಕೆ ಬದಲಾಗಿ, ಅವರಿಗೆ ಪರಿಹಾರವಾಗಿ ದೊರೆಯತಕ್ಕ ವೇತನ ಅಥವಾ ಪೋಟಿಗೆ ಕಡಿಮೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದು—ಅದನ್ನು ಸರ್ಕಾರ ನಿರಾಕರಿಸುತ್ತಾ ಇಲ್ಲ—ಅದನ್ನು ಸಹಾನುಭೂತಿಯಿಂದ ಪರಿಶೀಲನೆಮಾಡುತ್ತಾ ಇದ್ದಾರೆ. ಏತನ್ಮಧ್ಯೆ ಪ್ರಭಾವಕ್ಕೊಳಗಾಗಿಯೋ ಅಥವಾ ಚುನಾವಣಾ ಕಾಲದಲ್ಲಿ ಸ್ವಲ್ಪ ಗಲಾಟೆ ಮಾಡಿದಲ್ಲಿ ನಮ್ಮ ಕೆಲಸವನ್ನು ಸಾಧಿಸಬಹುದು, ಸರ್ಕಾರವನ್ನು ಬಗ್ಗಿಸಬಹುದು ಎನ್ನುವ ದೃಷ್ಟಿಯಿಂದಲೋ, ಗ್ರಾಮಾಧಿಕಾರಿಗಳು ಕೆಲವರು ತಮ್ಮ ಅಧಿಕಾರ ವ್ಯಾಪ್ತಿಗೆ ಮೀರಿ ಮಾತನಾಡಿದ್ದಾರೆ ಅಥವಾ ಕೆಲಸಕಾರ್ಯಗಳಲ್ಲಿ ತೊಡಗಿದ್ದಾರೆ. ಇದು ಬಹಳ ವಿಷಾದಕರ. ಈಗಲೂ ಗ್ರಾಮಾಧಿಕಾರಿಗಳಿಗೆ ನಾನು ಹೇಳುತ್ತೇನೆ, ಅವರೂ ಸಹ ಸರ್ಕಾರದಲ್ಲಿ ಸೇವೆ ಸಲ್ಲಿಸತಕ್ಕ ಮುಖ್ಯವಾದ ಒಂದು ಅಂಗವಾಗಿದ್ದಾರೆ. ಅವರ ವಿಚಾರದಲ್ಲಿ ಒಂದು ಕೆಟ್ಟ ಅಭಿಪ್ರಾಯವಾಗಲಿ ಅಥವಾ ಅವರ ಅಹವಾಲು ಏನಿದೆ ಅದನ್ನು ಗಮನಿಸಬಾರದು ಎಂಬುದಾಗಲಿ ಸರ್ಕಾರದ ಅಭಿಪ್ರಾಯವಲ್ಲ. ಅವರ ಪೋಟಿಗೆ ವಿಚಾರದಲ್ಲೂ ಸಹ ಬಹಳ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತಾ ಇದ್ದಾರೆ. ಇಷ್ಟರಲ್ಲೇ ತೀರ್ಮಾನವಾಗುತ್ತದೆ. ಏತನ್ಮಧ್ಯೆ ಅವರು ಸರ್ಕಾರಿ ಕರ್ತವ್ಯವನ್ನು ನಿರ್ವಹಿಸದೆ ವಿರೋಧವಾಗಿ ನಡೆದುಕೊಳ್ಳುವುದಾದರೆ ಸರ್ಕಾರ ಕೈಕಟ್ಟಿಕೊಂಡು ಕುಳಿತುಕೊಳ್ಳುವುದಿಲ್ಲ. ಅದನ್ನು ಅವರು ಗಮನಿಸಬೇಕು ಎಂಬುದನ್ನು ಈ ಸಮಯದಲ್ಲಿ ಹೇಳಲು ಅಪೇಕ್ಷೆ ಪಡುತ್ತೇನೆ. ಇನ್ನೂ ಕೆಲವು ಸ್ನೇಹಿತರು ಮಾತನಾಡುತ್ತಾ ಹೇಳಿದರು ; ಅವರೆಲ್ಲರಿಗೂ ಸಂಬಳ ಕೊಡತಕ್ಕ ಅಗತ್ಯ ಇಲ್ಲ ಎಂದು ಕಾಣುತ್ತದೆ ಎಂದು ಶ್ರೀಮಾನ್ ಮೈ. ಎಂ. ಚಂದ್ರಶೇಖರಯ್ಯನವರು ಒತ್ತಿ ಒತ್ತಿ ಹೇಳಿದರು. ಲಕ್ಕವಳ್ಳಿ ಪ್ರಾಜೆಕ್ಟಿನಲ್ಲಿ ಆಗಬಾರದ ಕೆಲಸ ಆಗುತ್ತಾ ಇದೆ, ಲಂಚ ರುಷುವತ್ತು ಬಹಳವಾಗಿ ನಡೆಯುತ್ತಾ ಇದೆ, ಅನ್ಯಾಯ ನಡೆಯುತ್ತಾ ಇದೆ ಎಂದು ಅಷ್ಟು ತೀಕ್ಷ್ಣವಾಗಿ ಮಾತನಾಡಿದ್ದರಲ್ಲಿ ಇದುವರೆಗೂ ಅವರು ಏಕೆ ಸುಮ್ಮನಿದ್ದರು ಎಂದು ನನಗೆನ್ನಿಸುತ್ತದೆ. ಸಾಮಾನ್ಯವಾಗಿ ಲಂಚರುಷುವತ್ತು ಎನ್ನುವುದು ಯಾವ ಕಡೆ ಇದೆ, ಯಾವ ಕಡೆ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಕೊಡುವವರೂ ಇದ್ದಾರೆ, ತೆಗೆದುಕೊಳ್ಳುವವರೂ ಇದ್ದಾರೆ. ಕೊಡುವುದು ಕಡಮೆ ಆದರೆ, ತೆಗೆದುಕೊಳ್ಳುವುದು ಕಡಮೆ ಆಗುತ್ತದೆ. ಆಗಬಾರದ ಕೆಲಸ ಮಾಡಿಸಿಕೊಳ್ಳುವುದಕ್ಕೆ ಲಂಚ ಕೊಡು

ವುದಕ್ಕೆ ಸಿದ್ಧವಾಗಿರುತ್ತಾರೆ. ಆದ್ದರಿಂದ ಇದನ್ನು ಉಪಾಯವಾಗಿ ನಿಲ್ಲಿಸಬೇಕಾದದ್ದು ಅಗತ್ಯ. ಸರ್ಕಾರದವರ ಗಮನಕ್ಕೆ ಅನೇಕ ಸಂದರ್ಭಗಳು ಬರುತ್ತಿವೆ. ಅನೇಕ ಸಂದರ್ಭಗಳಲ್ಲಿ ಶಿಕ್ಷೆ ಕೊಡುತ್ತಾ ಇದ್ದಾರೆ. ಶ್ರೀಮಾನ್ ವೈ. ಎಂ. ಚಂದ್ರಶೇಖರಯ್ಯನವರು ಲಕ್ಕವಳ್ಳಿಯಲ್ಲಿ ನಡೆಯುತ್ತಾ ಇರತಕ್ಕ ಲಂಚರುಷುವತ್ತು ಅಥವಾ ಅನ್ಯಾಯ ಏನು ಆಗುತ್ತಾ ಇದೆ ಅದನ್ನು ನನ್ನ ಗಮನಕ್ಕೆ ತಂದರೆ ನಾನು ಅದಕ್ಕೆ ತಕ್ಕ ವ್ಯವಸ್ಥೆ ಮಾಡಿ ಅಂಥ ಅನ್ಯಾಯ ನಡೆಯದ ಹಾಗೆ ನೋಡಿಕೊಳ್ಳುತ್ತೇನೆ. ಈ ಸ್ಥಾನದಲ್ಲಿ ಇರುವ ತನಕ ಈ 20 ದಿವಸದಲ್ಲಿ ನನ್ನ ಗಮನಕ್ಕೆ ತಂದರೆ ಕೈಲಾದ ಪ್ರಯತ್ನ ಮಾಡಿ ಅನ್ಯಾಯ ಪರಿಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂಬ ಭರವಸೆಯನ್ನು ಅವರಿಗೆ ಕೊಡುತ್ತೇನೆ.

ಇನ್ನು ಸ್ಕೂಲುಗಳಿಗೆ 4-6 ತಿಂಗಳುಗಳ ರಜ ಕೊಟ್ಟಿದ್ದಾರೆ ಎನ್ನುವುದು ನಿಜವಾದ ವಿಚಾರ. ಈ ವರ್ಷ, ಯತ್ನವಿಲ್ಲದೆ ಹಾಗೆ ಮಾಡಬೇಕಾಯಿತು. ಮುಂದಿನ ವರ್ಷ ಹೀಗೆ ಆಗುವುದಿಲ್ಲ. ಏಕೆಂದರೆ ಸ್ಕೂಲು ಯಾವಾಗ ಮುಗಿಯಬೇಕು ಎನ್ನುವುದನ್ನು ನಿರ್ಧಾರ ಮಾಡಲಾಗಿದೆ. ಜನವರಿ 31ನೇ ತಾರೀಖು ಇದ್ದದ್ದು ಈಗ ಬೇರೆ ಆಯಿತು. ಜೂನ್ ತಿಂಗಳಿನಲ್ಲಿ ಪ್ರಾರಂಭವಾಗಬೇಕೆಂದು ಆಗಿದೆ. ಈ ವರ್ಷ ಅದನ್ನು ಜಾರಿಗೆ ಕೊಡುವುದರಿಂದ ಮುಂದಿನ ವರ್ಷದಿಂದ ಸರಿ ಹೋಗುತ್ತದೆ. ಕಾಲ ಬದಲಾವಣೆಯ ದೆಶೆಯಿಂದ ಹೀಗೆ ಸ್ವಲ್ಪ ಹೆಚ್ಚಿನ ರಜಾಕ್ಕೆ ಅವಕಾಶವಾಯಿತು ಎಂದು ನಾನು ಅದಕ್ಕೆ ವಿವರಣೆ ಕೊಡುವುದಕ್ಕೆ ಸಿದ್ಧವಾಗಿದ್ದೇನೆ.

6 P.M.

ಉತ್ತರ ಕರ್ಣಾಟಕದಿಂದ ಬಂದಿರುವ ನಮ್ಮ ಸ್ನೇಹಿತರು ಮುಖ್ಯವಾಗಿ ರಸ್ತೆಗಳ ನಿರ್ಮಾಣ ಮತ್ತು ನದಿಗಳ ನೀರನ್ನು ಉಪಯೋಗಿಸುವುದು ಈ ಕಡೆಗೆ ಹೆಚ್ಚಾಗಿ ಗಮನ ಕೊಡಬೇಕೆಂದು ಹೇಳಿದರು. ಅವರ ಸಲಹೆ ಬಹಳ ಸೂಕ್ತವಾದುದು. ಆ ವಿಚಾರದಲ್ಲಿ ಸರ್ಕಾರದವರು ಗಮನ ಕೊಟ್ಟಿದ್ದಾರೆ. ಉತ್ತರ ಕರ್ಣಾಟಕದಲ್ಲೂ ರಸ್ತೆ ಕೆಲಸ, ಸೇತುವೆ ಕೆಲಸ ಮಾಡಿದ್ದೇವೆ. ದೊಡ್ಡ ದೊಡ್ಡ ಕೆಲಸವೇನಿದೆಯೋ ಹೆಚ್ಚಾಗಿ ಖರ್ಚು ಮಾಡಬೇಕಾದ ಕಾರ್ಯವೇನಿದೆಯೋ ಅದನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಆದರೆ ದುರದೃಷ್ಟವಶಾತ್ ಬೊಂಬಾಯಿ ಸಂಸ್ಥಾನದಲ್ಲಿ ಅವರು ಸೇರಿದ್ದಾಗ ಈ ಬಗ್ಗೆ ಸಾಕಷ್ಟು ಹಣವನ್ನು ಅಲ್ಲಿನ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿರಲಿಲ್ಲ. ಆದ್ದರಿಂದ ಈಗ ಹೆಚ್ಚು ಹಣ ಒದಗಿಸಿ ಹೆಚ್ಚು ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ; ಹಳೆಯ ಮೈಸೂರು ಸಂಸ್ಥಾನದಲ್ಲಿ ಯಾವ ಕಾರ್ಯ ಮಾಡಬೇಕೆಂದು ಹಣ ಒದಗಿಸಿತ್ತೋ ಅದರಲ್ಲಿ ಸ್ವಲ್ಪಭಾಗ ತೆಗೆದು ಬಾಕಿ ಕಡೆ ಖರ್ಚು ಮಾಡದಿದ್ದರೆ ಈಗ ಸಾಧ್ಯವೇ ಇಲ್ಲ. ಆದುದರಿಂದ ಇದನ್ನು ಇಂಡಿಯಾ ಸರ್ಕಾರದ ಗಮನಕ್ಕೆ ತಂದು ಉತ್ತರ ಕರ್ಣಾಟಕ ಮತ್ತು ಹೈದರಾಬಾದು ಕರ್ಣಾಟಕ ಪ್ರಾಂತಗಳಲ್ಲಿ ಮುಖ್ಯವಾಗಿ ರಸ್ತೆ ಮತ್ತು ಸೇತುವೆಗಳೇನು ಆಗಬೇಕೋ ಅವಕ್ಕೆ ಭಾರಿ ಮೊಬಲಗು ಖರ್ಚಾಗುವುದರಿಂದ ಆ ವಿಚಾರವನ್ನು ಪುನರ್ವಿಮರ್ಶೆ ಮಾಡಿ ಹೆಚ್ಚು ಮೊಬಲಗು ಕೊಡುವಂತೆ ಕೇಳಬೇಕೆಂದಿದೆ. ಇದರ ಜೊತೆಗೆ ಯಾವ ಬಾಬಿನಲ್ಲಿ ಹಣವನ್ನು ಉಳಿತಾಯ ಮಾಡಬಹುದೋ ನೋಡಿ ಅದನ್ನು ಬೇಕಾದ ರಸ್ತೆ ದುರಸ್ತಿಗೆ, ಸೇತುವೆ ವಗೈರೆ ಕಟ್ಟಿಸುವುದಕ್ಕೆ ಉಪಯೋಗಿಸಲು ಸರ್ಕಾರ ಪ್ರಯತ್ನ ಮಾಡುತ್ತದೆ. ನದಿಗಳ ನೀರನ್ನು ಉಪಯೋಗಿಸುವುದಕ್ಕೂ ಪ್ರಯತ್ನ ಮಾಡುತ್ತಿದೆ. ಕಾಳಿನದಿ ನೀರಿನಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವುದು, ಮಲಪ್ರಭ ಮತ್ತು ಘಟಪ್ರಭ ಕಾರ್ಯಗಳು ಮುಂತಾದ ಕೆಲಸ ನಡೆಯುತ್ತಿದೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚು ಕೆಲಸ ಮಾಡುವುದಕ್ಕೆ ಅವಕಾಶವಿದೆ, ಆಗ ಮಾಡುವುದರಲ್ಲಿ ಸಂದೇಹವಿಲ್ಲ.

ಆಮೇಲೆ ಶ್ರೀ ಅಂಬಾದಾಸ್ ಅವರು ಕೆಲವು ಮಾತುಗಳನ್ನು ಹೇಳಿದರು. ವೈಯಕ್ತಿಕವಾಗಿ ಅದು ನನಗೆ ಸಂಬಂಧಪಟ್ಟಿಲ್ಲದಿದ್ದರೂ ಅವರು ಶ್ರೀ ಚೆನ್ನಿಗರಾಮಯ್ಯನವರ ವಿಷಯವನ್ನೆತ್ತಿ ಒಬ್ಬ ವ್ಯಕ್ತಿಯ ವಿಚಾರವಾಗಿ ಮಾತನಾಡಿದರು. ಆದರೆ ಅದರ ಸೂಕ್ತಾಸೂಕ್ತತೆಯನ್ನು ಅವರು ವಿಮರ್ಶೆ ಮಾಡಬೇಕು.

ಇನ್ನು ಕೆಲವು ವಿವರಗಳನ್ನು ಹೇಳಿದ್ದಾರೆ. ಉಪಾಧ್ಯಾಯರ ಸಂಬಳದ ವಿಚಾರ ಮತ್ತು ಟೆಕ್ನಿಕಲ್ ವಿದ್ಯಾಭ್ಯಾಸದ ವಿಚಾರ ಪ್ರಸ್ತಾಪಿಸಿ ಅದನ್ನು ಹೆಚ್ಚು ಮಾಡಬೇಕೆಂದೂ, ವೆಟರ್ನರಿ ಕಾಲೇಜು ವಿದ್ಯಾರ್ಥಿಗಳ ಕಡೆ ಗಮನ ಕೊಡಬೇಕೆಂದೂ ಸೂಚಿಸಿದ್ದಾರೆ. ಈ ವಿಷಯ ಸರ್ಕಾರದ ಗಮನದಲ್ಲಿದೆ, ಸೂಕ್ತ ಕ್ರಮ ಕೈಕೊಂಡಿದ್ದಾರೆ. ವೆಟರ್ನರಿ ಕಾಲೇಜನ್ನು ಬೆಂಗಳೂರು ಅಥವಾ ಧಾರವಾಡ ಈ ಎರಡು ಕಡೆಗಳಲ್ಲಿ ಒಂದು ಕಡೆ ಮಾತ್ರ ಸ್ಥಾಪಿಸಬೇಕು. ಅದಕ್ಕೆ ಎಲ್ಲೆಲ್ಲಿ ಏನೇನು ಸೌಲಭ್ಯ ಇದೆಯೆಂಬುವನ್ನು ಎರಡು ಕಡೆಗಳಲ್ಲೂ ಪರಿಶೀಲಿಸಿ ಅನುಕೂಲ ಹೆಚ್ಚಾಗಿರುವ ಕಡೆ ಸ್ಥಾಪಿಸುವುದಾಗಿ ಭರವಸೆ ಕೊಡುತ್ತೇನೆ.

ಬಾಕಿ ಅಂಶಗಳಿಗೆ ಶ್ರೀ ರುದ್ರಪ್ಪನವರು ಹೇಳಿರುವ ಉತ್ತರ ಸಾಕೆಂದು ಕಾಣುತ್ತದೆ. ಮತ್ತೊಮ್ಮೆ ವಿರೋಧಪಕ್ಷದವರು ದೇಶದ ಹಿತದೃಷ್ಟಿಯಿಂದ ಟೀಕೆಯೇನು ಮಾಡಿದ್ದಾರೋ ಅದನ್ನು ಸ್ವಾಗತಿಸುತ್ತೇನೆ. ಇದುವರೆಗೆ ಈ ಐದು ವರ್ಷಗಳ ಕಾಲದಲ್ಲಿ ಈ ಸಭೆ ಸರ್ಕಾರಕ್ಕೆ ಅಮೂಲ್ಯವಾದ ಸಲಹೆಗಳನ್ನು ಕೊಟ್ಟು ರಾಜ್ಯದ ವ್ಯವಹಾರ ಸುಲಲಿತವಾಗಿ ನಡೆಯುವಂತೆ ಮಾಡಿದ ಸಹಾಯಕ್ಕಾಗಿ ಸರ್ಕಾರದ ಪರವಾಗಿ ಮತ್ತು ವೈಯಕ್ತಿಕವಾಗಿ ನನ್ನ ಪರವಾಗಿ ವಂದನೆಗಳನ್ನರ್ಪಿಸುತ್ತೇನೆ. ಇಷ್ಟು ಮಾತನ್ನು ಹೇಳಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

Mr. SPEAKER.—Before I put the Motion and amendments to the House, I would like to inform that in all 19 members have taken part in the debate today. I think it is fairly a good number of members having taken part in the debate. As many of the Hon'ble Members are going to retire shortly and they will not be available in the House, I tried to give them a chance as far as possible.

I shall now put the amendments to the House.

The question is :

" Add the following at the end of the Address :

'but regret that during the past five years the Congress

(MR. SPEAKER.)

Ministry failed to solve the question of unemployment amongst both educated and uneducated, to check soaring food prices, to overcome housing shortage and their oft-repeated declaration of Socialistic Pattern of Society ended in mere publicity'."

The motion was negatived.

MR. SPEAKER.—The question is :

" Add the following at the end of the Address :

'but the promulgation of the Ordinance of 1957 suspending the working of the Tenancy legislation is the most regrettable thing ;

'but regret that the reference to the pay scales of Government employees is very unsatisfactory and disappointing ;

'but regret that the reference to the appointment of Primary School Teachers is incorrect '."

The motion was negatived.

MR. SPEAKER.—The question is :

" Add the following at the end of the Address :

'but regret that the Government have failed to mention :

(*a*) the acute unemployment problem in the State ;

(*b*) the acute shortage of food bordering on famine conditions in the State ;

(*c*) the unwillingness of the Government to pursue radical land reforms policy in the State ;

(*d*) the increasing corruption in administration of the State ;

(*e*) the utter dissatisfaction of the Government servants regarding the revised pay scales ;

(*f*) the unsatisfactory way in which the elections were conducted in the State which were far from being free and fair.' "

The motion was negatived.

MR. SPEAKER.—I will now put the Motion to the House. The question is :

" We, the members of the Mysore Legislative Assembly assembled in this Session beg leave to thank the Governor for the Address delivered to the members of the Legislature on the 18th March 1957."

The motion was adopted.

MR. SPEAKER.—Now the House will rise and meet at 12 NOON tomorrow.

The House adjourned at Ten Minutes past Six of the Clock to meet again at Twelve of the Clock on Wednesday, the 20th March 1957.